ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೧೨
ವಿಚಾರ ಸಾಹಿತ್ಯಮಾಲೆ – ೩೩
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಹಿಂದೂ ಆದರ್ಶಗಳು

ಭವನದ ಗ್ರಂಥ ವಿಶ್ವವಿದ್ಯಾನಿಲಯ

ಹಿಂದೂ ಆದರ್ಶಗಳು

ಆ ನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧

ಮೂಲ
ಕೆ. ಬಾಲಸುಬ್ರಹ್ಮಣ್ಯ ಐಯ್ಯರ್
ಅನುವಾದ
ಪ್ರೊ. ಟಿ. ಎಸ್. ವೆಂಕಣ್ಣಯ್ಯ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Hindu Adarshagalu : Kannda translation of *Hindu Ideals* by **K. Balasubramania Iyer;** Kannda translation by **Prof. T.S. Venkannaiah;** Editor-in-Chief: **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharathiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxviii + 112 ; Price: Rs. 10/-

ಮುದ್ರಣ : ೨೦೧೦
ಪುಟಗಳು : xxviii + ೧೧೨
ಬೆಲೆ : ರೂ. ೧೦/–

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

ಗೋವಿಂದ ಎಂ. ಕಾರಜೋಳ

ಕರ್ನಾಟಕ ಸರ್ಕಾರ

ರಮೇಶ್ ಬಿ.ಝಳಕಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

ಮನು ಬಳಿಗಾರ್
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,

ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ-ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ-ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ-ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ

ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೧೧-೦೯-೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯-೦೮-೨೦೦೯ರ ಬೆಳಗ್ಗೆ ೧೧-೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ-ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ-ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ

ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) ಪ್ರಕಟಣೆಗಳು :

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ

ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರ ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ.ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀ ಪ್ರೊ. ಟಿ.ಎಸ್. ವೆಂಕಣ್ಣಯ್ಯ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎನ್.ಎಸ್. ಶಾರದಾಪ್ರಸಾದ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಹಿಂದೂ ಆದರ್ಶಗಳು' ಎಂಬ ಪುಸ್ತಕ ಖ್ಯಾತ ಲೇಖಕರಾದ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ	**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು	ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಭಾರತೀಯ ವಿದ್ಯಾಭವನ, ಕರ್ನಾಟಕ	ಪ್ರಧಾನ ಸಂಪಾದಕ

ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

ಭಾರತೀಯ ವಿದ್ಯಾಭವನ
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

ಸಾಮಾನ್ಯ ಸಂಪಾದಕರ ಮುನ್ನುಡಿ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು, ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಿಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಲಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗಳಿಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ ಇನ್ಯಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ ಈ ಮಾಲಿಕೆಯಲ್ಲಿ ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು

ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನು ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಅಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ, ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಹೆಚ್.ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

೧. ಕ್ವೀನ್ ವಿಕ್ಟೋರಿಯಾ ರೋಡ್
ನವದೆಹಲಿ **ಕೆ. ಎಂ. ಮುನ್ಷಿ**
೩. ಅಕ್ಟೋಬರ್, ೧೯೫೧

ಮುನ್ನುಡಿ

ಕೆ. ಕೃಷ್ಣಸ್ವಾಮಿರಾವ್ ದತ್ತಿ ಮತ್ತು ಎಲ್. ವೆಂಕಟರತ್ನಂ ದತ್ತಿಯ ಎರಡು ಪ್ರತಿಷ್ಠಾನಗಳ ಆಶ್ರಯದಲ್ಲಿ ತಾವು ನೀಡಿದ 'ಹಿಂದೂ ಆದರ್ಶ'ಗಳ ಮೇಲಣ ವಿಶ್ವವಿದ್ಯಾನಿಲಯದ ಉಪನ್ಯಾಸಗಳನ್ನೊಳಗೊಂಡ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯುವಂತೆ ನನ್ನ ಗೌರವಾನ್ವಿತ ಮಿತ್ರರಾದ ಶ್ರೀ ಕೆ. ಬಾಲಸುಬ್ರಹ್ಮಣ್ಯ ಐಯ್ಯರ್‌ರವರು ಕೇಳಿಕೊಂಡಿದ್ದಾರೆ. ಬಹುಸಂಖ್ಯೆಯ ಶ್ರೋತೃಗಳು ಏಕಾಗ್ರಚಿತ್ತದಿಂದ ಆಲಿಸಿದ ಈ ಉಪನ್ಯಾಸಗಳಲ್ಲಿ ಹಾಜರಿರುವ ಸದವಕಾಶ ನನ್ನದಾಗಿತ್ತು, ಮತ್ತು ಪ್ರಕಟಣೆಯ ಹಂತದಲ್ಲಿರುವ ಗ್ರಂಥದಲ್ಲಿನ ಇವುಗಳನ್ನು ಮತ್ತೊಮ್ಮೆ ಪರಿಶೀಲಿಸುವ ಅವಕಾಶ ನನಗೆ ಒದಗಿರುವುದಕ್ಕಾಗಿ ನಾನು ಸಂತೋಷಗೊಂಡಿದ್ದೇನೆ.

ಹಿಂದೂ ಆದರ್ಶಗಳ ಸ್ಪಷ್ಟವಾದ ಪ್ರತಿಪಾದನೆಯಲ್ಲಿ ಶ್ರೀ ಕೆ. ಬಾಲಸುಬ್ರಹ್ಮಣ್ಯ ಐಯ್ಯರ್‌ರವರು ಬಾಳಿನಲ್ಲಿ ಮನುಷ್ಯನ ಗುರಿಗಳು ಮತ್ತು ಉದ್ದೇಶಗಳನ್ನು ಕುರಿತಂತೆ ವಿವರಿಸಿದ್ದಾರೆ. ಅವರು ಹಿಂದೂ ಶಾಸ್ತ್ರ ಗ್ರಂಥಗಳ ಆಳವಾದ ಪರಿಶೋಧನೆ ನಡೆಸಿದ್ದಾರೆ ಮತ್ತು ಇತರ ಧಾರ್ಮಿಕ ಮೂಲಗಳಿಂದ ಚಿಂತನೆಗಳ ತುಲನಾತ್ಮಕ ಅಧ್ಯಯನವನ್ನೂ ಮಾಡಿದ್ದಾರೆ. ಇಂಥ ಸಮಯದಲ್ಲಿ ಈ ಗ್ರಂಥವು ಪ್ರಕಟವಾಗುತ್ತಲಿರುವುದು ಅತ್ಯಂತ ಸಮಯೋಚಿತವಾಗಿದೆಯೆಂದು ನಾನು ಭಾವಿಸುತ್ತೇನೆ ಮತ್ತು ಈ ಪ್ರಕಟಣೆಯು ವ್ಯಾಪಕವಾಗಿ ಓದಲಾಗುತ್ತಿರುವ ಮತ್ತು ಮೆಚ್ಚಿಕೆಗೊಳಗಾಗಿರುವ ಭವನದ ಗ್ರಂಥ ವಿಶ್ವವಿದ್ಯಾನಿಲಯ ಸರಣಿಯದಾಗಿರುವುದು ನನಗೆ ಸಂತೋಷ ತಂದಿದೆ.

ಭಾರತೀಯ ಜೀವನದ ಆದರ್ಶಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳು, ಉಪನಿಷತ್ತುಗಳು ಮತ್ತು ಮಹಾಭಾರತದಂತಹ ಹಿಂದೂ ಶಾಸ್ತ್ರಗ್ರಂಥಗಳ ವಿಪುಲವಾದ ಉದ್ಧರಣಗಳೊಂದಿಗೆ ವಿಸ್ತಾರವಾಗಿ ನಿರೂಪಿತವಾಗಿವೆ. 'ಭಾವೋದ್ರೇಕ ಅಥವಾ ಸೇವೆಯಿಂದಲಾಗಲಿ, ಜೀವನಕ್ಕೋಸ್ಕರವೇ ಆಗಲಿ ವ್ಯಕ್ತಿಯೋರ್ವನು ಎಂದಿಗೂ ಧರ್ಮವನ್ನು ತೊರೆಯಬಾರದು. ಧರ್ಮ ಚಿರಂತನವಾದುದು. ಸುಖ ಮತ್ತು ದುಃಖ ಕ್ಷಣಿಕವಾದುವು. ಆತ್ಮ ಶಾಶ್ವತವಾದುದು. ಅದನ್ನು ಆವರಿಸಿರುವುದು ಮಾತ್ರ ಶಾಶ್ವತವಲ್ಲ.

ಹಿಂದೂ ಆದರ್ಶವಾದ ಕರ್ತವ್ಯವು ಭಗವದ್ಗೀತೆ ಮತ್ತು ಇತರ ಬರಹಗಳ ಉದ್ಧರಣಗಳ ಮೂಲಕ ಉತ್ತಮವಾಗಿ ಪ್ರತಿಪಾದಿತವಾಗಿದೆ. ಕರ್ತವ್ಯದ ಮಾರ್ಗ ಪುಣ್ಯದ ಮಾರ್ಗದತ್ತ ಕರೆದೊಯ್ಯುತ್ತದೆ ಎಂದು ಸೂಕ್ತ ರೀತಿಯಲ್ಲಿ ತಿಳಿಸಲಾಗಿದೆ. ಮತ್ತು ಕವಿಯು ಕರ್ತವ್ಯವನ್ನು ಹೀಗೆ ಸಂಬೋಧಿಸುತ್ತಾರೆ.

"ಭಗವದ್ವಾಣಿಯ ನಿಷ್ಠುರಪುತ್ರಿ ಓ ಕರ್ತವ್ಯಳೇ, ಪ್ರಿಯವಾಗಿಹುದೇ ನಿನಗೀ ಹೆಸರು!"

ಉಪನ್ಯಾಸಗಳ ಅಂತಿಮ ಭಾಗಗಳಲ್ಲಿ ಶ್ರೀ ಕೆ. ಬಾಲಸುಬ್ರಹ್ಮಣ್ಯ ಐಯ್ಯರ್‌ರವರು ನಮ್ಮ ಕೆಲವಾರು ಜನ ಸಂತರು ಮತ್ತು ಋಷಿಗಳನ್ನು ಉಲ್ಲೇಖಿಸಿದ್ದಾರೆ.

ಶ್ರೀ ರಾಮಕೃಷ್ಣ ಪರಮಹಂಸರು ಹೇಳಿದ ಮಾತಿದು: 'ಎಲ್ಲಿಂದಲೇ ಅವು ಹುಟ್ಟಿಬಂದಿರಲಿ ಮತ್ತು ಯಾವುದೇ ಮಾರ್ಗದಲ್ಲಿ ಅವು ಹರಿಯಲಿ, ನದಿಗಳು ಹೇಗೆ ಅಂತಿಮವಾಗಿ ಸಮುದ್ರವನ್ನು ಸೇರುತ್ತವೆಯೋ ಅದೇ ರೀತಿಯಲ್ಲಿ ಸರಿಯಾದ ಮನೋಭಾವದಿಂದ ಆಚರಿಸಿದ ಎಲ್ಲ ಧರ್ಮಗಳೂ ವ್ಯಕ್ತಿಯೊಬ್ಬನನ್ನು ಅಂತಿಮವಾಗಿ ಆನಂದದ ಸಾಗರಕ್ಕೆ ಕೊಂಡೊಯ್ಯುತ್ತವೆ.'

ಸೂಕ್ತ ಉಲ್ಲೇಖಗಳಿಂದ ಈ ಗ್ರಂಥದಲ್ಲಿ ನೈಜತೆಯೊಡನೆ ಪ್ರತಿಪಾದಿತವಾಗಿರುವ ಹಿಂದೂ ಜೀವನಾದರ್ಶವು ಪ್ರಸಕ್ತ ಪ್ರಪಂಚದಲ್ಲಿ ಕ್ಷೋಭೆಗೊಂಡಿರುವ ಜೀವಿಗಳಿಗೆ ನೆಮ್ಮದಿಯನ್ನುಂಟುಮಾಡುವುದಾಗಿದೆ. ಪುಸ್ತಕವನ್ನು ಪರಿಶೀಲಿಸುವ ಎಲ್ಲರಿಗೂ ಉತ್ತಮವಾಗಿ ದಾಖಲಿತಗೊಂಡಿರುವ ಮತ್ತು ಸಮರ್ಪಕ ಪ್ರತಿಪಾದನೆಯುಳ್ಳ ಪುಟಗಳ ಮೂಲಕ ಈ ಗ್ರಂಥವು ಜ್ಞಾನೋದಯದ ಮತ್ತು ಸ್ಫೂರ್ತಿಯ ಮೂಲವಾಗಿ ಉಪಕರಿಸುವುದೆಂಬುದು ನನ್ನ ಭರವಸೆ ಮತ್ತು ನಂಬಿಕೆ.

ಕೆನ್ಸಿಂಗ್ಟನ್, ಕಿಲ್ಪಾಕ್, ಮದರಾಸ್ **ಎ. ಎಲ್. ಮೊದಲಿಯಾರ್**
ಆಗಸ್ಟ್ ೧೦, ೧೯೬೬

ಮೂಲ ಲೇಖಕರ ನುಡಿ

ಹಲವು ವರ್ಷಗಳ ಹಿಂದೆ ಮದರಾಸ್ ವಿಶ್ವವಿದ್ಯಾನಿಲಯ ಎರಡು ದತ್ತಿಗಳ, ಅಂದರೆ ಕೆ. ಕೃಷ್ಣಸ್ವಾಮಿರಾವ್‌ದತ್ತಿ ಮತ್ತು ಎಲ್. ವೆಂಕಟರತ್ನಂ ದತ್ತಿಯ ಆಶ್ರಯದಲ್ಲಿ ನಾನು ನೀಡಿದ ಉಪನ್ಯಾಸಸರಣಿಯನ್ನು ಈ ಗ್ರಂಥ ಒಳಗೊಂಡಿದೆ. ಈ ದತ್ತಿಗಳ ನಿಯಮಾನುಸಾರವಾಗಿ ಉಪನ್ಯಾಸಗಳು ನಮ್ಮ ಹಿಂದೂ ಶಾಸ್ತ್ರಗ್ರಂಥಗಳು ಮತ್ತು ಮೇರುಕೃತಿಗಳ ಅಧ್ಯಯನಕ್ಕೆ ಸಂಬಂಧಪಟ್ಟವಾಗಿರಬೇಕು. ಉಪನ್ಯಾಸಗಳ ಮೊದಲ ಸರಣಿ 'ಹಿಂದೂ ಚಿಂತನೆಯ ಪ್ರಕಾರ ಮನುಷ್ಯನ ಮೂಲಭೂತ ಹೆಬ್ಬಯಕೆ'ಗಳನ್ನು ಕುರಿತವಾಗಿದ್ದುವು. ಎರಡನೆಯದು ನಮ್ಮ ಧಾರ್ಮಿಕ ಸಾಹಿತ್ಯದಲ್ಲಿ ಸಾಕಾರಗೊಂಡಿರುವ 'ಮಾನವೀಯ ಆದರ್ಶ'ಗಳಿಗೆ ಸಂಬಂಧಿಸಿತ್ತು. ಅವು ಈಗ 'ಹಿಂದೂ ಆದರ್ಶಗಳು' ಎಂಬ ಸಾಮಾನ್ಯ ಶೀರ್ಷಿಕೆಯ ಅಡಿಯಲ್ಲಿ ಪ್ರಕಟಗೊಳ್ಳುತ್ತಿವೆ.

ಗ್ರಂಥದ ಮೊದಲನೆಯ ಭಾಗ ಪುರುಷಾರ್ಥಗಳ ಕಲ್ಪನೆ ಅಥವಾ ಜೀವನದಲ್ಲಿ ಮನುಷ್ಯನ ಗುರಿಗಳು ಮತ್ತು ಉದ್ದೇಶಗಳನ್ನು ಕುರಿತದ್ದಾಗಿದೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೇ ಆ ಪುರುಷಾರ್ಥಗಳು. ಮನುಷ್ಯನ ಎಲ್ಲ ಗುರಿಗಳು ಮತ್ತು ಹೆಬ್ಬಯಕೆಗಳು ಈ ನಾಲ್ಕು ಪದಗಳಲ್ಲಿ ಅಂತರ್ಗತಗೊಂಡಿವೆ. ಅವುಗಳ ಸರಣಿಯ ಕ್ರಮವೂ ವಿಶೇಷ ಮಹತ್ತ್ವವನ್ನು ಪಡೆದಿದೆ. ಧರ್ಮವು ಜೀವನದ ಪ್ರಧಾನ ನಿಯಮವಾಗಿದ್ದರೆ ಮೋಕ್ಷವು ಅಂತಿಮ ಗುರಿಯಾಗಿದೆ. ಜೀವನದಲ್ಲಿ ಪ್ರತಿಯೊಬ್ಬ ಮನುಷ್ಯನ ಸ್ವಾಭಾವಿಕ ಹೆಬ್ಬಯಕೆಗಳಾಗಿರುವ ಅರ್ಥ ಮತ್ತು ಕಾಮಗಳು ಇವುಗಳ ನಡುವೆ ಇವೆ. ಅವು ಪ್ರಾಪಂಚಿಕ ಏಳಿಗೆಯನ್ನು ಪಡೆದುಕೊಳ್ಳುವ ಸಾಧನ ಮತ್ತು ಬಾಳಿನ ಮುಗ್ಧ ಇಂದ್ರಿಯಭೋಗಗಳನ್ನು ಅನುಭವಿಸುವುದನ್ನು ಸೂಚಿಸುತ್ತವೆ. ಧರ್ಮವನ್ನು ಪ್ರಧಾನ ನಿಯಮವಾಗಿ ಮೊದಲ ಸ್ಥಾನದಲ್ಲಿ ಇರಿಸಲಾಗಿ ಅರ್ಥಕಾಮಗಳೆರಡೂ ಧರ್ಮಕ್ಕೆ ಅಧೀನವಾಗಿರಲೇಬೇಕು. ಅದೇ ರೀತಿಯಲ್ಲಿ ಧರ್ಮಕ್ಕೆ ವಿರುದ್ಧವಾಗಿರುವ ಯಾವುದೇ ಸುಖಾನುಭವವನ್ನು ಬಯಸುವಂತಿಲ್ಲ. ಗೀತೆಯಲ್ಲಿ ಪರಮಾತ್ಮ 'ಧರ್ಮಾವಿರುದ್ಧಃ ಕಾಮೋಸ್ಮಿ' ಎಂದು ಹೇಳಿದ್ದಾನೆ – 'ನಾನು ಧರ್ಮಕ್ಕೆ ವಿರುದ್ಧವಲ್ಲದ ಕಾಮವಾಗಿದ್ದೇನೆ.'

ಜೀವನದ ಸೌಖ್ಯಗಳು ಮತ್ತು ಆನಂದಗಳನ್ನು ಅನುಭವಿಸಲು ಅರ್ಥ ಮನುಷ್ಯನಿಗೆ ಅನುಕೂಲ ಮಾಡಿಕೊಡುವುದರಿಂದ ಅದನ್ನು ಕಾಮಕ್ಕಿಂತಲೂ ಮುಂಚಿತವಾಗಿ ಇರಿಸಲಾಗಿದೆ ಮತ್ತು ಈ ಪುರುಷಾರ್ಥಗಳಿಗೆ ಸಂಬಂಧಪಟ್ಟಂತೆ ಮೂಲಭೂತ ಅಭಿಪ್ರಾಯಗಳಲ್ಲಿ ಒಂದೆಂದರೆ ಧರ್ಮವೇ ಅರ್ಥ ಮತ್ತು ಕಾಮಗಳ ನ್ಯಾಯಸಮ್ಮತವಾದ ಉಗಮಸ್ಥಾನ. ಈ ಎಲ್ಲ ಮೂರನ್ನೂ ಅಂತಿಮ ಗುರಿಯಾದ ಮೋಕ್ಷವನ್ನು ನಿರಂತರವಾಗಿ ಮನಸ್ಸಿನಲ್ಲಿರಿಸಿಕೊಂಡೇ ಅನ್ವೇಷಿಸಬೇಕು. ಮೋಕ್ಷವನ್ನು ಸಾಕ್ಷಾತ್ಕರಿಸಿಕೊಳ್ಳುವ ದೃಷ್ಟಿಯಿಂದ ಅರ್ಥಕಾಮಗಳೆರಡನ್ನೂ ತೊರೆಯುವವರ ವಿಷಯದಲ್ಲಿ ವಿನಾಯಿತಿಗಳಿರಬಹುದು. ವ್ಯಕ್ತಿಯೊಬ್ಬನು ಭಗವಂತನಲ್ಲಿ ಆಶ್ರಯವನ್ನು

ಬಯಸಿದಾಗ ಧರ್ಮವನ್ನು ತೊರೆದುಬಿಡಬಹುದು. ಗೀತೆಯ ಕೊನೆಯ ಶ್ಲೋಕ 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂದು ನುಡಿಯುತ್ತದೆ: 'ಎಲ್ಲ ಧರ್ಮಗಳನ್ನೂ ತೊರೆದು ನನ್ನೊಬ್ಬನಲ್ಲಿಯೇ ಆಶ್ರಯವನ್ನು ಹೊಂದು' ಇವು ಕೇವಲ ವಿಶೇಷ ಯೋಗ್ಯತೆಯನ್ನುಳ್ಳ ವ್ಯಕ್ತಿಗಳಿಗೆ ಮಾತ್ರ. ಆದರೆ ಮಾನವಕುಲದ ಸಾಮಾನ್ಯ ವ್ಯಕ್ತಿಗಳಿಗೆ ಈ ನಾಲ್ಕು ಸಹ ತಮ್ಮ ಸರಣಿಯಲ್ಲಿ ಜೀವನದ ನ್ಯಾಯಸಮ್ಮತವಾದ ಆದರ್ಶಗಳು ಮತ್ತು ಉದ್ದೇಶಗಳಾಗಿವೆ. ಈ ಎಲ್ಲ ಮೂಲಭೂತ ಅಭಿಪ್ರಾಯಗಳನ್ನು ಉಪನ್ಯಾಸಗಳ ಮೊದಲ ಸರಣಿಯಲ್ಲಿ ವಿವರಿಸಿ ವಿಸ್ತಾರವಾಗಿ ತಿಳಿಸಲಾಗಿದೆ. ಜೀವನದ ಮೇಲಣ ಭಾರತೀಯ ದೃಷ್ಟಿಕೋನ ಸಂಪೂರ್ಣವಾಗಿ ಪಾರಮಾರ್ಥಿಕವಾದುದು ಮತ್ತು ಜೀವನವನ್ನು ನಿರಾಕರಿಸುವಂತಹುದು ಎಂಬ ತಪ್ಪು ಅಭಿಪ್ರಾಯವನ್ನು ತೊಡೆದುಹಾಕಲು ಪ್ರಯತ್ನಿಸಿದ್ದೇನೆ. ಅನೇಕ ಜನ ಪಾಶ್ಚಿಮಾತ್ಯ ಚಿಂತಕರು ಈ ಅಭಿಪ್ರಾಯಕ್ಕೆ ತಮ್ಮ ಒತ್ತಾಸೆಯನ್ನು ನೀಡಿದ್ದಾರೆ. ಮಹಾತ್ಮಾ ಗಾಂಧಿಯವರಂತಹ ಶ್ರೇಷ್ಠ ವ್ಯಕ್ತಿಗಳ ಜೀವನಗಳು ಈ ಅಭಿಪ್ರಾಯವು ಭಾರತೀಯ ಚಿಂತನೆಗೆ ಸಂಪೂರ್ಣವಾಗಿ ವಿರೋಧಿಯಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷಿಗಳಾಗಿವೆ. ಧರ್ಮದ ಭಾರತೀಯ ಕಲ್ಪನೆ ಒಮ್ಮಗ್ಗುಲಿನ ಮತ್ತು ಇತರರು ಅದನ್ನು ಆಚರಿಸುವುದರ ಮೇಲೆ ಅವಲಂಬಿತವಾಗಿಲ್ಲವೆಂಬುದನ್ನು ಸೂಚಿಸಿದ್ದೇನೆ. ಇದು 'ಪ್ರತಿವ್ರತಾ ಧರ್ಮ' ಮತ್ತು 'ಪುತ್ರಧರ್ಮ' ದಂತಹ ನಮ್ಮ ಕೆಲವೊಂದು ಧಾರ್ಮಿಕ ಆದರ್ಶಗಳ ಬಗ್ಗೆ ಇರುವ ತಪ್ಪು ಅಭಿಪ್ರಾಯಗಳ ದೋಷವನ್ನು ಪರಿಹರಿಸಲು ಸಮರ್ಥವಾಗಿವೆ.

ಮುಂದಿನ ಸರಣಿಯಲ್ಲಿ ಹಿಂದೂ ಕಲ್ಪನೆಗಳಿಗನುಗುಣವಾಗಿ ಪ್ರೀತಿ ಮತ್ತು ಮಾನವಕುಲದ ಸೇವೆ ಧಾರ್ಮಿಕ ಜೀವನದ ಮೂಲಾಧಾರ ನಿಯಮಗಳೆಂದು ತೋರಿಸಲು ಪ್ರಯತ್ನಿಸಿದ್ದೇನೆ. ಭಗವಂತನ ಸಾಕ್ಷಾತ್ಕಾರದತ್ತ ವ್ಯಕ್ತಿಯೊಬ್ಬನನ್ನು ಕೊಂಡೊಯ್ಯಲು ಅವು ಅವಶ್ಯಕವಾಗಿವೆ. ಶ್ರೇಷ್ಠರಾದ ಸಂತರು ಮತ್ತು ಸಾಕ್ಷಾತ್ಕಾರ ಪಡೆದ ವ್ಯಕ್ತಿಗಳು ಮಾನವಕುಲದೆಡೆಗೆ ಉಕ್ಕಿ ಹರಿಯುವ ಪ್ರೀತಿಯ ವೈಶಿಷ್ಟ್ಯವನ್ನೂ ಮತ್ತು ತಮ್ಮ ಸಹಮಾನವರಿಗೆ ನಿಸ್ವಾರ್ಥಸೇವೆಯನ್ನೂ ಸುಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಮಹಾತ್ಮಾ ಗಾಂಧಿ, ಅರವಿಂದಘೋಷ್ ಮತ್ತು ಇತರ ಶ್ರೇಷ್ಠ ಋಷಿಗಳು ಮತ್ತು ಚಿಂತಕರು ಸುಸ್ಪಷ್ಟವಾದ ಮಾತುಗಳಲ್ಲಿ ವ್ಯಕ್ತಿಯೊಬ್ಬನ ಭ್ರಾತೃಪ್ರೇಮ ಭಗವಂತನ ಪ್ರೀತಿಗೆ ಸರಿಸಮಾನವಾದುದೆಂದು ಘೋಷಿಸಿದ್ದಾರೆ. ಮಾನವ ಪರಿಸರ ಮತ್ತು ಚಟುವಟಿಕೆಗಳಿಂದಾಚೆಗೆ ಏಕಾಂತದಲ್ಲಿ ಪ್ರತ್ಯೇಕವಾದ ಭಗವಂತನ ಪ್ರೀತಿ ಭಗವತ್ಸಾಕ್ಷಾತ್ಕಾರದ ಗುರಿಯನ್ನು ಸಾಧಿಸಲು ವ್ಯಕ್ತಿಯೊಬ್ಬನಿಗೆ ನೆರವಾಗುವುದಿಲ್ಲ. ಪ್ರೀತಿ ಮತ್ತು ಸೇವೆಯ ಸಿದ್ಧಾಂತ ಮಾತ್ರವೇ ವಿಶಿಷ್ಟವಾದುದೇನೂ ಅಲ್ಲ, ಆದರೆ ಅದು ಹಿಂದೂ ಧರ್ಮದ ಮೂಲಭೂತ ಸಿದ್ಧಾಂತವೂ ಆಗಿದೆ. ನಮ್ಮ ಶಾಸ್ತ್ರಗ್ರಂಥಗಳು, ಮಹಾಕಾವ್ಯಗಳು ಮತ್ತು ಪುರಾಣಗಳ ವಿಸ್ತಾರವಾದ ಉಲ್ಲೇಖಗಳೊಂದಿಗೆ ಇದನ್ನು ಪ್ರದರ್ಶಿಸಲು ನಾನು ಪ್ರಯತ್ನಿಸಿದ್ದೇನೆ. ಭವನದ ವಿಶ್ವವಿದ್ಯಾನಿಲಯ ಗ್ರಂಥಸರಣಿಯಲ್ಲಿ ಈ ಗ್ರಂಥವನ್ನು ಪ್ರಕಟಿಸುವ ಜವಾಬ್ದಾರಿಯನ್ನು ವಹಿಸಿರುವುದಕ್ಕಾಗಿ ಕುಲಪತಿ ಡಾ॥ ಕೆ.ಎಂ. ಮುನ್ಷಿಯವರಿಗೂ ಮತ್ತು ಶ್ರೀ. ಎಸ್. ರಾಮಕೃಷ್ಣನ್‌ರವರಿಗೂ ಕೃತಜ್ಞನಾಗಿದ್ದೇನೆ.

ಈ ಉಪನ್ಯಾಸಗಳ ಅಧ್ಯಕ್ಷತೆಯನ್ನು ವಹಿಸಿದ್ದಕ್ಕಾಗಿ ಮತ್ತು ನಾನು ಅಪಾರವಾಗಿ ಗೌರವಿಸುವ ಮುನ್ನುಡಿಯನ್ನು ಬರೆದಿರುವುದಕ್ಕಾಗಿ ನಾನು ಡಾ॥ ಎ. ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರಿಗೆ ಚಿರಋಣಿಯಾಗಿದ್ದೇನೆ.

ಆಶ್ರಮ, ಮೈಲಾಪುರ್, ಮದ್ರಾಸು **ಕೆ. ಬಾಲಸುಬ್ರಹ್ಮಣ್ಯ ಐಯ್ಯರ್**
ಆಗಸ್ಟ್, ೧೫, ೧೯೬೯

ಪರಿವಿಡಿ

ಹಿಂದೂ ಆದರ್ಶಗಳು

Blank Page

೧. ಮೂಲಭೂತವಾದ ಹೆಬ್ಬಯಕೆಗಳು

ಗ್ರೀಸ್‌ನ ಅತ್ಯಂತ ಧೀಮಂತ ವ್ಯಕ್ತಿ ಸಾಕ್ರೆಟಿಸ್ ಹೇಳಿದ್ದು ಹೀಗೆ – 'ಶೋಧನೆಗಳಲ್ಲೆಲ್ಲ ಅತ್ಯಂತ ಉದಾತ್ತವಾದುದು ಮನುಷ್ಯ ಏನಾಗಿರಬೇಕು ಮತ್ತು ಏನನ್ನು ಆತ ಹುಡುಕಿಕೊಂಡು ಹೋಗಬೇಕು ಎಂಬುದರ ಅಧ್ಯಯನ.' ಅತ್ಯಂತ ಹಿಂದಿನ ಕಾಲದಿಂಲೂ ಗೌರವಾರ್ಹವಾದ ಸಂಪ್ರದಾಯವನ್ನು ಹೊಂದಿರುವ ಭಾರತೀಯ ಚಿಂತನೆ ತನ್ನ ವಿವೇಚನಾಶಕ್ತಿ ಮತ್ತು ವಿಶ್ಲೇಷಣೆಯನ್ನು ಭೂಮಿಯ ಮೇಲೆ ಮನುಷ್ಯನ ಜೀವನದ ಅರ್ಥ ಮತ್ತು ಉದ್ದೇಶವನ್ನು ಕುರಿತ ವಸ್ತುವಿನತ್ತ ಕೇಂದ್ರೀಕರಿಸಿದೆ. ಭಾರತದ ಋಷಿಗಳು ದ್ರಷ್ಟಾರರು, ಪ್ರವಾದಿಗಳು ಮತ್ತು ಕವಿಗಳು ಮನುಷ್ಯ ಏನಾಗಿರಬೇಕು ಮತ್ತು ಮನುಷ್ಯ ಏನನ್ನು ಹುಡುಕಿಕೊಂಡು ಹೋಗಬೇಕು ಎಂಬುದರ ಅಧ್ಯಯನದಲ್ಲಿ ಅಪಾರವಾದ ಆಸಕ್ತಿ ಹೊಂದಿದ್ದರು. ಭಾರತೀಯ ಚಿಂತಕರು ಇಂತಹ ಪ್ರಶ್ನೆಗಳನ್ನು ವೈಜ್ಞಾನಿಕ ಮನೋಭಾವದಿಂದ ಅನುಸಂಧಾನ ಮಾಡುವ ವಿಶಿಷ್ಟ ಬಲವನ್ನು ಪ್ರದರ್ಶಿಸುತ್ತಿರುವರೆಂಬುದನ್ನು ಮತ್ತು ವ್ಯವಸ್ಥಿತವಾದ ಹಾಗೂ ನಿಸ್ಸಂದಿಗ್ಧವಾದ ವಿಶ್ಲೇಷಣೆಯ ಶಕ್ತಿಯ ನೆರವಿನಿಂದ ಶೋಧಿಸುತ್ತಿರುವರೆಂಬುದನ್ನು ಸಾಮಾನ್ಯವಾಗಿ ಗುರುತಿಸಲಾಗಿದೆ. ಜೀವನದ ಅತ್ಯುನ್ನತವಾದ ಗುರಿ ಯಾವುದೆಂದು ಕಂಡುಹಿಡಿಯಲು ಮತ್ತು ಮಾನವಹೃದಯದ ಮೂಲಭೂತವಾದ ಹೆಬ್ಬಯಕೆಗಳ ಸ್ವರೂಪವನ್ನು ಗ್ರಹಿಸಲು, ಅದರ ಮನೋವೈಜ್ಞಾನಿಕ ಪ್ರವೃತ್ತಿಗಳನ್ನು ಅಧ್ಯಯನಮಾಡಲು ಮತ್ತು ತನ್ಮೂಲಕ ಜೀವನದ ಧ್ಯೇಯೋದ್ದೇಶಗಳಾವುವು ಮತ್ತು ಅವು ಏನಾಗಿರಬೇಕು ಎಂಬುದನ್ನು ನಿರೂಪಿಸಲು ಅವರು ಪ್ರಯತ್ನಿಸುತ್ತಾರೆ. ವಿಜ್ಞಾನದಲ್ಲಿರುವಂತೆಯೇ ಇಲ್ಲಿಯೂ ಕೆಲವೊಂದು ನಿರ್ದಿಷ್ಟ ಮೂಲಭೂತ ಸತ್ಯಗಳು ಮತ್ತು ನಿರೀಕ್ಷಿಸಿದ ವಾಸ್ತವಾಂಶಗಳ ಮೂಲಕ ವಿವೇಚನಾಶಕ್ತಿಯ ಪ್ರಕ್ರಿಯೆಯೊಂದರಿಂದ ತಾರ್ಕಿಕ ನಿರ್ಣಯಗಳಿಗೆ ಬರಲಾಗುತ್ತದೆ, ಮತ್ತು ಅನುಭವ ಹಾಗೂ ಒಳನೋಟದಿಂದ ಕೆಲವೊಂದು ನಿರ್ದಿಷ್ಟ ಸೂತ್ರಗಳನ್ನು ರೂಪಿಸಲಾಗುತ್ತದೆ.

ಮೂಲಭೂತ ವಾಸ್ತವಾಂಶಗಳು

ಮನುಷ್ಯ ಸ್ವಾಭಾವಿಕವಾಗಿ ಒಂದು ಪ್ರಾಣಿ

ಮೊದಲನೆಯ ಮತ್ತು ಅತ್ಯಂತ ಮುಖ್ಯವಾದ ಮೂಲಭೂತವಾದ ವಾಸ್ತವಾಂಶವೆಂದರೆ ಮನುಷ್ಯ ಸ್ವಾಭಾವಿಕವಾಗಿ ಒಂದು ಪ್ರಾಣಿ. ಆತ ಸಂವೇದನೆಗಳನ್ನು, ಪ್ರವೃತ್ತಿಗಳನ್ನು ಮತ್ತು ಬಯಕೆಗಳನ್ನು ಪ್ರಾಣಿಗಳೊಂದಿಗೆ ಸಮಾನವಾಗಿಯೇ ಹೊಂದಿದ್ದಾನೆ. ಶ್ರೀ ಶಂಕರಾಚಾರ್ಯರು ತಮ್ಮ ಸೂತ್ರಭಾಷ್ಯದಲ್ಲಿ ಸೂಕ್ತಿಯ ರೂಪದಲ್ಲಿ ಅದನ್ನು ರಮಣೀಯವಾಗಿ ಹೀಗೆ ವ್ಯಕ್ತಪಡಿಸಿದ್ದಾರೆ ; 'ಪಶ್ವಾದಿಭಿಶ್ಚಾವಿಶೇಷಾತ್' (ಮನುಷ್ಯ ಪ್ರಾಣಿಗಳಿಗಿಂತ ಭಿನ್ನವಾಗಿಲ್ಲ) ಎಂದು. ಪ್ರಸಿದ್ಧವಾದ ಸಂಸ್ಕೃತ ಶ್ಲೋಕವೊಂದು ಅದನ್ನು ಹೀಗೆ ನಿರೂಪಿಸುತ್ತದೆ:

ಆಹಾರನಿದ್ರಾಭಯಮೈಥುನಂ ಚ ಸಾಮಾನ್ಯಮೇತತ್ ಪಶುಭಿರ್ನರಾಣಾಂ ।
ಧರ್ಮೋ ಹಿ ತೇಷಾಮಧಿಕೋ ವಿಶೇಷಃ ಧರ್ಮೇಣಹೀನಾಃ ಪಶುಭಿಃ ಸಮಾನಾಃ॥

ಆಹಾರ, ನಿದ್ರೆ, ಭಯ, ಮೈಥುನ ಇವು ಪಶುಗಳು ಮತ್ತು ಮಾನವರಿಗೆ ಸಮಾನವಾದುವು. ಆದರೆ, ಧರ್ಮವೆಂಬುದು ಮನುಷ್ಯರಿಗಿರುವ ಹೆಚ್ಚಿನ ವಿಶೇಷ. ಧರ್ಮಹೀನರಾದವರು ಪಶುಗಳಿಗೆ ಸಮಾನರೆನಿಸುತ್ತಾರೆ.

ಇಲ್ಲಿ ಹೇಳಿರುವ ನಾಲ್ಕು ಗುಣವಿಶೇಷಗಳು ಕೇವಲ ಉದಾಹರಣ ರೂಪವಾದುವು. ಕ್ರೌರ್ಯದ ಪ್ರವೃತ್ತಿ, ಅಧಿಕಾರ ದಾಹ ಮತ್ತು ಅಸ್ತಿತ್ವಕ್ಕಾಗಿ ಹೋರಾಟಗಳನ್ನೂ ಮನುಷ್ಯ ಮತ್ತು ಮೃಗಗಳಿಗೆ ಸಮಾನವಾದುದೆಂದು ಹೇಳಬಹುದು. ಪೂರ್ವಶಿಲಾಯುಗದ ಅರೆಮನುಷ್ಯನನ್ನು ಕುರಿತು ನಾವು ಓದಿರುವ ವಿವರಗಳಿಂದ ಆದಿಕಾಲದ ಮಾನವ ಪ್ರಾಣಿಗಳ ಮಟ್ಟಕ್ಕಿಂತ ಉತ್ತಮನಾಗಿರಲಿಲ್ಲವೆಂದೂ ಆತನಲ್ಲಿ ಕಾಡುನಿಯಮವು ಪ್ರಬಲವಾಗಿತ್ತೆಂದೂ ಮತ್ತು ಆತ ಅಸ್ತಿತ್ವಕ್ಕಾಗಿನ ಹೋರಾಟದಿಂದ ಮತ್ತು ತನ್ನ ಪಾಶವೀ ಬಯಕೆಗಳ ನೆರವೇರಿಕೆಯಿಂದಲೇ ಸಂತೃಪ್ತನಾಗಿದ್ದನೆಂದೂ ತೀರ್ಮಾನಕ್ಕೆ ಬರಬಹುದು. ಪ್ರಾಪಂಚಿಕ ನಾಗರಿಕತೆಯಲ್ಲಿ ಆತನ ಮಹತ್ತಾದ ಮತ್ತು ಆಶ್ಚರ್ಯಕರವಾದ ಪ್ರಗತಿಯ ಮತ್ತು ಜ್ಞಾನದ ಗಳಿಕೆಯಲ್ಲಿ ಮತ್ತು ವಿಜ್ಞಾನದ ಪ್ರಗತಿಯಲ್ಲಿ ಆತನು ಸಾಧಿಸಿರುವ ತೀವ್ರವಾದ ಸಾಧನೆಯ ಹೊರತಾಗಿಯೂ ಮನುಷ್ಯ ತನ್ನ ಪಾಶವಿಕ ಸ್ವಭಾವದಿಂದ ಔನ್ನತ್ಯಕ್ಕೇರುವಲ್ಲಿ ಹೆಚ್ಚಿನ ಪ್ರಗತಿಯನ್ನೇನೂ ಮಾಡಿಲ್ಲ. 'ಮನುಷ್ಯ ಹಕ್ಕಿಯಂತೆ ಆಕಾಶದಲ್ಲಿ ಹಾರಾಡಲು ಮತ್ತು ನೀರಿನಲ್ಲಿ ಮೀನಿನಂತೆ ಈಜಲು ಕಲಿತಿದ್ದಾನೆ, ಆದರೆ ಭೂಮಿಯ ಮೇಲೆ ಮನುಷ್ಯನಂತೆ ನಡೆದಾಡಲು ಕಲಿತಿಲ್ಲ' ಎಂದು ಲೇಖಕರೊಬ್ಬರು ಹೇಳಿದ್ದಾರೆ. ಆದರೆ, ಆತ ಪ್ರಾಣಿಗಿಂತಲೂ ಸಾಕಷ್ಟು ಶ್ರೇಷ್ಠನಾದವನು

ಮತ್ತು ಸಾರಭೂತವಾಗಿ ಆತ ಚೈತನ್ಯನೂ ಹೌದು ಎಂಬುದೂ ಅಷ್ಟೇ ಸತ್ಯ. ಆತನಲ್ಲಿರುವ ದೈವೀಕಾಂತಿ ಆತನ ಸಮಗ್ರ ವ್ಯಕ್ತಿತ್ವವನ್ನು ಬೆಳಗುತ್ತದೆ. ಮಾನವ ಮನಸ್ಸಿಗೆ ಆಲೋಚನಾ ಸಾಮರ್ಥ್ಯ ಮತ್ತು ಅದರ ಮುಕ್ತ ಅನ್ವೇಷಣೆಯಲ್ಲಿ ಶಕ್ತಿ ಸಂವೇದನೆಗಳ ಸ್ವಭಾವವನ್ನು ಹಂಚಿಕೊಳ್ಳಲಾಗದು. ಮನುಷ್ಯ ಆತ್ಮಪ್ರಜ್ಞೆ, ಪೂರ್ವಾಪರಗಳನ್ನು ಗಮನಿಸುವ ಬುದ್ಧಿವಂತಿಕೆ ಹೊಂದಿರುತ್ತಾನೆ, ಮತ್ತು ಸನ್ನಿವೇಶಕ್ಕೆ ಅನುಗುಣವಾಗಿ ತನ್ನ ಕಾರ್ಯವನ್ನು ಮಾರ್ಪಡಿಸಿಕೊಳ್ಳುತ್ತಾನೆ. 'ತಾನು ತುಳಿತಕ್ಕೊಳಗಾಗಿರುವುದನ್ನು ಅರಿತುಕೊಂಡೊಡನೆಯೇ ವ್ಯಕ್ತಿ' ತನ್ನನ್ನು ತುಳಿಯುತ್ತಿರುವ ತಿಳಿಯದ ವಸ್ತು, ಅದೆಷ್ಟೇ ದೊಡ್ಡದಾಗಿರಲಿ, ಅದಕ್ಕಿಂತ ಅಪಾರವಾಗಿ ಉನ್ನತನಾಗಿರುತ್ತಾನೆ' ಎಂದು ನುಡಿದವನು ಪ್ಯಾಸ್ಕಲ್. ಮನುಷ್ಯನನ್ನು ಪ್ರಾಣಿಯಿಂದ ಪ್ರತ್ಯೇಕಿಸುವುದು ಈ ತಿಳಿವಳಿಕೆ, ಈ ವಿವೇಚನಾಶಕ್ತಿ. ಶ್ರೇಷ್ಠ ಮುತ್ಸದ್ದಿ ಹಾಗೂ ಕವಿ ಶ್ರೀ ನೀಲಕಂಠ ದೀಕ್ಷಿತರು ಈ ಸತ್ಯವನ್ನು ಸುಂದರವಾದ ಶ್ಲೋಕವೊಂದರಲ್ಲಿ ವರ್ಣಿಸಿದ್ದಾರೆ. ಅದರ ಅರ್ಥ ಹೀಗಿದೆ; 'ಮನುಷ್ಯನಾಗಿ ಹುಟ್ಟುವ ಸ್ಥಿತಿಯನ್ನು ಪಡೆದ ಮೇಲೂ ವ್ಯಕ್ತಿಯೊಬ್ಬನು ಜ್ಞಾನ ಮತ್ತು ವಿವೇಕವನ್ನು ಹೊಂದಿರದಿದ್ದರೆ ಆತ ಪಶುವಾಗಿ ಉಳಿಯುವುದೇ ಒಳಿತು, ಏಕೆಂದರೆ ಆಗ ಆತ ಪಾಪಗಳ ವಿಧಿಯ ನಿಯಂತ್ರಣಕ್ಕೆ ಒಳಗಾಗುವುದಿಲ್ಲ.'

ಅಪಿ ಮಾನುಷ್ಯಕಂ ಲಬ್ಧ್ವಾ ಭವಂತಿ ಜ್ಞಾನಿನೋ ನ ಯೇ ।
ಪಶುತೈವ ವರಂ ತೇಷಾಂ ಪ್ರತ್ಯವಾಯಾಪ್ರವರ್ತನಾತ್ ॥

(ಸಭಾರಂಜನ ಶತಕ, ಶ್ಲೋಕ)

ಪ್ರಸಿದ್ಧ ಸೂಫಿ ಕವಿ ಜಲಾಲುದ್ದೀನ್ ರೂಮಿ ಹೇಳಿದ: 'ನಾನು ಖನಿಜವಾಗಿ ಮರಣಹೊಂದಿದೆ ಮತ್ತು ಸಸ್ಯವಾಗಿ ಸಂಭವಿಸಿದೆ. ಸಸ್ಯವಾಗಿ ನಾನು ಮರಣಹೊಂದಿದೆ ಮತ್ತು ಪ್ರಾಣಿಯಾಗಿ ಜನ್ಮತಳೆದೆ, ಪ್ರಾಣಿಯಾಗಿ ಮರಣ ಹೊಂದಿದೆ, ನಾನು ಮನುಷ್ಯನಾದೆ. ನಾನು ಭಯಪಡಬೇಕೇಕೆ? ಸಾಯುವುದರಿಂದ ನಾನು ಅಲ್ಪನಾಗಿದ್ದುದಾವಾಗ? ಹೌದು, ಧನ್ಯರಾದ ದೇವತೆಗಳೊಂದಿಗೆ ಆಕಾಶದಲ್ಲಿ ಹಾರಾಡಲು ನಾನು ಮತ್ತೊಮ್ಮೆ ಮನುಷ್ಯನಾಗಿ ಮರಣಹೊಂದುತ್ತೇನೆ; ಆದರೆ ದೈವತ್ವದಿಂದಲೂ ಸಹ ನಾನು ಮುಂದೆ ಸಾಗಬೇಕು. ದೇವರೊಬ್ಬನನ್ನು ಬಿಟ್ಟು ಬೇರೆಲ್ಲವೂ ನಶಿಸುತ್ತವೆ. ನಾನು ದೇವಾತ್ಮವನ್ನು ತೊರೆದಾಗ ಯಾವ ಮನಸ್ಸೂ ಕಲ್ಪಿಸಿಕೊಳ್ಳಲಾಗದ ಆ ವಿಶಿಷ್ಟ ವಸ್ತುವಾಗಿ ಪರಿಣಮಿಸುತ್ತೇನೆ.' ಆದ್ದರಿಂದಲೇ ಭಾರತೀಯ ಚಿಂತನೆ ಈ ಸತ್ಯದ ಮೌಲ್ಯವನ್ನು ಗುರುತಿಸುವತ್ತ ಸಾಗಿತು. ಅಂದರೆ, ಮನುಷ್ಯನ ಪ್ರಗತಿ ಇರುವುದು ದೇವತೆಯ ಪರಿಪೂರ್ಣತೆಯತ್ತ ಮತ್ತು ತನ್ನೊಳಗೇ

ಇರುವ ದೈವತ್ವದ ಅಭಿವ್ಯಕ್ತಿಯತ್ತ ಸಾಗುವುದರಲ್ಲಿ. ನಮ್ಮ ಧಾರ್ಮಿಕ ಸಾಹಿತ್ಯದಲ್ಲಿ ಸೃಷ್ಟಿಯಾದ ಜೀವಿಗಳ ಮೂರು ಹಂತಗಳು ಮತ್ತು ದರ್ಜೆಗಳ ಬಗ್ಗೆ ಪದೇ ಪದೇ ಉಲ್ಲೇಖಗಳನ್ನು ನಾವು ಕಾಣುತ್ತೇವೆ (ಕೆಳದರ್ಜೆಯ ಜೀವಿಗಳು). ಅವು ದೇವತೆಯ, ಮನುಷ್ಯನ ಮತ್ತು ತಿರ್ಯಕ್ ಹಂತಗಳು. ಪುರಾಣಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ಶ್ರೀಮದ್ಭಾಗವತದಲ್ಲಿ ನಾವು ಓದುವ ಉಲ್ಲೇಖಗಳಲ್ಲಿ ಜೀವನು ವಿಕಾಸದ ಸುದೀರ್ಘ ಮಾಗದಲ್ಲಿ ಪಶುವಿನ ಹಂತದಿಂದ ಮನುಷ್ಯನ ಹಂತಕ್ಕೆ ಏರಿದವನು ದೇವತೆಯ ಹಂತಕ್ಕೆ ಏರಬೇಕು, ಮತ್ತು ಅದನ್ನು ಪಡೆಯುವಷ್ಟರ ಮಟ್ಟಿಗೆ ತನ್ನನ್ನು ಪರಿಪೂರ್ಣಗೊಳಿಸಿಕೊಳ್ಳಬೇಕು; ಸ್ಯಾಮುಯಲ್ ಟೈಲರ್ ಕೋಲ್‌ರಿಜ್ ಹೇಳುವ ಹಾಗೆ, 'ಮನುಷ್ಯನು ದೇವತೆಯಾಗುವಂತೆ ಮೇಲಕ್ಕೇರದಿದ್ದರೆ, ಭರವಸೆಯಿಡಿ, ಆತ ದೈತ್ಯನಾಗಲು ಕೆಳಮುಖವಾಗಿ ಕುಸಿಯುತ್ತಿದ್ದಾನೆ. ಆತ ಪಶುವಿನ ಹಂತಕ್ಕೇ ನಿಲ್ಲಲಾರ'.

* * * *

೨. ಕರ್ಮ ಮತ್ತು ಪುನರ್ಜನ್ಮ

ಎರಡನೆಯದಾಗಿ ಭಾರತೀಯ ಚಿಂತನೆ ಕರ್ಮಸಿದ್ಧಾಂತ ಮತ್ತು ಪುನರ್ಜನ್ಮದ ಸತ್ಯದ ನಂಬಿಕೆಯ ಮೇಲೆ ಸಾಗಿದೆ. ಅದು ಆತ್ಮದ ಅಮರತ್ವದಲ್ಲಿ ನಂಬಿಕೆ ಹೊಂದಿದೆ. ಆತ್ಮವು ಅನಾದಿ ಮತ್ತು ಅನಂತ ಮತ್ತು ಅದು ವಿಶ್ವದ ಮೂಲಕ ತನ್ನ ಯಾತ್ರೆಯಲ್ಲಿ ಅನುಕ್ರಮವಾಗಿ ದೇಹಗಳನ್ನು ತಳೆಯುತ್ತ ಹೋಗುತ್ತದೆ. ಆತ್ಮವು ಒಂದು ದೇಹದಿಂದ ಮತ್ತೊಂದಕ್ಕೆ ಸಾಗಿದಾಗ ಅದರ ಸ್ವಭಾವ ಮತ್ತು ಗುಣವಿಶೇಷಗಳು ವ್ಯಕ್ತಿಯೊಬ್ಬನ ವರ್ತನೆ ಮತ್ತು ಕಾರ್ಯಗಳಿಂದ ಹೆಚ್ಚಾಗಿ ನಿರ್ಧಾರಿತವಾಗಿರುತ್ತದೆ. ಕರ್ಮಸಿದ್ಧಾಂತವು ಮನುಷ್ಯನು ಬಿತ್ತಿದಂತೆ ಬೆಳೆಯನ್ನು ಪಡೆಯುತ್ತಾನೆ ಮತ್ತು ತನ್ನ ಅದೃಷ್ಟವನ್ನು ತಾನೇ ರೂಪಿಸಿಕೊಳ್ಳುತ್ತಾನೆ ಎಂಬ ನಿಯಮವನ್ನು ಒತ್ತಿ ಹೇಳುತ್ತದೆ. ಕರ್ಮಸಿದ್ಧಾಂತ ಮತ್ತು ಪುನರ್ಜನ್ಮದ ಸಮಗ್ರ ವ್ಯಾಪ್ತಿ ಮತ್ತು ಸಾರಾಂಶವನ್ನು ವಿಶದವಾಗಿ ಚರ್ಚಿಸುವುದು ಇಲ್ಲಿ ಅನವಶ್ಯಕ. ಭಾರತೀಯ ಚಿಂತನೆಯ ಎಲ್ಲ ವಿದ್ಯಾರ್ಥಿಗಳಿಗೂ ಅವು ಚೆನ್ನಾಗಿ ತಿಳಿದಿರುವಂತಹವು. ನಾನು ಅದನ್ನು ಕುರಿತು ಉಲ್ಲೇಖಿಸಿರುವುದೇಕೆಂದರೆ ಅನೇಕ ಯುಗಗಳಿಂದ ಕರ್ಮಸಿದ್ಧಾಂತ ಮತ್ತು ಪುನರ್ಜನ್ಮ ಬಾಳಿನ ಎಲ್ಲ ದೃಷ್ಟಿಕೋನಗಳ ಮೇಲೂ ಭಾರತೀಯ ಚಿಂತನೆಯ ಗುಣವಿಶೇಷಗಳ ವೈಶಿಷ್ಟ್ಯವನ್ನು ನೇರ್ಪುಗೊಳಿಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿವೆ. ಭಾರತೀಯ ಚಿಂತನೆ ದೊಡ್ಡ ಪ್ರಮಾಣದಲ್ಲಿ ಮುಕ್ತ ಚಿಂತನೆಗೆ ಅವಕಾಶ ನೀಡಿದೆಯೆಂಬುದು ಸುವಿಖ್ಯಾತವಾಗಿದೆ. ಆದರೆ, ನಮ್ಮ ದೇಶದಲ್ಲಿ ಎಂದೂ ಹೆಚ್ಚಿನ ಸಂಖ್ಯೆಯ ಅನುಯಾಯಿಗಳನ್ನು ಹೊಂದಿರದಿದ್ದ ಚಾರ್ವಾಕ ಸಂಪ್ರದಾಯವನ್ನು ಹೊರತುಪಡಿಸಿ, ಭಾರತೀಯ ಚಿಂತನೆಯ ಇತರ ಎಲ್ಲ ಸಂಪ್ರದಾಯಗಳೂ ಕರ್ಮಸಿದ್ಧಾಂತ ಮತ್ತು ಪುನರ್ಜನ್ಮದ ಸತ್ಯ ಮತ್ತು ಉಪಯುಕ್ತತೆಯನ್ನು ಎಂದೂ ಅನುಮಾನದಿಂದ ಕಂಡಿಲ್ಲ. ವಾಸ್ತವವಾಗಿ, ಇತರ ಎಲ್ಲ ವಿಷಯಗಳ ಬಗ್ಗೆ ನಾವು ಗಮನಿಸಿರುವಂತೆ, ನಮ್ಮ ಧಾರ್ಮಿಕ ಸಾಹಿತ್ಯದ ಯಾವುದೇ ಗ್ರಂಥಗಳಲ್ಲಿ ಈ ಸಿದ್ಧಾಂತದ ಪರ ಅಥವಾ ವಿರೋಧವಾದ ಅಭಿಪ್ರಾಯಗಳ ಚರ್ಚೆಯನ್ನು ನಾವು ಕಾಣುವುದಿಲ್ಲ. ನಮ್ಮ ಎಲ್ಲ ಚಿಂತಕರೂ ನಮ್ಮ ದೇಶದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ಈ ಸಿದ್ಧಾಂತವು ಸುಸ್ಥಿರವಾಗಿದೆಯೆಂದು ಪರಿಗಣಿಸಿದ್ದಾರೆ. ವಾಸ್ತವವಾಗಿ, ಇದು ಭಾರತೀಯ

ಜನಾಂಗದ ಪ್ರಜ್ಞೆಯ ಅವಿಭಾಜ್ಯ ಅಂಗವಾಗಿ ಪರಿಣಮಿಸಿದೆ. ಬೌದ್ಧಸಿದ್ಧಾಂತ ಮತ್ತು ಜೈನ ಸಿದ್ಧಾಂತದಂತಹ ಮತಭೇದವುಳ್ಳ ಧರ್ಮಗಳೂ ಸಹ ಈ ಸಿದ್ಧಾಂತದ ಬಗ್ಗೆ ಯಾವುದೇ ಅನುಮಾನವನ್ನು ವ್ಯಕ್ತಪಡಿಸಲಿಲ್ಲ ಮತ್ತು ತಮ್ಮ ಧರ್ಮಗಳ ಮೂಲತತ್ತ್ವಗಳನ್ನು ಅದರ ಸತ್ಯದ ಸ್ವೀಕಾರದ ಮೇಲೆಯೇ ಚರ್ಚೆಮಾಡತೊಡಗಿದುವು. ಪಾಶ್ಚಾತ್ಯ ವಿದ್ವಾಂಸರು ಕೆಲವೊಮ್ಮೆ ಈ ಸಿದ್ಧಾಂತಗಳನ್ನು ಮಾನವಜೀನವದ ಅಸಮಾನತೆಗಳು ಮತ್ತು ಯಾತನೆಗಳಿಗೆ 'ಅನ್ಯಾಯಗಳು' ಮತ್ತು ದುರಂತಗಳಿಗೆ ಪಕ್ಷಪಾತ ಮತ್ತು ಕ್ರೌರ್ಯದ ಆರೋಪಗಳನ್ನು ಭಗವಂತನಿಗೆ ಹೊರಿಸದೆ ಕಾರ್ಯಸಾಧ್ಯವಾದ ವಿವರಣೆಯನ್ನು ನೀಡುವ ಜಾಣತನದ ಆಧಾರಕಲ್ಪನೆಯೆಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಮತ್ತೆ ಕೆಲವು ಪಾಶ್ಚಾತ್ಯ ವಿದ್ವಾಂಸರು ಈ ಸಿದ್ಧಾಂತವು ಭಾರತೀಯ ಮನಸ್ಸಿನ ಮೇಲೆ ನಿರಾಶಾವಾದದ ಕಳಂಕವನ್ನು ಬೀರುವ ಮತ್ತು ಪ್ರಾಪಂಚಿಕ ಜೀವನದಲ್ಲಿ ನಿರಾಕರಣೆಯ ಪ್ರವೃತ್ತಿಯನ್ನು ತುಂಬುವ ಪರಿಣಾಮವುಂಟುಮಾಡುವುದೆಂದು ವಿಷಾದ ವ್ಯಕ್ತಪಡಿಸಿದ್ದಾರೆ. ಆದರೆ ಸತ್ಯವೇನೆಂದರೆ ಸಿದ್ಧಾಂತವು ಈ ರೀತಿ ಮಾಡುವುದಕ್ಕೆ ಬದಲಾಗಿ ಉಪಯುಕ್ತತೆ ಅಥವಾ ಪ್ರತಿಫಲದತ್ತ ಗಮನ ನೀಡದ, ಬಾಳಿನ ಚರಮ ಮೌಲ್ಯಗಳಲ್ಲಿ ಅವುಗಳಿಗೋಸ್ಕರವಾಗಿಯೇ ನಂಬಿಕೆಯನ್ನು ಬಲಪಡಿಸುವತ್ತ ಪ್ರವೃತ್ತವಾಗಿದೆ.

* * * *

೩. ಪುರುಷಾರ್ಥಗಳು

ಈ ಹಿನ್ನೆಲೆಯೊಂದಿಗೆ ಭಾರತೀಯ ಚಿಂತಕರು ಮಾನವ ಏನಾಗಿರಬೇಕು ಮತ್ತು ಆತ ಏನನ್ನು ಅನ್ವೇಷಣೆ ಮಾಡಬೇಕೆಂಬುದರ ಅಧ್ಯಯನಕ್ಕೆ ಮುಂದಾಗುತ್ತಾರೆ. ಈ ಪ್ರಕರಣದ ವ್ಯಾಪ್ತಿಯನ್ನು ಅವರು ಅರ್ಥಗರ್ಭಿತವಾದ ಸಂಸ್ಕೃತದ ಸಂಯುಕ್ತ ಪದ 'ಪುರುಷಾರ್ಥ'ದಿಂದ ಗ್ರಹಿಸುತ್ತಾರೆ. ಕೆಲವೊಮ್ಮೆ ಪ್ರಸಿದ್ಧರಾದ ಭಾರತೀಯ ಲೇಖಕರು ಪ್ರಕರಣವನ್ನು ಚರ್ಚಿಸುತ್ತಿರುವಾಗ ಅದನ್ನು 'ಜೀವನದ ಮೌಲ್ಯಗಳು' ಎಂದು ಅನುವಾದಿಸುತ್ತಾರೆ. ಆದರೆ, ಅದನ್ನು ಹೀಗೆ ಅನುವಾದಿಸುವುದರ ದೋಷವೇನೆಂದರೆ, ಪಾಶ್ಚಾತ್ಯ ಚಿಂತಕರಿಗೆ 'ಜೀವನ ಮೌಲ್ಯಗಳು' ಎಂಬುದು ಯಾವಾಗಲೂ ಸತ್ಯ, ಶಿವ ಮತ್ತು ಸುಂದರವೆಂದು ಉಲ್ಲೇಖಗೊಂಡಿರುವ ಆ ಚರಮಮೌಲ್ಯಗಳೆಂದೇ ಅರ್ಥವಾಗುತ್ತದೆ. ಅವುಗಳನ್ನು ಹೊಂದಿರುವ ವಸ್ತುಗಳಿಂದ ಅವು ಪ್ರತ್ಯೇಕವಾದ ಅಸ್ತಿತ್ತ್ವವನ್ನು ಹೊಂದಿರುತ್ತದೆ. ಅವು ವ್ಯಕ್ತಿನಿಷ್ಠವಾದುವುಗಳಲ್ಲ, ಆದರೆ ಪಾಶ್ಚಾತ್ಯ ಲೇಖಕರ ಅನುಸಾರ ಅವು ಸಂಪೂರ್ಣವಾಗಿ ವಸ್ತುನಿಷ್ಠವಾದುವು, ಮತ್ತು ನಿರಂಕುಶವಾದುವು. ಆದರೆ 'ಪುರುಷಾರ್ಥ' ಬಾಳಿನ ಗುರಿಗಳು ಮತ್ತು ಉದ್ದೇಶಗಳ ಅಥವಾ ಮನುಷ್ಯನ ಮೂಲಭೂತವಾದ ಹೆಬ್ಬಯಕೆಗಳ ಅರ್ಥವನ್ನು ಒಳಗೊಂಡಿದೆ ಮತ್ತು ಅದನ್ನು ಧ್ವನಿಸುತ್ತಿದೆ.

'ಪುರುಷಾರ್ಥ'ವೆಂಬ ಶಬ್ದ ಬಾಳಿನ ಉದ್ದೇಶಗಳು ಏನಾಗಿರಬೇಕು ಎಂಬುದನ್ನು ಸೂಚಿಸುವುದಷ್ಟೇ ಅಲ್ಲ, ಆದರೆ ವ್ಯಕ್ತಿಯೊಬ್ಬನ ಮನೋವೈಜ್ಞಾನಿಕ ಪ್ರವೃತ್ತಿಗಳ ಫಲಿತಾಂಶದಂತೆ ಬಾಳಿನ ಉದ್ದೇಶಗಳು ಏನಾಗಿರಬೇಕೆಂಬುದನ್ನು ಗ್ರಹಿಸುತ್ತದೆ. ಈ ಪುರುಷಾರ್ಥಗಳು ನಾಲ್ಕು ಬಗೆಯವು ಎಂದು ಹೇಳಲಾಗಿದೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೇ ನಾಲ್ಕು ಪುರುಷಾರ್ಥಗಳು ಎಂದು ಅಗ್ನಿಪುರಾಣ ಸ್ಪಷ್ಟವಾಗಿ ತಿಳಿಸುತ್ತದೆ.

ಧರ್ಮಾರ್ಥಕಾಮಮೋಕ್ಷಾಶ್ಚ ಪುರುಷಾರ್ಥ ಉದಾಹೃತಾಃ।

ವಾಸ್ತವವಾಗಿ, ಎಲ್ಲ ಭಾರತೀಯ ಚಿಂತಕರೂ ಪುರುಷಾರ್ಥಗಳನ್ನು ಈ ನಾಲ್ಕು ವಿಭಾಗಗಳಲ್ಲಿ ವರ್ಗೀಕರಿಸಬಹುದೆಂದೂ ಮತ್ತು ವ್ಯಕ್ತಿಯ ಎಲ್ಲ ಹೆಬ್ಬಯಕೆಗಳೂ ಈ ನಾಲ್ಕರಲ್ಲಿ ಅಡಕವಾಗಿವೆಯೆಂದೂ ಸಮ್ಮತಿಸಿದ್ದಾರೆ.

ಈ ನಾಲ್ಕು ಬಗೆಯ ಪುರುಷಾರ್ಥ ವರ್ಗೀಕರಣ ಎಷ್ಟೊಂದು ಸುಪ್ರತಿಷ್ಠಿತವಾಗಿದೆಯೆಂದರೆ ಅದು ಯಾವುದೇ ಧಾರ್ಮಿಕ ಆಚರಣೆ, ವ್ರತಾಚರಣೆ ಅಥವಾ ಇತರ ಧಾರ್ಮಿಕ ಅಥವಾ ದಾನಕ್ಕೆ ಸಂಬಂಧಿಸಿದ ಕಾರ್ಯವನ್ನು ಪ್ರಾರಂಭಿಸುವ ಮೊದಲು ಪ್ರತಿಯೊಬ್ಬ ಹಿಂದುವೂ ಉಚ್ಚರಿಸುವ ಸಂಕಲ್ಪದ ಒಂದು ಅಂಗವೇ ಆಗಿದೆ. ಅದನ್ನು ಈ ರೀತಿಯಲ್ಲಿ ಪಠಿಸಲಾಗುತ್ತದೆ.

ಧರ್ಮಾರ್ಥಕಾಮಮೋಕ್ಷ ಚತುರ್ವಿಧ ಪುರುಷಾರ್ಥಸಿದ್ಧ್ಯರ್ಥಂ ಕರ್ಮಕರಿಷ್ಯೇ ।

ಪ್ರತಿಯೊಂದು ಧಾರ್ಮಿಕ ಆಚರಣೆ, ವ್ರತಾಚರಣೆ ಅಥವಾ ಇತರ ಧಾರ್ಮಿಕ ಕಾರ್ಯವನ್ನು, ಅದನ್ನು ಆಚರಿಸುವ ವ್ಯಕ್ತಿಯು ಬಾಳಿನ ಈ ನಾಲ್ಕು ಪುರುಷಾರ್ಥಗಳನ್ನು ಈಡೇರಿಸಿಕೊಳ್ಳಲು ಸಮರ್ಥನಾಗಬೇಕೆಂಬ ಉದ್ದೇಶದಿಂದಲೇ ನಡೆಸಲಾಗುವುದೆಂಬುದು ಚೆನ್ನಾಗಿ ಮಾನ್ಯ ಮಾಡಲಾಗಿರುವ ನಿಯಮ. ಯಾವುದೇ ಸಂದರ್ಭದಲ್ಲಿ ಇವುಗಳನ್ನು ಪ್ರಸ್ತಾಪಿಸುವಾಗ ಧರ್ಮ ಮೊದಲನೆಯದು, ಅರ್ಥ ಎರಡನೆಯದು, ಕಾಮ ಮೂರನೆಯದು ಮತ್ತು ನಾಲ್ಕನೆಯದು ಮತ್ತು ಕೊನೆಯದು ಮೋಕ್ಷ ಎಂಬುದೇ ಯಾವಾಗಲೂ ಇರುವ ಕ್ರಮ. ಯಾವನೇ ಹಿಂದು ತಮಾಷೆಗಾಗಲಿ ಅಥವಾ ಬದಲಾವಣೆಯ ಒಲವಿಗಾಗಲಿ ಈ ನಾಲ್ಕನ್ನು ಬೇರಾವುದೇ ಕ್ರಮದಲ್ಲಿ ಪ್ರಸ್ತಾಪಿಸುವ ಆಲೋಚನೆಯನ್ನು ಎಂದಿಗೂ ಮಾಡಿಲ್ಲ. ಹೀಗಾಗಿ ಅವು ಉಲ್ಲೇಖಿತವಾಗಿರುವ ಕ್ರಮದಲ್ಲಿ ಮಹತ್ತರವಾದ ಪ್ರಾಮುಖ್ಯತೆ ಇರುವುದೆಂದೂ ಮತ್ತು ಅದರ ಹಿಂದೆ ಅರ್ಥವಿರುವುದೆಂದೂ ಗಮನಿಸುತ್ತೇವೆ. ಕ್ರಮದಲ್ಲಿನ ಬದಲಾವಣೆ ಬಾಳಿನ ಈ ನಾಲ್ಕು ಗುರಿಗಳ ವ್ಯಾಪ್ತಿ, ವಸ್ತು ಮತ್ತು ಸಾಪೇಕ್ಷವಾದ ಪ್ರಾಮುಖ್ಯತೆಯನ್ನು ಬದಲಿಸಿಬಿಡಬಹುದು. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಈ ನಾಲ್ಕು ಪುರುಷಾರ್ಥಗಳ ಯಥಾರ್ಥವಾದ ಪ್ರಾಮುಖ್ಯತೆ ಮತ್ತು ಗೂಢಾರ್ಥವನ್ನು ನಾವೀಗ ಗಮನಿಸೋಣ. ತಮಿಳಿನ ಶ್ರೇಷ್ಠ ಧಾರ್ಮಿಕ ಗ್ರಂಥಗಳಲ್ಲಿ ಅವುಗಳನ್ನು 'ಅರಂ, ಪೊರುಳ್, ಇನ್ಬಂ ಮತ್ತು ವೀಡು' ಎಂದು ತಿಳಿಸಲಾಗಿದೆ.

ವ್ಯಾಸ, ವಾಲ್ಮೀಕಿ ಮತ್ತು ವಳ್ಳುವರ್ ನಾಲ್ಕು ಭಾಗಗಳಾಗಿರುವ ಪುರುಷಾರ್ಥದ ಅತ್ಯಂತ ಶ್ರೇಷ್ಠ ಪ್ರತಿಪಾದಕರಾಗಿದ್ದಾರೆ. ಮಹಾಭಾರತದಲ್ಲಿ ವ್ಯಾಸರು, 'ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವನ್ನು ಕುರಿತಂತೆ ಇಲ್ಲಿ ಕಾಣಬರುವುದು ಬೇರೆಡೆಯಲ್ಲಿರಬಹುದು, ಇಲ್ಲಿ ಇಲ್ಲದಿರುವುದು ಬೇರೆಲ್ಲಿಯೂ ಕಾಣಬರುವುದಿಲ್ಲ' ಎಂದು ಆತ್ಮವಿಶ್ವಾಸದೊಡನೆ ಸಮರ್ಥಿಸುತ್ತಾರೆ. ಆತನ ಮಹಾಕಾವ್ಯ ಈ ಮಹತ್ತ್ವಪೂರ್ಣ ಪ್ರಕರಣವನ್ನು ಕುರಿತಂತೆ ಎಲ್ಲ ರೀತಿಯಿಂದಲೂ ಸರ್ವವ್ಯಾಪಕವಾದ ಪ್ರಕರಣಗ್ರಂಥವಾಗಿದೆ.

ಧರ್ಮೇ ಚ ಅರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ ।
ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್ ॥

ರಾಮಾಯಣ ಸಹ ಅದು 'ಕಾಮಾರ್ಥಗುಣಸಂಯುಕ್ತಂ ಧರ್ಮಾರ್ಥಗುಣವಿಸ್ತರಂ' ಎಂದು ತಿಳಿಸುತ್ತದೆ. ಅದು ಕಾಮ ಮತ್ತು ಅರ್ಥಗಳ ಶ್ರೇಷ್ಠತೆಯನ್ನು ಕುರಿತದ್ದಾಗಿದೆ ಮತ್ತು ಧರ್ಮ ಮತ್ತು ಮೋಕ್ಷಗಳನ್ನು ವಿವರವಾಗಿ ಪ್ರತಿಪಾದಿಸುತ್ತದೆ. (ಗೋವಿಂದರಾಜನ ವ್ಯಾಖ್ಯಾನದಂತೆ ಎರಡನೆಯದಾದ ಅರ್ಥವೆಂದರೆ ಇಲ್ಲಿನ ಅರ್ಥ ಮೋಕ್ಷ ಎಂದು) ವಳ್ಳುವರ್‌ರವರ ಚಿರಂತನ ಕೃತಿ ಕುರಳ್ ಅರಂ, ಪೊರುಳ್, ಇನ್ಬಂ ಮತ್ತು ವೀಡುಗಳನ್ನು ಕುರಿತದ್ದಾಗಿದೆ. ಅಧ್ಯಾಯಗಳು 'ಅರಟ್ಟುಪಳ್', 'ಪೊರುಟ್ಟುಪಳ್' ಮತ್ತು 'ಕಾಮಟ್ಟುಪಳ್' ಎಂದು ನಾಮಾಂಕಿತಗೊಂಡಿವೆ. 'ವೀಡು' ಎಂಬ ಶೀರ್ಷಿಕೆ ಕಾಣಬರದಿದ್ದರೂ ಅದನ್ನು 'ತುರವರಂ' ಎಂಬ ಶಿರೋನಾಮೆಯ ಕೆಳಗೆ ವ್ಯವಹರಿಸಲಾಗಿದೆ. ಇದಕ್ಕೆ ಪೂರ್ವನಿದರ್ಶನವಿದೆ. ಮಹಾಭಾರತ ಶಾಂತಿಪರ್ವದಲ್ಲಿ ಮೋಕ್ಷವು ಧರ್ಮದ ಒಂದು ಭಾಗವೆಂಬಂತೆ ಮೋಕ್ಷಧರ್ಮ ಎಂಬ ಶಿರೋನಾಮೆಯನ್ನು ನೀಡುತ್ತದೆ. ಇನ್ನು ನಾಲ್ಕು ಪುರುಷಾರ್ಥಗಳಲ್ಲಿ ಭಾರತೀಯ ಚಿಂತಕರು ಮೊದಲ ಎರಡು ಮುಂದಿನ ಎರಡಕ್ಕೆ ಸಾಧನ ಮತ್ತು ಸಾಧ್ಯ ಎಂಬ ಸಂಬಂಧದಲ್ಲಿ ನಿಲ್ಲುವುವೆಂದು ಪರಿಗಣಿಸುತ್ತಾರೆ. ಇಷ್ಟೇ ಅಲ್ಲದೆ ಧರ್ಮ ಮತ್ತು ಮೋಕ್ಷಗಳು ಪ್ರಥಮ ಪ್ರಾಧಾನ್ಯತೆಯುಳ್ಳವಾಗಿದ್ದರೆ ಅರ್ಥಕಾಮಗಳು ಆನುಷಂಗಿಕವಾದುವುಗಳು ಎಂಬುದನ್ನು ಗಮನಿಸಬಹುದು.

* * * *

೪. ಮೋಕ್ಷದ ಸ್ವರೂಪ

ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಚಿಂತಕರೆಲ್ಲರೂ ಒಪ್ಪಿರುವುದೇನೆಂದರೆ ಜೀವನದಲ್ಲಿ ಪ್ರತಿಯೊಂದು ಪ್ರಯತ್ನ ಅಥವಾ ಚಟುವಟಿಕೆ ಸಂತೋಷವನ್ನು ಪಡೆಯುವುದರತ್ತಲೇ ಪ್ರೇರಿತವಾಗಿರುತ್ತದೆ. ಅಯೋಧ್ಯಾಕಾಂಡದಲ್ಲಿ ರಾಮ ಹೇಳುವುದು ಹೀಗೆ –

ಆತ್ಮಾ ಸುಖೇ ನಿಯೋಕ್ತವ್ಯಃ ಸುಖಭಾಜಿಃ ಪ್ರಜಾಸ್ಸ್ಮೃತಾಃ ॥

ಆದರೆ ಅಯ್ಯೋ! ನಾವು ಅನುಭವಿಸುವ ಸಂತೋಷ ಕ್ಷಣಿಕವಾದುದು, ಸುಳಿದುಹೋಗುವಂತಹುದು ಮತ್ತು ಭ್ರಾಂತಿಕಾರಕವಾದುದು ಮತ್ತು ಅನೇಕ ವೇಳೆ ವಿಪತ್ತು ಮತ್ತು ಯಾತನೆಗಳನ್ನೊಳಗೊಂಡಿರುವಂತಹುದು ಎಂಬ ದುಃಖಕಾರಕ ಸತ್ಯ ಉಳಿದುಬಿಡುತ್ತದೆ. ಅಷ್ಟೇ ಅಲ್ಲದೆ ಸಂತೋಷದಿಂದಿರುವುದು ಎಲ್ಲರ ಪಾಲಿಗೂ ಲಭ್ಯವಾಗುವಂತಹುದಲ್ಲ. ಸಂತೋಷದ ಕ್ಷಣಗಳನ್ನು ಕಳೆಯುವವರು ಸಹ ಕೊನೆಯವರೆಗೂ ಸಂತೋಷದಿಂದಿರುವ ಅದೃಷ್ಟ ಪಡೆದಿರುವುದಿಲ್ಲ.

ಆದ್ದರಿಂದಲೇ ಮನುಷ್ಯ ಶುದ್ಧವಾದ ಪೂರ್ಣಸಂತೋಷಕ್ಕಾಗಿ, ವಿಪತ್ತು ಮತ್ತು ನೋವಿನ ಅತ್ಯಲ್ಪ ಸುಳಿವಿನಿಂದಲೂ ಮುಕ್ತವಾದ, ಶಾಶ್ವತವಾದ ಸಂತೋಷಕ್ಕಾಗಿ ಹಾತೊರೆಯುತ್ತಾನೆ. ಇಲ್ಲಿ, ಈ ಭೂಮಿಯ ಮೇಲೆ 'ಯಾವುದಿಲ್ಲವೋ ಅದಕ್ಕಾಗಿ ನಾವು ಮೊದಲೂ ಮತ್ತು ನಂತರವೂ ದೃಷ್ಟಿಹರಿಸುತ್ತೇವೆ ಮತ್ತು ಕೊರಗುತ್ತೇವೆ.' ನಮ್ಮ ಅತ್ಯಂತ ಪ್ರಾಮಾಣಿಕವಾದ ನಗೆ ನೋವಿನಿಂದ ತುಂಬಿರುತ್ತದೆ ಮತ್ತು ನಮ್ಮ ಅತ್ಯಂತ ಮಧುರವಾದ ಹಾಡುಗಳು ಅತ್ಯಂತ ದುಃಖಮಯ ಭಾವನೆಗಳನ್ನು ವ್ಯಕ್ತಪಡಿಸುವುದಾಗಿರುತ್ತವೆ. ಸಾವು, ರೋಗ, ವೃದ್ಧಾಪ್ಯ, ಬಡತನ ಮತ್ತು ಬಯಕೆ ತಮ್ಮ ಬೆನ್ನ ಹಿಂದೆಯೇ ಹೇಳಲಾಗದ ಸಂಕಟವನ್ನು ತರುತ್ತವೆ. ಮಾನವ ಹೃದಯ ಮುಂದೂಡಿದ ಭರವಸೆ, ವಿನಾಶಗೊಂಡ ನಿರೀಕ್ಷೆಗಳು, ನುಚ್ಚುನೂರಾದ ಮಹತ್ವಾಕಾಂಕ್ಷೆ ಮತ್ತು ಕೈಗೂಡದ ಬಯಕೆಗಳಿಂದ ಖಿನ್ನಗೊಳ್ಳುತ್ತದೆ. ಶ್ರೀರಾಮ ಮತ್ತೊಮ್ಮೆ ಹೇಳುತ್ತಾನೆ.

ಸರ್ವೇಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ

ಸಂಯೋಗಾ ಪಿಪ್ರಯೋಗಾಂತಾಃ ಮರಣಾಂತಂ ಚ ಜೀವಿತಮ್॥ (ಅಯೋಧ್ಯಾಕಾಂಡ)

ಆದ್ದರಿಂದಲೇ ಮನುಷ್ಯ ಐಹಿಕ ಅಸ್ತಿತ್ವವನ್ನು ಮೀರಿದ ಪರಮೋಚ್ಚ ಆನಂದದ

ಸ್ಥಿತಿಗಾಗಿ ಕಾತರದಿಂದ ಎದುರುನೋಡುತ್ತಾನೆ. ಭಾರತದ ರಾಷ್ಟ್ರಕವಿ ಕಾಳಿದಾಸ ವಿಷಣ್ಣತೆಯೊಂದಿಗೆ ಪ್ರಶ್ನಿಸುತ್ತಾನೆ, ಹೀಗೆ :

ಕಸ್ಯಾತ್ಯಂತಂ ಸುಖಮುಪನತಂ ದುಃಖಮೇಕಾಂತತೋ ವಾ ।

ನೀಚೈಗಚ್ಛತ್ಯುಪರಿ ಚ ದಶಾ ಚಕ್ರನೇಮಿಕ್ರಮೇಣ ॥

'ಯಾರ ಪಾಲಿಗೆ ಕೊನೆಯವರೆಗೆ ಸುಖದಿಂದಿರುವ ಭಾಗ್ಯ ಒದಗಿಬಂದಿದೆ?' ಆದ್ದರಿಂದಲೇ ನಮ್ಮ ಮಹರ್ಷಿಗಳು ಮತ್ತು ತತ್ತ್ವಜ್ಞಾನಿಗಳು ಕಾಮ ಅಥವಾ ಪ್ರಾಪಂಚಿಕ ಸುಖ ಮತ್ತು ಮೋಕ್ಷ ಈ ಎರಡನ್ನೂ ಮಾನ್ಯ ಮಾಡುತ್ತಾರೆ. ಈ ಎರಡನ್ನೂ ಸಂತೋಷವೆಂದೇ ಪರಿಗಣಿಸಲಾಗಿದೆ ಮತ್ತು ಈ ಎರಡರಲ್ಲಿ ಮೋಕ್ಷವನ್ನು ಪರಮೋಚ್ಚವಾದ ಪುರುಷಾರ್ಥವೆಂದು ಪರಿಗಣಿಸಲಾಗಿದೆ. ತಮಿಳಿನ ಶ್ರೇಷ್ಠ ಕೃತಿಗಳಲ್ಲಿ ಈ ಎರಡಕ್ಕೂ ಸಮಾನವಾಗಿರುವ ಸಂತೋಷದ ಅಂಶವನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸುವ ದೃಷ್ಟಿಯಿಂದ ಕಾಮವನ್ನು 'ಚಿತ್ರಿನ್ಬ' ಅಥವಾ ಕೇವಲ 'ಇನ್ಬ' ಎಂದು ಮತ್ತು ಮೋಕ್ಷವನ್ನು 'ಪೇರಿನ್ಬ' ಎಂದೂ ಉಲ್ಲೇಖಿಸಲಾಗಿದೆ.

ಇನ್ನು ಮೋಕ್ಷ ಎನ್ನುವ ಪದದ ಅಕ್ಷರಶಃ ಅರ್ಥ ಬಿಡುಗಡೆ, ಅಂದರೆ ಬಂಧನದಿಂದ ಆತ್ಮದ ಬಿಡುಗಡೆ 'ಬಂಧಮೋಕ್ಷ'. ಇಂದ್ರಿಯಗಳ ಸಂಕೋಲೆಗೆ ಸಿಲುಕಿ ಕ್ಷುದ್ರವಾದ ಭೌತಿಕ ವಸ್ತುಗಳ ಬಲೆಗೆ ಸಿಲುಕಿ ಎಲ್ಲಿಯವರೆಗೆ ಆತ್ಮವು ದೇಹದಲ್ಲಿ ಬಂಧಿತವಾಗಿರುವುದೋ ಅಲ್ಲಿಯರೆಗೆ ಅದು 'ಆಧಿಬೌತಿಕ', 'ಆಧ್ಯಾತ್ಮಿಕ' ಮತ್ತು 'ಆಧಿದೈವಿಕ'– ದೈಹಿಕ, ಮಾನಸಿಕ ಮತ್ತು ದೈವಿಕ ಎಂಬ– ತಾಪತ್ರಯಗಳು ಅರ್ಥಾತ್ ಮೂರು ಬಗೆಯ ಸಂಕಟ, ನೋವು ಮತ್ತು ಯಾತನೆಗಳ ಸ್ಪರ್ಶದಿಂದ ಎಂದೂ ಮುಕ್ತವಾಗುವುದಿಲ್ಲ ಎಂದು ನಮ್ಮ ಶ್ರೇಷ್ಠ ತತ್ವಜ್ಞಾನಿಗಳು ಪ್ರತಿಪಾದಿಸುತ್ತಾರೆ. ಇಲ್ಲಿ ಹಿಂದೂ ಕರ್ಮಸಿದ್ಧಾಂತ ಮತ್ತು ಪುನರ್ಜನ್ಮ ಸಮಗ್ರವಾಗಿ ಕಾರ್ಯರೂಪಕ್ಕೆ ಬರುತ್ತದೆ. ದೇಹದಲ್ಲಿ ಆತ್ಮದ ಬಂಧನ ಅದರ ಪೂರ್ವಜನ್ಮದ ಕರ್ಮದ ಪರಿಣಾಮ. ಆತ್ಮವು ಅನೇಕ ದೇಹಗಳನ್ನು ತಳೆಯುತ್ತದೆ. ಮತ್ತು ಕರ್ಮದ ಒಳ್ಳೆಯ ಮತ್ತು ಕೆಟ್ಟ ಫಲಗಳನ್ನು ಅನುಭವಿಸುವುದಕ್ಕಾಗಿ ಜನನ– ಮರಣಗಳ ಚಕ್ರದ ಮೂಲಕ ಸಾಗುತ್ತದೆ. ತನ್ನ ಬಾಳಿನ ಎಲ್ಲ ಕೆಡುಕುಗಳಿಗೂ ಹಿಂದಿನ ಜನ್ಮಗಳ ಆತನ ಕಾರ್ಯಗಳ ದೆಸೆಯಿಂದಲಾಗಿ ಮಾನವನನ್ನು ಜವಾಬ್ದಾರನನ್ನಾಗಿ ಮಾಡಲಾಗುತ್ತದೆ. ಅಂಥ ಕಾರ್ಯಗಳ ಪರಿಣಾಮಗಳನ್ನೇ ಆತ ಅನುಭವಿಸುತ್ತಿದ್ದಾನೆ. ಆದ್ದರಿಂದ ಪ್ರಯತ್ನವೇನಿದ್ದರೂ ಕರ್ಮದ ಪರಿಣಾಮಗಳಿಂದ ತಪ್ಪಿಸಿಕೊಳ್ಳುವುದು ಮತ್ತು ಮುಂದೆಂದೂ ಕರ್ಮ ಯಾವುದೇ ಪರಿಣಾಮ ಬೀರದಂತಹ ಸ್ಥಿತಿಯನ್ನು ಪಡೆದುಕೊಳ್ಳುವುದು ಎಂದು ಭಾರತೀಯ ಚಿಂತಕರು ವಾದಿಸುತ್ತಾರೆ. ಅವರು, ಮುಂದೆಂದೂ ಮೊಳಕೆ ಹೊರಬರುವ ಸಾಮರ್ಥ್ಯವಿಲ್ಲದ ಹುರಿದ ಬೀಜಗಳ ಉದಾಹರಣೆ ನೀಡುತ್ತಾರೆ. ಇದೇ ರೀತಿಯಲ್ಲಿ ಮನುಷ್ಯನು ತನ್ನ ಜೀವಿತಾವಧಿಯಲ್ಲಿ

ಆಚರಿಸುವ ಕಾರ್ಯಗಳಿಗೆ ಸಂಸ್ಕಾರಗಳೆಂದು ಕರೆಯಲಾಗುವುಗಳು ಹುಟ್ಟದಂತೆ ಮಾಡುವ ಸಾಧ್ಯತೆ ಇದೆ. ಆ ಸಂಸ್ಕಾರಗಳು ಈ ವರ್ತಮಾನದ ಬಾಳಿಗೆ ಮಾತ್ರ ಸೀಮಿತವಾಗಿಲ್ಲದ, ಆದರೆ ಭವಿಷ್ಯತ್ತಿನ ಬದುಕುಗಳಲ್ಲಿಯೂ ರೂಢಿಗೆ ಬರುವಂತಹ ಆ ಕಾರ್ಯಗಳ ಪರಿಣಾಮಗಳನ್ನು ಉತ್ಪಾದನೆ ಮಾಡುತ್ತವೆ. ಆದ್ದರಿಂದಲೇ ಅವರು, ಮನುಷ್ಯನ ಕರ್ಮಗಳ ಪರಿಣಾಮಗಳನ್ನು ತೊಲಗಿಸಬಹುದಾದ ಮಾರ್ಗಗಳನ್ನು ಕುರಿತು ಚರ್ಚಿಸಿದ್ದಾರೆ. ಆದ್ದರಿಂದ, ಅವರ ಮೋಕ್ಷದ ಕಲ್ಪನೆಯೇನೆಂದರೆ, ಆತ್ಮವು ಮುಂದೆಂದೂ ಕರ್ಮಗಳ ಪರಿಣಾಮಗಳಿಗೆ ಒಳಗಾಗದಿರುವ ಮತ್ತು ಅಂತಹ ಕರ್ಮಗಳ ಪರಿಣಾಮಗಳ ದೆಸೆಯಿಂದ ಮುಂದಿನ ಜನ್ಮಗಳಲ್ಲಿ ಮತ್ತೂ ಹೆಚ್ಚಿನ ಜನ್ಮಗಳನ್ನು ತಳೆಯುವ ಸಾಧ್ಯತೆಯಿಂದ ಮುಕ್ತವಾದ ಒಂದು ವಿಶಿಷ್ಟ ಸ್ಥಿತಿ. ತನ್ನ ನ್ಯಾಯ ಸೂತ್ರದಲ್ಲಿ ಗೌತಮ ಮೋಕ್ಷದ ಸ್ವರೂಪ ಮತ್ತು ಅದನ್ನು ಪಡೆಯುವ ಸಾಧನಗಳನ್ನು ಸ್ಪಷ್ಟವಾಗಿ ನಿರೂಪಿಸಿದ್ದಾನೆ.

ದುಃಖಜನ್ಮಪ್ರವೃತ್ತಿದೋಷಮಿಥ್ಯಾಜ್ಞಾನಾನಾಂ ಉತ್ತರೋತ್ತರಾಪಾಯೇ ತದನಂತರಾಪಾಯಾತ್ ಅಪವರ್ಗಃ ॥

ಮಿಥ್ಯಾಜ್ಞಾನದ ನಾಶದಿಂದ ಮೋಕ್ಷವು ಫಲಿಸುತ್ತದೆ. ಅದು ರಾಗ ಮತ್ತು ದ್ವೇಷವೆಂಬ ದೋಷಗಳ ನಾಶಕ್ಕೆ ಕಾರಣವಾಗುತ್ತದೆ. ಅದು ಎಲ್ಲ ಕರ್ಮಗಳನ್ನೂ ನಾಶಮಾಡುತ್ತದೆ ಎಲ್ಲ ಜನ್ಮಗಳಿಗೆ ಕೊನೆಹಾಡುತ್ತದೆ. ದುಃಖದ ನಿವಾರಣೆಯ ಫಲವನ್ನು ನೀಡುತ್ತದೆ. ಮೋಕ್ಷಪ್ರಾಪ್ತಿಯ ಮೆಟ್ಟಲುಗಳನ್ನು ಈ ಸೂತ್ರದಿಂದ ಹೀಗೆ ಸೂಚಿತವಾಗಿವೆ: ಪ್ರಪಂಚ ಮತ್ತು ಭಗವಂತನ ನಿಜವಾದ ಜ್ಞಾನವನ್ನು ಗಳಿಸುವುದರ ಮೂಲಕ ನಾವು ಹೊಂದಿರುವ ಮಿಥ್ಯಾ ಮತ್ತು ಭ್ರಾಂತಿಕಾರಕ ಜ್ಞಾನವನ್ನು ತೊಡೆದುಹಾಕಲು ಪ್ರಯತ್ನವನ್ನು ಮಾಡಬೇಕು. ಆತ್ಮಕ್ಕೆ ಕಳಂಕವುಂಟುಮಾಡುವ ರಾಗ ಮತ್ತು ದ್ವೇಷಗಳೆಂಬ ಎರಡು ಅನಿಷ್ಟಗಳನ್ನು ನೈಜಜ್ಞಾನ ನಾಶಗೊಳಿಸುತ್ತದೆ. ಮನಸ್ಸಿನಿಂದ ರಾಗ ಮತ್ತು ದ್ವೇಷಗಳನ್ನು ತೊಲಗಿಸಿದಾಗ ಕಾರ್ಯಪ್ರವೃತ್ತಿ ನಾಶಹೊಂದುತ್ತದೆ; ಮತ್ತು ಕಾರ್ಯವು ನಿಲುಗಡೆಯಾದಾಗ ಜನ್ಮ ಸಂಪೂರ್ಣವಾಗಿ ಕಣ್ಮರೆಯಾಗುತ್ತದೆ. ಜನ್ಮ ಅಂತ್ಯಗೊಂಡಾಗ ದುಃಖ ಕೊನೆಗೊಳ್ಳುತ್ತದೆ ಮತ್ತು ಆತ್ಮವು ಜನನ– ಮರಣಗಳ ಚಕ್ರದಿಂದ ಮುಕ್ತವಾದಾಗ ಮೋಕ್ಷ ದೊರೆಯುತ್ತದೆ. ಆದ್ದರಿಂದ ಭಾರತೀಯ ಚಿಂತಕರ ಪ್ರಕಾರ ಮೋಕ್ಷವೆನ್ನುವುದು ಕರ್ಮದ ಪರಿಣಾಮಗಳ ನಿಲುಗಡೆಯಿರುವ ಪರಮೋಚ್ಚ ಆನಂದದ ಪರಿಪೂರ್ಣ ಸ್ಥಿತಿಯೇ ಆಗಿದೆ. ಆದರೆ, ಮೋಕ್ಷದ ಈ ಆದರ್ಶದ ವಿವರಗಳನ್ನು ಕುರಿತಂತೆ ಅಭಿಪ್ರಾಯಭೇದವಿದೆ. ಅದ್ವೈತ ಪರಂಪರೆಯ ಪ್ರಕಾರ ಮೋಕ್ಷ ಎರಡು ಪ್ರಕಾರವಾದುದು, 'ವಿದೇಹಮುಕ್ತಿ' ಮತ್ತು 'ಜೀವನ್ಮುಕ್ತಿ.' ಈ ಎರಡು ಪ್ರಕಾರಗಳು ಕೆಲವೊಮ್ಮೆ 'ಸದ್ಯೋಮುಕ್ತಿ' ಮತ್ತು 'ಕ್ರಮಮುಕ್ತಿ' ಎಂದೂ ಉಲ್ಲೇಖಿತವಾಗಿರುವುದುಂಟು. ತನ್ನ ಐಹಿಕ ಅಸ್ತಿತ್ವದ ಅವಧಿಯಲ್ಲಿ

ಆತ್ಮವು ಸಶರೀರಸ್ಥಿತಿಯಲ್ಲಿದ್ದಾಗಲೂ, ಸಾರಭೂತವಾಗಿ ಚೈತನ್ಯವೇ ಆಗಿರುವ ಮನುಷ್ಯನ ಜೀವನ್ಮುಕ್ತಿಯ ಸ್ಥಿತಿಯನ್ನು ಪಡೆಯಬಹುದೆಂದು ಅದ್ವೈತಚಿಂತಕರು ಅಭಿಪ್ರಾಯ ಪಡುತ್ತಾರೆ. ಈ ಸ್ಥಿತಿಯಲ್ಲಿ ಬಂಧನದ ಅನಿಷ್ಟ ಪರಿಣಾಮಗಳಿಂದ, ದೇಹದ ಸಂಕೋಲೆಗಳಿಂದ ಮತ್ತು ಭೌತದ್ರವ್ಯಗಳ ಬಲೆಯಿಂದ ಪ್ರಭಾವಿತನಾಗದೆ ಆತ ಚೈತನ್ಯದಲ್ಲಿ ಸಂಪೂರ್ಣವಾಗಿ ನೆಲೆಸಬಹುದು. ಉಪನಿಷತ್ತಿನ ಹೇಳಿಕೆಯ ಮೇಲೆ ಅವರು ಅವಲಂಬಿಸುತ್ತಾರೆ.

ಅಶರೀರಂ ವಾ ವಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ ।

ಇದರ ಅರ್ಥವೇನೆಂದರೆ, ಶರೀರರಹಿತನಾದವನೋ ಎಂಬಂತಿರುವವನು 'ಪ್ರಿಯ'ದಿಂದಲಾಗಲಿ 'ಅಪ್ರಿಯ'ದಿಂದಲಾಗಲಿ (ಇಷ್ಟಾನಿಷ್ಟಗಳು) ಪ್ರಭಾವಿತನಾಗುವುದಿಲ್ಲ. ಅಂತಹ ಸ್ಥಿತಿಯನ್ನು ಪಡೆಯಬಹುದಾದ ಸಾಧನೆಗಳ ಬಗೆಗೂ ವಿಶದವಾಗಿ ಚರ್ಚಿಸಲಾಗಿದೆ, ಮತ್ತು ದೃಢಪಡಿಸಲಾಗಿದೆ. ಭೌತದ್ರವ್ಯದಲ್ಲಿ ಆತ್ಮದ ಬಂಧನ, ಅವರೇ ಬಳಸಿರುವ ಮಾತಿನಂತೆ, ಆದಿಯಿಲ್ಲದ ಅಜ್ಞಾನ ಅಥವಾ 'ಅನಾದಿ–ಅವಿದ್ಯೆ'ಯ ದೆಸೆಯಿಂದ ಉಂಟಾಗುತ್ತದೆ ಮತ್ತು ಒಮ್ಮೆ ಈ ಅವಿದ್ಯೆಯನ್ನು ಜ್ಞಾನದಿಂದ ನಾಶಮಾಡಿದಲ್ಲಿ ಕರ್ಮದ ಅನಿಷ್ಠ ಪರಿಣಾಮಗಳು ನಾಶವಾಗುತ್ತವೆ. ಕರ್ಮವು ಮೂರು ವಿಧವಾದುದು. ಭವಿಷ್ಯಜೀವನದಲ್ಲಿ ಪರಿಣಾಮವುಂಟು ಮಾಡುವ ಕರ್ಮಗಳನ್ನು 'ಆಗಾಮಿ ಕರ್ಮ'ಗಳೆಂದು ಕರೆಯಲಾಗಿದೆ. ಹಿಂದಿನ ಜನ್ಮಗಳಲ್ಲಿ ಈ ಮೊದಲೇ ಆಚರಿಸಲಾಗಿರುವ ಮತ್ತು ಭವಿಷ್ಯದಲ್ಲಿ ಪರಿಣಾಮಗಳನ್ನುಂಟುಮಾಡಬಹುದಾದುದನ್ನು 'ಸಂಚಿತ' ಎಂದು ಕರೆಯಲಾಗಿದೆ. ಮತ್ತು ವರ್ತಮಾನದ ಬಾಳಿನಲ್ಲಿ ಈಗಾಲೇ ಫಲನೀಡಲಾರಂಭಿಸಿರುವುಗಳನ್ನು 'ಪ್ರಾರಬ್ಧ' ಎಂದು ಕರೆಯಲಾಗಿದೆ. ತನ್ನ ಜ್ಞಾನದ ಸಾಕ್ಷಾತ್ಕಾರದ ದೆಸೆಯಿಂದ ಮನುಷ್ಯನೊಬ್ಬನು ಆಗಾಮಿ ಮತ್ತು ಸಂಚಿತ ಕರ್ಮಗಳನ್ನು ಸಂಪೂರ್ಣವಾಗಿ ನಾಶಮಾಡಿದ್ದರೂ, ವರ್ತಮಾನ ಜೀವನದಲ್ಲಿ ಫಲನೀಡಲಾರಂಭಿಸುವ ಪ್ರಾರಬ್ಧಕರ್ಮಗಳು ನಾಶಹೊಂದುವುದಿಲ್ಲ ಮತ್ತು ವರ್ತಮಾನದ ಜೀವನವಿರುವವರೆಗೂ ಅವು ತಮ್ಮ ಪರಿಣಾಮಗಳನ್ನುಂಟುಮಾಡುವುದನ್ನು ಮುಂದುವರಿಸುತ್ತವೆ. ಗುರಿಯನ್ನು ಮುಟ್ಟಿದ ನಂತರವೇ ಖಚಿತವಾಗಿ ನಿಲುಗಡೆಯಾಗುವ ಮೊದಲೇ ಗುರಿಯಿಟ್ಟು ಹೊಡೆದ ಬಾಣದ ಉದಾಹರಣೆಯನ್ನು ನೀಡಲಾಗಿದೆ. ಹೀಗಾಗಿ, ಜೀವನ್ಮುಕ್ತಿಯ ಸ್ಥಿತಿಯಲ್ಲಿ ಮನುಷ್ಯನು ಬಾಳನ್ನು ನಡೆಸುತ್ತ ಸಾಗುತ್ತಾನೆ. ಮತ್ತು ಸಾವಿನಲ್ಲಿ ಮುಕ್ತಿಯ ಸ್ಥಿತಿಯನ್ನು ಹೊಂದುವವರೆಗೆ ತನ್ನ ಪೂರ್ವಜನ್ಮದ ಕರ್ಮದ ಪರಿಣಾಮಗಳನ್ನು ಅನುಭವಿಸುತ್ತಾನೆಂದು ಭಾವಿಸಲಾಗಿದೆ. ಮತ್ತು ಮತಭೇದವುಳ್ಳ ಬೌದ್ಧ ಧರ್ಮವೂ, ವೇದಾಂತ ಸಂಪ್ರದಾಯಕ್ಕೆ ಸೇರಿಲ್ಲದಂತಹ ಸಾಂಖ್ಯ ಮೊದಲಾದ ದರ್ಶನಗಳು ಸಹ ಜೀವನ್ಮುಕ್ತಿಯನ್ನು ಅಂಗೀಕರಿಸುತ್ತವೆ.

ಇತ್ತೀಚಿನ ವರ್ಷಗಳಲ್ಲಿಯೂ ಇಹದಲ್ಲಿ ಜೀವನ್ಮುಕ್ತಿಯನ್ನು ಪಡೆಯುವ ಸಾಧ್ಯತೆಯು ಸದಾಶಿವ ಬ್ರಹ್ಮೇಂದ್ರ, ಕಾಶಿಯ ತ್ರಿಲಿಂಗಸ್ವಾಮಿ, ತಿರುವಣ್ಣಾಮಲೆಯ ಶೇಷಾದ್ರಿಸ್ವಾಮಿ, ಕುಂಭಕೋಣಂನ ಮೌನಸ್ವಾಮಿ ಮುಂತಾದ ಸಂತರ ಬದುಕಿನಿಂದ ಪ್ರದರ್ಶಿತವಾಗಿದೆ. ವೇದಾಂತಚಿಂತಕರ ಮತ್ತೊಂದು ಪಂಥ ಮನುಷ್ಯನಿಗೆ ಭೂಮಿಯ ಮೇಲಣ ತನ್ನ ವರ್ತಮಾನದ ಬಾಳಿನ ಅವಧಿಯಲ್ಲಿ ಮುಕ್ತಿಯನ್ನು ಪಡೆಯುವುದು ಅಸಾಧ್ಯವೆಂದೂ ಮತ್ತು ಮುಕ್ತಿ ಆತನಿಗೆ ಮರಣದ ನಂತರ ಮಾತ್ರವೇ ಲಭಿಸಬಹುದೆಂದೂ ಭಾವಿಸುತ್ತದೆ. ಚಿಂತನೆಯ ವಿಭಿನ್ನಪಂಥದವರ ನಡುವೆ ಮತ್ತೊಂದು ಭಿನ್ನಾಭಿಪ್ರಾಯವೂ ಇದೆ. ನ್ಯಾಯ ಮತ್ತು ಸಾಂಖ್ಯಪಂಥದವರು ಮುಕ್ತಿ ಸಂತೋಷ ಮತ್ತು ಆನಂದದ ಸ್ವಭಾವದ್ದಲ್ಲವೆಂಬ, ಆದರೆ ಅದು ಕೇವಲ ನೇತ್ಯಾತ್ಮಕವಾದುದೆಂಬ, ಅರ್ಥಾತ್ ನೋವು ಮತ್ತು ಯಾತನೆಯಿಂದ ಬಿಡುಗಡೆಯೆಂಬ ದೃಷ್ಟಿಕೋನವುಳ್ಳವರಾಗಿದ್ದಾರೆ. ವೇದಾಂತಪಂಥದವರ ಪ್ರಕಾರ– ಇದನ್ನು ಭಾರತೀಯ ಚಿಂತನೆಯ ಅಂತಿಮ ತೀರ್ಮಾನವೆಂದು ಪರಿಗಣಿಸಬಹುದು – ಈ ಆದರ್ಶ ಇತ್ಯಾತ್ಮಕವಾದುದು, ಅರ್ಥಾತ್ ಪರಮೋಚ್ಚವಾದ, ಶುದ್ಧವಾದ, ಸಂಸಾರವನ್ನು ಅಥವಾ ಜನನ ಮತ್ತು ಮರಣಗಳ ಚಕ್ರವನ್ನು ಆತ್ಮ ಪ್ರವೇಶಿಸುವ ಸಾಧ್ಯತೆಯಿಂದ ಮತ್ತು ಎಲ್ಲ ದುಃಖಗಳಿಂದ ಮುಕ್ತವಾದ ಅನಂತ ಆನಂದ. ಭಾರತೀಯ ಚಿಂತಕರ ವಿಭಿನ್ನಪಂಥಗಳ ನಡುವೆ ಮೋಕ್ಷವನ್ನು ಕುರಿತಂತೆ ಇರುವ ಈ ಅಭಿಪ್ರಾಯದ ಭಿನ್ನತೆಗಳನ್ನು ಮಧುಸೂದನ ಸರಸ್ವತಿಗಳ ಕೃತಿಗಳಾದ 'ವೇದಾಂತಕಲ್ಪಲತಿಕಾ' ಮತ್ತು 'ಸಂಕ್ಷೇಪ ಶಾರೀರಿಕ'ದ ಮೇಲಣ ಅವರ ವ್ಯಾಖ್ಯಾನದಲ್ಲಿ ವಿಶದವಾಗಿ ವಿವರಿಸಲಾಗಿದೆ. ಏನೇ ಆದರೂ, ಮಾನವ ಆತ್ಮದ ಅತ್ಯುಚ್ಚ ಹೆಬ್ಬಯಕೆ ಮೋಕ್ಷವನ್ನು ಪಡೆಯುವುದೇ ಆಗಿರಬೇಕು, ಮಾನವ ಜೀವನ ಅದಕ್ಕಾಗಿ ಒಂದು ನಿರಂತರವಾದ ಸಿದ್ಧತೆಯಾಗಿರಬೇಕು ಮತ್ತು ಮುಕ್ತಿಗಾಗಿ ಹಂಬಲಿಸುವುದು ಮನುಷ್ಯನ ಇಡೀ ವ್ಯಕ್ತಿತ್ವವನ್ನು ವ್ಯಾಪಿಸಿಕೊಳ್ಳಬೇಕು ಎಂಬ ಬಗ್ಗೆ ಎಲ್ಲ ಭಾರತೀಯ ಚಿಂತಕರೂ ಒಮ್ಮತವುಳ್ಳವರಾಗಿದ್ದಾರೆ.

* * * *

೫. ಮೋಕ್ಷದ ಆದರ್ಶ : ಭಾರತೀಯ ನೀತಿಶಾಸ್ತ್ರಕ್ಕೆ ವಿಶಿಷ್ಟವಾದುದು

ಭಾರತೀಯ ಚಿಂತನೆಯ ಎಲ್ಲ ಪಂಥಗಳಿಂದ ಮಾನವನ ಹೆಬ್ಬಯಕೆಯ ಪರಮೋಚ್ಚ ಗುರಿ ಮತ್ತು ಎಲ್ಲ ಮಾನವಪ್ರಯತ್ನದ ಧ್ಯೇಯ ಮೋಕ್ಷವೆಂಬುದರ ಅಂಗೀಕಾರ ಹಿಂದೂ ನೀತಿಶಾಸ್ತ್ರಕ್ಕೆ ಒಂದು ಅನುಪಮವಾದ ದಿಕ್ಕನ್ನು ನೀಡಿದೆ. ಅದು, ಸಾಧಕರ ಮೇಲೆ ನಿಸ್ವಾರ್ಥವಾದ ಬದುಕು, ನಿರ್ಲಿಪ್ತವಾದ ಸೇವೆ ಮತ್ತು ಕರ್ತವ್ಯ ಹಾಗೂ ಅಹಂಕಾರದ ನಿರ್ಮೂಲನ, ಸಂಕ್ಷಿಪ್ತವಾಗಿ ಕರ್ಮಯೋಗ ಅಥವಾ ನಿಷ್ಕಾಮಕರ್ಮಯೋಗಕ್ಕೆ ಪ್ರಾಮುಖ್ಯತೆಯನ್ನು ವಿಧಿಸಿದೆ. ಹಾಗಲ್ಲದಿದ್ದರೆ, 'ಫಲಾಭಿಸಂಧಿ'ಯೊಂದಿಗೆ ಮಾಡುವ ಮಾನವನ ಸಾಮಾನ್ಯ ಕರ್ಮ ಮತ್ತು ಅಹಂಕಾರ ಪ್ರಜ್ಞೆ ಆತ್ಮದ ಬಂಧನಕ್ಕೆ ಅವಕಾಶಮಾಡಿಕೊಡುತ್ತದೆ ಮತ್ತು ಮೋಕ್ಷ ತಲುಪಲಾಗದಷ್ಟು ಹಿಂದೆ ಸರಿಯುತ್ತದೆ. ಭಗವದ್ಗೀತೆಯ ಏಳನೆಯ ಅಧ್ಯಾಯದಲ್ಲಿ ಪರಮಾತ್ಮ ಘೋಷಿಸಿರುವುದು ಹೀಗೆ–

'ಯಾರ ಪಾಪಗಳು ನಾಶವಾಗಿದೆಯೋ ಅಂತಹ ಜನರು ಮಾಡಿದ ಪುಣ್ಯ ಕರ್ಮಗಳಿಗೆ ದ್ವಂದ್ವಗಳಿಂದಲೂ, ದೋಷಗಳಿಂದಲೂ ಮುಕ್ತಿ ದೊರೆಯುತ್ತದೆ. ಅವರು ನನ್ನನ್ನು ದೃಢವಾದ ಶ್ರದ್ಧೆಯಿಂದ ಭಜಿಸುತ್ತಾರೆ. ಹೀಗೆ ಮುಪ್ಪು ಮತ್ತು ಸಾವಿನಿಂದ ಮುಕ್ತಿಯನ್ನು ಪಡೆಯಲು ಯಾರು ಶ್ರಮಿಸುತ್ತಾರೋ ಅವರು ಬ್ರಹ್ಮವನ್ನು ತಿಳಿಯುತ್ತಾರೆ.'

ಯೇಷಾಂ ತ್ವಂತರ್ಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್।
ತೇ ದ್ವಂದ್ವಮೋಹನಿರ್ಮುಕ್ತಾ ಭಜಂತೇ ಮಾಂ ದೃಢವ್ರತಾಃ ॥ ೨೮ ॥
ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತಂತಿಯೇ ।
ತೇ ಬ್ರಹ್ಮ ತದ್ವಿದುಃ ಕೃತ್ಸ್ನಮಧ್ಯಾತ್ಮಂ ಕರ್ಮ ಚಾಖಿಲಮ್ ॥ ೨೯ ॥

ಜೀವನದ ಅತ್ಯುನ್ನತ ಹಿತಾಸಕ್ತಿಗಳನ್ನು ನಿಸ್ವಾರ್ಥ ಮತ್ತು ನಿರ್ಲಿಪ್ತವಾದ ಕರ್ತವ್ಯ ಶ್ರದ್ಧೆಗಳ ಅಭ್ಯಾಸದಿಂದ ಪಡೆಯಲು ಸಾಧ್ಯ ಎಂಬುದು ನಮ್ಮ ಮಹರ್ಷಿಗಳ ಮತ್ತು ದ್ರಷ್ಟಾರರ ದೃಢವಾದ ನಿಶ್ಚಯವಾಗಿದೆ. ಮೋಕ್ಷವನ್ನು ಪಡೆಯಬೇಕೆಂಬ

ಹೆಬ್ಬಯಕೆಯುಳ್ಳ ಮನುಷ್ಯನು, ಈ ನಂಬಿಕೆಯ ಸ್ವಾಭಾವಿಕ ಪರಿಣಾಮವಾಗಿ, ಮಾನವನು ಬೇರೆಲ್ಲಕ್ಕಿಂತಲೂ ಹೆಚ್ಚಾಗಿ ಮೂಲಭೂತವಾಗಿ ಒಂದು ಚೈತನ್ಯ ಮತ್ತು ಭೂಮಿಯ ಮೇಲೆಯೂ ಅದು ಚೈತನ್ಯದ ಬಾಳ್ವೆ ಎಂದು, ಅಥವಾ ಆಲ್ಡಸ್ ಹಕ್ಸ್ಲಿ ಅರ್ಥಗರ್ಭಿತವಾಗಿ ವ್ಯಕ್ತಪಡಿಸುವಂತೆ ಅದು 'ಆತ್ಮಕ್ಕೆ ಸಾಯವುದು' ಮತ್ತು ಇದು ಇಹದಲ್ಲಿಯಾಗಲಿ ಅಥವಾ ಪರದಲ್ಲಿಯಾಗಲಿ ಮೋಕ್ಷವನ್ನು ಪಡೆಯುವುದಕ್ಕೆ ಆತನನ್ನು ಸಮರ್ಥಗೊಳಿಸುತ್ತದೆ ಎಂಬ ತೀರ್ಮಾನಕ್ಕೆ ಬರುತ್ತಾನೆ. ವಾಸ್ತವವಾಗಿ ಮಹಾತ್ಮಾ ಗಾಂಧಿಯವರ ಬಗ್ಗೆ ರೇ॥ ಹೋಮ್ಸ್‌ರವರು ಹೇಳುವಂತೆ 'ಚಿರಂತನೆಯಲ್ಲಿ ಆತನಿಗಿದ್ದ ದೃಢವಿಶ್ವಾಸ ವರ್ತಮಾನಕಾಲದಲ್ಲಿ ಆತನ ಸಂತೋಷವನ್ನು ಸಾಧ್ಯಗೊಳಿಸುತ್ತದೆ.' ಆಗ ಮಾತ್ರವೇ ಮನುಷ್ಯ ನಾಶಹೊಂದುವ ಐಹಿಕವಾದ, ಕೊಳಕಾದ ದೇಹದಲ್ಲಿ ಸಿಲುಕಿಕೊಂಡಿರುವ ಚೈತನ್ಯದ ಬಿಡುಗಡೆಯ ಭರವಸೆಯನ್ನು ತಳೆಯಬಹುದು. 'ತಿರುಪ್ಪುಹಳ'ದಿಂದ ಪ್ರಸಿದ್ಧರಾಗಿರುವ ಅರುಣಗಿರಿನಾಥರು ಹೇಳುವಂತೆ 'ಚಡಕಚಡಮೂಡಮಟ್ಟಿ' ಭೌತದ್ರವ್ಯದ ಬಂಧನದಿಂದ ಮತ್ತು ಮತ್ತೆ ಮತ್ತೆ ಬರುವ ಜನನ ಮತ್ತು ಮರಣಗಳ ಚಕ್ರದಿಂದ (ಬಿಡುಗಡೆ). ಗೀತೆಯ ಮೇಲಣ ಉಪನ್ಯಾಸಗಳ ಎರಡನೆಯ ಭಾಗದ ಪುಟ ೧೧೭ರಲ್ಲಿ ಪ್ರೊ॥ ಎಂ. ರಂಗಾಚಾರ್ಯರು ಹೇಳುವಂತೆ, "ಪರಸ್ಪರ ಸಂಬಂಧವುಳ್ಳ ಆಧುನಿಕ ಆನುಷಂಗಿಕ ವಿಜ್ಞಾನಗಳು ಪ್ರಕಟಗೊಳಿಸಿ, ವಿವರಿಸಿರುವಂತೆ ಮಾನವನು ಇತಿಹಾಸ, ಭಗವಂತನ ವಿಶ್ವದ ಆಧಿಪತ್ಯದ ಗುರಿ ವಾಸ್ತವದಲ್ಲಿ ಚೈತನ್ಯದ ಸಾಮರ್ಥ್ಯದ ಹೊರಗೆಡಹುವಿಕೆ ಎಂಬ ಅಭಿಪ್ರಾಯಕ್ಕೆ ಸಾಕಷ್ಟು ಬೆಂಬಲವನ್ನು ನೀಡುತ್ತದೆ ಮತ್ತು ಈ ಹೊರಗೆಡಹುವಿಕೆ ಹೆಚ್ಚಾಗಿ ನೈತಿಕತೆಯ ವಿಕಾಸದ ಮೂಲಕವೇ ಹೊರತು, ಅದಕ್ಕೆ ಭಿನ್ನವಾಗಿ 'ಸ್ವಾಭಾವಿಕ ವಿಕಾಸ'ವೆಂದು ಕರೆಯಲಾಗುವುದರ ಮೂಲಕವಲ್ಲ, ಅಂದರೆ ಹೆಚ್ಚಾಗಿ ಆತ್ಮತ್ಯಾಗದ ಮೂಲಕವೇ ಹೊರತು ಆತ್ಮಸಮರ್ಥನೆಯಿಂದಲ್ಲ, ಹೆಚ್ಚಾಗಿ ಸ್ವಾರ್ಥತ್ಯಾಗದಿಂದಲೇ ಹೊರತು ಅಹಂಕಾರದಿಂದಲ್ಲ." ಹೀಗೆ ಭಾರತೀಯ ಚಿಂತಕರು ಮೋಕ್ಷವನ್ನು ಜೀವನದ ಪರಮೋಚ್ಚ ಗುರಿಯೆಂದು ಪ್ರತಿಪಾದಿಸಿರುವುದು ಮತ್ತು ಅಂಗೀಕರಿಸಿರುವುದು ಸಮಗ್ರ ಬಾಳಿನ ವ್ಯವಸ್ಥೆಗೆ ಬೇರಾವುದೇ ದೇಶದಲ್ಲಿನ ಚಿಂತನೆಯ ಇತಿಹಾಸದಲ್ಲಿ ಸರಿಸಾಟಿಯಿಲ್ಲದ ಮಾರ್ಗದರ್ಶನ ನೀಡಿರುವುದನ್ನು ಮನಗಾಣುತ್ತೇವೆ.

* * * *

೬. ಪುರುಷಾರ್ಥಗಳ ನಡುವಣ ಸಂಬಂಧ – ಕಾಮ

ನಾಲ್ಕು ಪುರುಷಾರ್ಥಗಳ ನಡುವೆ ಮೋಕ್ಷವು ಪರಮೋಚ್ಚ ಅಥವಾ 'ಪರಮ ಪುರುಷಾರ್ಥ'ವಾಗಿರುವುದರಿಂದ ಮೋಕ್ಷವನ್ನು ಕೊನೆಯದೆಂದು ಉಲ್ಲೇಖಿಸಲಾಗಿದೆ. ಈ ಕ್ರಮದಲ್ಲಿ ನಂತರ ಬರುವುದು ಕಾಮ. ಈ ಎರಡಕ್ಕೂ ಸಮಾನವಾಗಿರುವ ಒಂದು ಅಂಶವಿದೆ. ಮೋಕ್ಷವು ಪರಮೋಚ್ಚ, ಶುದ್ಧ, ಚಿರಂತನವಾದ ಸಂತೋಷವಾಗಿದ್ದರೆ, ಕಾಮವು ಸಾಮಾನ್ಯ ಮಾನವರು ಬಾಳಿನಲ್ಲಿ ಅನುಭವಿಸುವ ಸಂತೋಷ ಅಥವಾ ಆನಂದವನ್ನು ಸೂಚಿಸುತ್ತದೆ. ಅವೆರೆಡೂ ಈಗಾಗಲೇ ಉಲ್ಲೇಖಿಸಿರುವಂತೆ ಸಂತೋಷದ ಅಂಶವನ್ನು ಹೊಂದಿವೆ. ಆದ್ದರಿಂದಲೇ ತಮಿಳು ಧಾರ್ಮಿಕ ಸಾಹಿತ್ಯದಲ್ಲಿ ಕಾಮವನ್ನು 'ಚಿತ್ರಿನ್ಬ'ವೆಂದಿದ್ದಾರೆ. ಮೋಕ್ಷವನ್ನು 'ಪೆರಿನ್ಬ' ಎಂದು ಕರೆಯಲಾಗಿದೆ. 'ಚಿತ್ರಿನ್ಬ'ವೆಂಬುದರ ಅರ್ಥವೇನೆಂದರೆ ಭೂಮಿಯ ಮೇಲಣ ಜೀವನದ ಅಲ್ಪವಾದ, ಕ್ಷಣಿಕವಾದ ಸಂತೋಷಗಳು. ಆದರೆ 'ಪೆರಿನ್ಬ' ಪರಮೋಚ್ಚವಾದ ಸಂತೋಷವನ್ನು ಸೂಚಿಸುತ್ತದೆ. ಭಾರತೀಯ ಚಿಂತಕರು ಮೋಕ್ಷ ಮತ್ತು ಕಾಮಗಳೆರಡನ್ನೂ ಪುರುಷಾರ್ಥಗಳೆಂದು ಒಪ್ಪಿಕೊಂಡಿದ್ದಾರೆ. ನಾಲ್ಕು ಪುರುಷಾರ್ಥಗಳ ನಡುವೆ ಕಾಮ ಮತ್ತು ಮೋಕ್ಷಗಳನ್ನು 'ಸಾಧ್ಯ ಪುರುಷಾರ್ಥ'ಗಳೆಂದೂ, ಆದರೆ ಧರ್ಮ ಮತ್ತು ಅರ್ಥಗಳನ್ನು 'ಸಾಧನ ಪುರುಷಾರ್ಥ'ಗಳೆಂದು ಕರೆಯಬಹುದು. ಧರ್ಮ ಮತ್ತು ಅರ್ಥಗಳ ಮಾಧ್ಯಮದ ಮೂಲಕ ವ್ಯಕ್ತಿಯೋರ್ವನು ಕಾಮ ಮತ್ತು ಮೋಕ್ಷವನ್ನು ಪಡೆಯಲು ಸಮರ್ಥನಾಗುತ್ತಾನೆ. ಭಾರತೀಯ ಚಿಂತಕರ ವಿರುದ್ಧ ಅವರು ಪಾರಮಾರ್ಥಿಕರು (ಪರಲೋಕದ ಬಗ್ಗೆಯೇ ಚಿಂತಿಸುವವರು) ಎಂಬ ಆರೋಪವನ್ನು ಹೊರಿಸಲಾಗುವುದಿಲ್ಲ. ಅವರು ಲಲಿತಕಲೆಗಳ ಅನ್ವೇಷಣೆಯಲ್ಲಿ ದೊರಕುವ ಬದುಕಿನ ಶುದ್ಧ ಆನಂದಕ್ಕೆ ಅಥವಾ ನ್ಯಾಯಬದ್ಧವಾದ ನಮ್ಮ ಹೆಬ್ಬಯಕೆಗಳು, ಮಹತ್ವಾಕಾಂಕ್ಷೆಗಳು ಮತ್ತು ಭರವಸೆಗಳ ಈಡೇರಿಕೆಗಳಿಗೆ ಸಮಾನವಾದ ಪ್ರಾಮುಖ್ಯತೆಯನ್ನೇ ನೀಡಿದ್ದಾರೆ. ಬಿಸಿಲು ಅಥವಾ ಒಂದು ರಮಣೀಯ ನೋಟವನ್ನು ಅನುಭವಿಸುವುದು, ಸಂಗೀತವನ್ನು ಆಲಿಸುವುದು, ನಾಟಕವನ್ನು ಓದುವುದು ಇವು ಇಂದ್ರಿಯಗಳಿಗೆ ಆನಂದ ನೀಡುವುವೂ ಮತ್ತು ಆಧ್ಯಾತ್ಮಿಕವೂ ಎರಡೂ ಆಗಿರುತ್ತವೆ. ಅಂತೆಯೇ ವೈವಾಹಿಕ ಜೀವನದ ಆನಂದಗಳನ್ನೂ ಕೊಂಡಾಡಲಾಗಿದೆ. ಕರ್ತವ್ಯ

ನಿರ್ವಹಣೆಯಿಂದ ಮತ್ತು ಶುದ್ಧ ಹಾಗೂ ಉದಾತ್ತಜೀವನನ್ನು ನಡೆಸುವುದರಿಂದ ದೊರೆಯುವ ಆನಂದವನ್ನು ಪ್ರಶಂಸೆ ಮಾಡಲಾಗಿದೆ. ಕಾಮವು ಕೇವಲ ಇಂದ್ರಿಯಗಳ ಕೆಳಮಟ್ಟದ ಸುಖಾನುಭವಗಳಿಗೆ ಸೀಮಿತವಾಗಿಲ್ಲ. ಆದ್ದರಿಂದಲೇ, ಅನೇಕ ವಿಭೂತಿಗಳನ್ನು ವಿವರಿಸುವಾಗ ಪರಮಾತ್ಮನು ಗೀತೆಯಲ್ಲಿ ತಾನು ಧರ್ಮಾನ್ವೇಷಣೆ ಅಥವಾ ಆಚರಣೆಗೆ ವಿರೋಧಿಯಾಗಿಲ್ಲದ ಅಥವಾ ಸಾಮರಸ್ಯ ಹೊಂದಿರುವ ಕಾಮದ ಸಾಕಾರರೂಪವಾಗಿರುವುದಾಗಿ ಹೇಳಿಕೊಂಡಿದ್ದಾನೆ.

ಧರ್ಮಾವಿರುದ್ಧಃ ಭೂತೇಷು ಕಾಮೋಸ್ಮಿ ಭರತರ್ಷಭ !

ಭಾರತೀಯ ಚಿಂತಕರು ನಿಷೇಧಿಸುವುದು ಪಾಪಪೂರಿತವಾದ ಮತ್ತು ವ್ಯಕ್ತಿಯೊಬ್ಬನ ಸ್ವಪ್ರಜ್ಞೆಯ ಅಥವಾ ಧರ್ಮದ ಆದೇಶಗಳಿಗೆ ವಿರುದ್ಧವಾಗಿರುವ ಕಾಮವನ್ನು ಮಾತ್ರ. ಆದ್ದರಿಂದಲೇ ಅವರು ಕಾಮ ಅಥವಾ ಬದುಕಿನ ಆನಂದವನ್ನು ಮನುಷ್ಯನ ನ್ಯಾಯಬದ್ಧವಾದ ಹೆಬ್ಬಯಕೆಯೆಂದು ಅಭಿಪ್ರಾಯಪಟ್ಟಿದ್ದಾರೆ.

* * * *

೭. ಅರ್ಥ

ಅರ್ಥ ಎಂದರೆ ಐಶ್ವರ್ಯ, ಅದರ ಸಾಮಾನ್ಯವಾದ ಒಳ ಅರ್ಥದಲ್ಲಿ ಅದು ಎಲ್ಲ ಐಹಿಕ ಸುಖಗಳು, ಆರ್ಥಿಕ ಕ್ಷೇಮ ಮತ್ತು ಭದ್ರತೆಯನ್ನು ಒಳಗೊಂಡಿರಬಹುದು. ಆದ್ದರಿಂದಲೇ ಐಶ್ವರ್ಯದ ಸಂಪಾದನೆಯನ್ನು ಜೀವನದ ಪ್ರಮುಖ ಉದ್ದೇಶವೆಂದು ಪರಿಗಣಿಸಬಹುದು. ಏಕೆಂದರೆ ಅದಿಲ್ಲದಿದ್ದರೆ ಮಾವನ ಅಸ್ತಿತ್ವವೇ ಅಸಾಧ್ಯವಾಗುತ್ತದೆ. ವ್ಯಕ್ತಿಯೊಬ್ಬನು ಚೆನ್ನಾಗಿ ಬಾಳ್ವೆ ನಡೆಸುವುದಕ್ಕಿಂತ ಮೊದಲು ಬದುಕಬೇಕು. ಬದುಕಿನ ಸಮಗ್ರ ರಚನೆಯ ನಿರ್ಮಾಣಗೊಂಡಿರುವುದೇ ಅರ್ಥದ ಅಡಿಪಾಯದ ಮೇಲೆ ಮತ್ತು ಬದುಕಿನ ಈ ಪ್ರಮುಖ ಉದ್ದೇಶದ ಈಡೇರಿಕೆಯಿಂದ ಮಾತ್ರವೇ ಇತರ ಎಲ್ಲ ಪುರುಷಾರ್ಥಗಳನ್ನೂ ಸಾಧಿಸಬಹುದಾಗಿದೆ. ರಾಜ್ಯತಂತ್ರವಿಜ್ಞಾನವಾದ ಅರ್ಥಶಾಸ್ತ್ರದಲ್ಲಿರುವಂತೆ ರಾಜ್ಯದ ರಾಜಕೀಯ ಮತ್ತು ಆರ್ಥಿಕ ರಚನೆಯ ದೃಷ್ಟಿಯಿಂದ ಅರ್ಥವೆಂಬ ಪದಕ್ಕೆ ಅತ್ಯಂತ ವ್ಯಾಪಕವಾದ ಪ್ರಾಮುಖ್ಯತೆ ಇದೆ. ಆದರೆ, ವ್ಯಕ್ತಿಯೊಬ್ಬನ ಪುರುಷಾರ್ಥದ ಸಂದರ್ಭದಲ್ಲಿ ಬಳಸಿದಾಗ ಈಗಾಗಲೇ ನಾನು ಸೂಚಿಸಿರುವಂತೆ ಪದದ ಅರ್ಥ ಜೀವನನಿರ್ವಹಣೆಗಾಗಿ ಮತ್ತು ಐಹಿಕ ಸುಖಗಳಿಗಾಗಿ ಐಶ್ವರ್ಯದ ಸಂಪಾದನೆ ಎಂದಾಗುತ್ತದೆ. ಭಾರತೀಯ ಚಿಂತಕರು ಯಾವಾಗಲೂ ಆರ್ಥಿಕ ವಿಷಯವನ್ನು ಮಾನವಜೀವನದ ಮೂಲಭೂತ ಅಂಶವೆಂದು ಪರಿಗಣಿಸಿದ್ದಾರೆ. ಐಶ್ವರ್ಯ ಸಂಪಾದನೆಯಲ್ಲಿ ಯಾವುದೇ ಪಾಪವೂ ಇಲ್ಲ ಅಥವಾ ಬಡತನದಲ್ಲಿ ಯಾವುದೇ ಪುಣ್ಯವೂ ಇಲ್ಲ. ಭಾರತೀಯ ಚಿಂತನೆ ಆಯ್ದ ಕೆಳವೇ ವ್ಯಕ್ತಿಗಳನ್ನು ಹೊರತುಪಡಿಸಿ ಬೇರಾರಿಗೂ ವೈರಾಗ್ಯ ಅಥವಾ ಐಶ್ವರ್ಯದ ತ್ಯಾಗವನ್ನು ಪ್ರತಿಪಾದಿಸುವುದಿಲ್ಲ. ಅದು ವೈರಾಗ್ಯವನ್ನು ಸಾಮಾನ್ಯವಾದ, ಒಳ್ಳೆಯ ಬದುಕಿನ ಭಾಗವೆಂದು ಭಾವಿಸುವುದಿಲ್ಲ. 'ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಂ' ಎಂಬುದು ನಮ್ಮ ದೈನಂದಿನ ಪ್ರಾರ್ಥನೆ. ನಮ್ಮ ಋಷಿಗಳು ಮನುಷ್ಯನ ಐಶ್ವರ್ಯವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನಗಳನ್ನು ಕೀಳಾಗಿ ಪರಿಗಣಿಸುವುದಿಲ್ಲ. ತಮಿಳುನಾಡಿನ ಮಹಾಪ್ರತಿಭಾಶಾಲಿಯಾದ ಮಹಿಳಾ ನೀತಿಬೋಧಕಿ ಅವ್ವೆ, 'ತಿರೈಕಡಲ್ ಓಡಿಯುಂ ದಿರವಿಯಂ ತೇಡು' ಎಂದಿದ್ದಾಳೆ, 'ಅಲೆಗಳಿಂದ ಉಕ್ಕೇರುತ್ತಿರುವ ಸಮುದ್ರವನ್ನೂ ದಾಟಿ ಐಶ್ವರ್ಯವನ್ನು ಸಂಪಾದಿಸು.' 'ವಿದುರನೀತಿ'ಯ 'ಅರ್ಥಕರೀ ಚ ವಿದ್ಯಾ' ಎನ್ನುತ್ತದೆ. ಭಗವದ್ಗೀತೆಯಲ್ಲಿ ಪರಮಾತ್ಮನು ಐಶ್ವರ್ಯಕ್ಕಾಗಿ ಭಗವಂತನನ್ನು ಆರಾಧಿಸುವ 'ಅರ್ಥಾರ್ಥಿ' ಯನ್ನು ಉದಾತ್ತ ವ್ಯಕ್ತಿಯೆಂದು ವಿವರಿಸಿದ್ದಾನೆ.

ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥ ೭.೧೬॥
ಉದಾರಾಸ್ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಮ್ ॥ ೭.೧೮॥

ಯುದ್ಧಕಾಂಡದ ೮೩ನೇ ಸರ್ಗದಲ್ಲಿ (೩೨ ರಿಂದ ೩೮ರ ವರೆಗಿನ ಶ್ಲೋಕಗಳು) ಲಕ್ಷ್ಮಣನ ಬಾಯಿಂದ ವಾಲ್ಮೀಕಿಗಳು ಬಾಳಿನ ಪ್ರಮುಖವಾದ ಮತ್ತು ಪ್ರಶಂಸನೀಯವಾದ ಗುರಿಯಾಗಿ ಅರ್ಥವನ್ನು ಕುರಿತಂತೆ ಹೊಗಳಿಕೆಯ ಮಾತುಗಳನ್ನು ನುಡಿಸಿದ್ದಾರೆ.

ಅರ್ಥೇಭ್ಯೋ ಹಿ ವಿವೃದ್ಧೇಭ್ಯಃ ಸಂವೃತ್ತೇಭ್ಯಸ್ತತಸ್ತತಃ ।
ಕ್ರಿಯಾಸ್ಸರ್ವಾಃ ಪ್ರವರ್ತಂತೇ ಪರ್ವತೇಭ್ಯ ಇವಾಪಗಾಃ ॥೩೨॥
ಅರ್ಥೇನ ಹಿ ವಿಮುಕ್ತಸ್ಯ ಪುರುಷಸ್ಯಾಲ್ಪತೇಜಸಃ ।
ವ್ಯುಚ್ಛಿದ್ಯಂತೇ ಕ್ರಿಯಾಸ್ಸರ್ವಾಃ ಗ್ರೀಷ್ಮೇ ಕುಸರಿತೋ ಯಥಾ ॥೩೩॥
ಸೋಽಯಮರ್ಥಂ ಪರಿತ್ಯಜ್ಯ ಸುಖಕಾಮ ಸುಖೈಧಿತಃ
ಪಾಪಮಾರಭತೇ ಕರ್ತುಂ ತತೋ–ದೋಷಃ ಪ್ರವರ್ತತೇ ॥೩೪॥
ಯಸ್ಯಾರ್ಥಾಃ ತಸ್ಯ ಮಿತ್ರಾಣಿ ಯಸ್ಯಾರ್ಥಸ್ತಸ್ಯ ಬಾಂಧವಾಃ ।
ಯಸ್ಯಾರ್ಥಾಃ ಸಪುಮಾಂಲ್ಲೋಕೇ ಯಸ್ಯಾರ್ಥಾಃ ಸ ಚ ಪಂಡಿತಃ ॥೩೫॥
ಯಸ್ಯಾರ್ಥಾಃ ಸ ಚ ವಿಕ್ರಾಂತೋ ಯಸ್ಯಾರ್ಥಾಃ ಸ ಚ ಬುದ್ಧಿಮಾನ್
ಯಸ್ಯಾರ್ಥಾಃ ಸಮಹಾಭಾಗೋ ಯಸ್ಯಾರ್ಥಾಃ ಸ ಗುಣಾಧಿಕಃ ॥೩೬॥
ಅರ್ಥಸ್ಯೈತೇ ಪರಿತ್ಯಾಗೇ ದೋಷಾಃ ಪ್ರವ್ಯಾಹೃತಾಮಯಾ ।
ರಾಜ್ಯಮುತ್ಸೃಜತಾ ವೀರ ಯೇನ ಬುದ್ಧಿಸ್ತ್ವಯಾ ಕೃತಾ ॥೩೭॥
ಯಸ್ಯಾರ್ಥಃ ಧರ್ಮಕಾಮಾರ್ಥಾಃ ತಸ್ಯ ಸರ್ವಂ ಪ್ರದಕ್ಷಿಣಂ
ಅಧನೇನಾರ್ಥಕಾಮೇನ ನಾರ್ಥಃ ಶಕ್ಯೋ ವಿಚಿನ್ವತಾ ॥೩೮॥

'ಕೂಡಿ ಹಾಕಿದ ಮತ್ತು ವೃದ್ಧಿಗೊಳಿಸಿದ ಸಂಪತ್ತಿನಿಂದ ಪರ್ವತಗಳಿಂದ ನದಿಗಳು ಹುಟ್ಟುವಂತೆ ಎಲ್ಲ ಕಾರ್ಯಗಳೂ ತೊಡಗುತ್ತವೆ. ಅಲ್ಪಶಕ್ತಿ ಮತ್ತು ಸಾಮರ್ಥ್ಯವುಳ್ಳ ಐಶ್ವರ್ಯಹೀನನಾದ ವ್ಯಕ್ತಿಗೆ ಎಲ್ಲ ಕಾರ್ಯಗಳೂ ಬೇಸಿಗೆಯಲ್ಲಿನ ತೊರೆಯಂತೆ ನಾಶಹೊಂದುತ್ತವೆ. ಸಂತೋಷವನ್ನು ಬಯಸುತ್ತ ವ್ಯಕ್ತಿಯೊಬ್ಬನು ಐಶ್ವರ್ಯವನ್ನು ತೊರೆದಲ್ಲಿ ಆತ ಪಾಪ ಮತ್ತು ತಪ್ಪನ್ನೆಸಗಲು ಮತ್ತು ಸುಖಕ್ಕಾಗಿ ಅಧಿಕಗೊಂಡ ಬಯಕೆಯೊಂದಿಗೆ ಪಾಪಪೂರ್ಣವಾದ ಬಾಳನ್ನು ನಡೆಸಲಾರಂಭಿಸುತ್ತಾನೆ. ಸಂಪತ್ತುಳ್ಳವನಿಗೇ ಸ್ನೇಹಿತರು ಮತ್ತು ಬಂಧುಗಳು

ಹುಟ್ಟಿಕೊಳ್ಳುತ್ತಾರೆ. ಸಂಪತ್ತುಳ್ಳವವನ್ನೇ ಜನರು ಮನುಷ್ಯನೆಂದು ಗೌರವಿಸುತ್ತಾರೆ. ಆತನನ್ನೇ ವಿದ್ಯಾವಂತನೆಂದು ಪರಿಗಣಿಸುತ್ತಾರೆ. ಆತನೇ ಅದೃಷ್ಟಶಾಲಿ ಮತ್ತು ಬುದ್ಧಿವಂತ. ಸಂಪತ್ತನ್ನು ತೊರೆಯುವುದರಿಂದಾಗುವ ಈ ಎಲ್ಲ ದೋಷಗಳನ್ನು ನಾನು ಸೂಚಿಸಿದ್ದೇನೆ. ಏಕೆಂದರೆ ನಿನ್ನ ಆಲೋಚನೆಗಳು ರಾಜ್ಯವನ್ನು ತೊರೆಯುವುದರ ಮೇಲಿವೆ. ಸಂಪತ್ತನ್ನುಳ್ಳ ಮನುಷ್ಯನಿಗೆ ಧರ್ಮ, ಕಾಮ ಮತ್ತು ಅರ್ಥ ಮತ್ತು ಇತರ ಎಲ್ಲವೂ ಸಹಾಯಕಾರಿಗಳಾಗಿರುತ್ತವೆ. ನಿರ್ಗತಿಕನಾದ ವ್ಯಕ್ತಿ ಸಂಪತ್ತಿನ ಅಭಿಲಾಷೆಯುಳ್ಳವನಾಗಿ, ಅದನ್ನು ಬಯಸಿದರೂ, ಅದನ್ನು ಪಡೆಯುವುದು ಅಸಾಧ್ಯವೆಂಬುದನ್ನು ಕಂಡುಕೊಳ್ಳುತ್ತಾನೆ.'

ಅರ್ಥದ ಪ್ರಾಮುಖ್ಯತೆಯನ್ನು ನೀಲಕಂಠದೀಕ್ಷಿತರು ಸೂಚಿಸುವುದು ಹೀಗೆ:

ಅರ್ಥೇನೋಪಾರ್ಜ್ಯತೇ ಧರ್ಮಃ ಧರ್ಮೇಣಾರ್ಥ ಉಪಾರ್ಜ್ಯತೇ
ಅನ್ಯೋನ್ಯಾಶ್ರಯಣಂ ಹ್ಯೇತದ್ ಉಭಯೋತ್ಪತ್ತಿ ಸಾಧನಮ್॥ ಸಭಾರಂಜನ ಶತಕ
(ಶ್ಲೋಕ ೭೮)

ಅರ್ಥೋಽಪ್ಯರ್ಥೇನ ಚೇತ್ಸಾಧ್ಯಃ ಕಾ ವಾರ್ತಾ ಧರ್ಮಕಾಮಯೋಃ ।
ಅರ್ಥಃ ಸರ್ವಜಗನ್ಮೂಲಂ ಅನರ್ಥೋರ್ಥವಿಪರ್ಯಯಃ ॥
ಕರ್ಮ ಜ್ಞಾನಂ ಚ ಮೋಕ್ಷಾಯ ಕರ್ಮಣ್ಯರ್ಥೋಽಧಿಕಾರಿತಾ।
ಅತೋಽರ್ಥೇನೈವ ಕೈವಲ್ಯಂ ನ ಕೈವಲ್ಯೇನ ಲಭ್ಯತೇ ॥

'ಅರ್ಥದಿಂದ ಧರ್ಮವನ್ನು ಸಂಪಾದಿಸಲಾಗುತ್ತದೆ ಮತ್ತು ಧರ್ಮದಿಂದ ಅರ್ಥವನ್ನು ಸಂಪಾದಿಸಲಾಗುತ್ತದೆ. ಒಂದು ಮತ್ತೊಂದಕ್ಕೆ ಸಾಧನ ಮತ್ತು ಅವಲಂಬನ. ಅರ್ಥವನ್ನು ಸಂಪಾದಿಸಬಹುದಾದರೆ ಇನ್ನು ಧರ್ಮ ಮತ್ತು ಕಾಮಗಳ ಬಗೆಗೆ ನಾವು ಹೇಳುವುದೇನಿದೆ? ಅರ್ಥ ಇಡೀ ಪ್ರಪಂಚದ ಮೂಲಸ್ರೋತ. ಸಂಪತ್ತಿನ ಹಾನಿ ವಿನಾಶವನ್ನು ತರುತ್ತದೆ. ಕರ್ಮದ ಜ್ಞಾನ ಮೋಕ್ಷಕ್ಕೆ ಕೊಂಡೊಯ್ಯುತ್ತದೆ. ಅರ್ಥ ಕರ್ಮದ ಅಧಿಕಾರದಾತ. ಆದ್ದರಿಂದ ಅರ್ಥವೊಂದರಿಂದಲೇ ಮೋಕ್ಷ; ಕೈವಲ್ಯವನ್ನು ಬಡತನದಿಂದ ಪಡೆಯಲಾಗುವುದಿಲ್ಲ.' ಮಹಾಭಾರತದ ಶಾಂತಿಪರ್ವದ ೮೦ನೆಯ ಅಧ್ಯಾಯದಲ್ಲಿ ಅರ್ಜುನ ಧರ್ಮ ಮತ್ತು ಕಾಮಗಳು ಅರ್ಥದ ಅವಯವಗಳೆಂದು ದೃಢಪಡಿಸುತ್ತಾನೆ. ವ್ಯವಸಾಯ, ವ್ಯಾಪಾರ, ಪಶುಪಾಲನೆ ಮತ್ತು ಎಲ್ಲ ವೃತ್ತಿಗಳನ್ನೂ ಮಾಡುವುದು ಹಣದ ಸಂಪಾದನೆಗಾಗಿ ಮಾತ್ರವೇ.

ಅರ್ಥಸ್ಯಾವಯುವಾವೇತೌ ಧರ್ಮಕಾಮಾಪಿತಿ ಸ್ಮೃತಿಃ ।
ಅರ್ಥಸಿದ್ಧ್ಯಾಽಭಿನಿವೃತ್ತಾವುಭಾವೇತೌ ಭವಿಷ್ಯತಃ ॥೧೧॥

ಕೃಷಿವಾಣಿಜ್ಯಗೋರಕ್ಷ್ಯಂ ಶಿಲ್ಪಾನಿ ವಿವಿಧಾನಿ ಚ ।
ಅರ್ಥ ಇತ್ಯೇವ ಸರ್ವೇಷಾಂ ಕರ್ಮಣಾಮಪ್ಯುಪಕ್ರಮಃ ॥೧೨॥

'ಜೀವನ ನಿರ್ವಹಣೆಗಾಗಿ ಸಂಪತ್ತನ್ನು ಸಂಪಾದಿಸಬೇಕು' ಎಂದು ಮನು ನುಡಿಯುತ್ತಾನೆ. ಸಂಪತ್ತಿನ ಸಂಪಾದನೆ ಮತ್ತು ಸುಖಾನುಭವಕ್ಕೆ ನಿಯಂತ್ರಣ ಭಾರತೀಯ ಚಿಂತಕರ ಅಭಿಪ್ರಾಯದಂತೆ, ಅಂಥ ಸಂಪಾದನೆ ಮತ್ತು ಅನುಭವ ಧರ್ಮದ ಆದೇಶಗಳು ಮತ್ತು ನಿಯಮಗಳಿಗೆ ವಿರುದ್ಧವಾಗಿರಬಾರದು. ಈ ಸಂಪತ್ತಿನ ಅನ್ವೇಷಣೆ ಇತರರಿಗೆ ನಷ್ಟ ಮತ್ತು ಹಾನಿಯುನ್ನು ಉಂಟುಮಾಡುವಂತಹುದಾದರೆ ಅದು ಯೋಗ್ಯವಾದುದಲ್ಲ.

ಯಾತ್ರಾಮಾತ್ರ ಪ್ರಸಿದ್ಧ್ಯರ್ಥಂ ಸ್ವೈಃ ಕರ್ಮಭಿರಗರ್ಹಿತೈಃ ।
ಅಕ್ಲೇಶೇನ ಶರೀರಸ್ಯ ಕುರ್ವೀತ ಧನಸಂಚಯಮ್ ॥ ೪.೩॥
ನೇಹೇತಾರ್ಥಾನ್ ಪ್ರಸಂಗೇನ ವಿರುದ್ಧೇನ ಕರ್ಮಣಾ ।
ನ ವಿದ್ಯಮಾನೇಷ್ವರ್ಥೇಷು ನಾರ್ತ್ಯಾಮಪಿ ಯತಸ್ತತಃ ॥

ಪರರಿಗೆ ನೀಡುವುದಕ್ಕಾಗಿ ಐಶ್ವರ್ಯದ ಸಂಪಾದನೆಯನ್ನು ಕಾಳಿದಾಸ ಪ್ರಶಂಸಿಸುತ್ತಾನೆ.

ತ್ಯಾಗಾಯ ಸಂಭೃತಾರ್ಥಾನಾಮ್ ॥ ರಘುವಂಶ ॥೭॥
ಆದಾನಂ ಹಿ ವಿಸರ್ಗಾಯ ಸತಾಂ ವಾರಿಮುಚಾಮಿವ ॥

(ಅದೇ ೪.೮೬)

ನಿಶ್ಚಯವಾಗಿಯೂ ಐಶ್ವರ್ಯ ಮತ್ತು ಅದರ ಅನುಭವ ಯಾವುದೇ ಅರ್ಥದಲ್ಲಿಯೂ ಧಾರ್ಮಿಕ ನಡತೆ ಮತ್ತು ಪರಿಪೂರ್ಣ ನೀತಿಗಳಿಗೆ ವಿರುದ್ಧವಾಗಿಲ್ಲ. ದಾನ ಮತ್ತು ಸೇವೆಯಿಂದ ಸಂಪಾದನೆ ಪರಿಶುದ್ಧವಾಗುತ್ತದೆ.

ನಾಲ್ಕು ಪುರುಷಾರ್ಥಗಳ ನಡುವೆ ಧರ್ಮವನ್ನು ಯಾವಾಗಲೂ ಮೊದಲು ಉಲ್ಲೇಖಿಸಲಾಗುತ್ತದೆ. ಈ ಕ್ರಮ ಎಂದಿಗೂ ಬದಲಾಗುವುದಿಲ್ಲ. ನಾಲ್ಕು ಪುರುಷಾರ್ಥಗಳನ್ನು 'ಚತುರ್ವರ್ಗ' ವೆಂದು ಉಲ್ಲೇಖಿಸಲಾಗುತ್ತದೆ. ಮತ್ತು ಧರ್ಮ, ಅರ್ಥ, ಕಾಮ ಎಂಬ ಮೊದಲ ಮೂರು ಪದೇ ಪದೇ ಒಟ್ಟಿಗೆ ಸಾಗುತ್ತವೆ ಮತ್ತು ಅವುಗಳನ್ನು 'ತ್ರಿವರ್ಗ' ವೆಂದು ಉಲ್ಲೇಖಿಸಲಾಗಿದೆ.

* * * *

೮. ಧರ್ಮ

ಧರ್ಮವೆಂಬ ಪದ ನಾನಾ ಅರ್ಥಗಳನ್ನು ತಳೆಯುವ ಮಹತ್ತ್ವವುಳ್ಳದೆಂದು ಹೇಳಲಾಗಿದೆ. ಕೆಲವು ಪದಗಳು ವ್ಯಾಪಕವಾದ ಮಹತ್ತ್ವವನ್ನು ಪಡೆದುಕೊಳ್ಳುವ ಸಂಗತಿ ಕೇವಲ ಭಾರತದ ಪದಗಳಿಗೆ ಮಾತ್ರ ವಿಶಿಷ್ಟವಾದುದೇನೂ ಅಲ್ಲ. ಆಂಗ್ಲ ಪದ 'ಲಾ' ಅನೇಕ ವಿಷಯಗಳ ಅರ್ಥವನ್ನು ನೀಡಬಹುದು ಮತ್ತು ಒಂದು ಸ್ಥಳೀಯ ಉಪನಿಯಮದಿಂದ ಹಿಡಿದು ಬ್ರಹ್ಮಾಂಡದ ನೈಸರ್ಗಿಕ ಪರಿಣಾಮ–ವಿಶ್ವನಿಯಮದವರೆಗೆ ವ್ಯಾಪ್ತಿ ಹೊಂದಿದೆ. ಧರ್ಮ ಋಗ್ವೇದದಲ್ಲಿ ಕಂಡುಬರುವ ಒಂದು ಪ್ರಾಚೀನವಾದ ಪದವಾಗಿದೆ. ಮತ್ತು ಯಾವ ಯಾವ ಸೂಕ್ತಗಳಲ್ಲಿ ಎಲ್ಲೆಲ್ಲಿ ಈ ಪದವು ಬರುವುದೆಂಬುದನ್ನು ಕಾಣೆಯವರ ಧರ್ಮಶಾಸ್ತ್ರದ ಇತಿಹಾಸದ ಪ್ರಥಮ ಸಂಪುಟದಲ್ಲಿ ಉಲ್ಲೇಖಿಸಲಾಗಿದೆ. ವೇದದಲ್ಲಿ ಈ ಪದವು ಅನೇಕ ವೇಳೆ ನಪುಂಸಕ ಲಿಂಗದಲ್ಲಿ ಬಳಕೆಯಾಗಿರುವುದು ಕುತೂಹಲಕಾರಿಯಾಗಿದೆ.

'ತಾನಿ ಧರ್ಮಾಣಿ ಪ್ರಥಮಾನ್ಯಾಸನ್ । ತೇಹ ನಾಕಂ ಮಹಿಮಾನಸ್ಸಚಂತೇ ।
ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ । ಸನತಾ ಧರ್ಮಾಣಿ ।'

ಈ ಪದದ ಅರ್ಥವಿಕಾಸದ ಇತಿಹಾಸದಲ್ಲಿ ಅದು ಯಾವಾಗ 'ಧರ್ಮ' ಎಂದು ಪುಲ್ಲಿಂಗದಲ್ಲಿ ಬಳಕೆಯಾಯಿತೆಂಬುದು ಸ್ಪಷ್ಟವಾಗಿಲ್ಲ. ಸಂಭವನೀಯತೆ ಏನೆಂದರೆ ಈ ಬದಲಾವಣೆಯು 'ಧರ್ಮ'ದ ಕಲ್ಪನೆಯ ಖಚಿತವಾದ, ಅಮೂರ್ತವಾದ ವಿಕಸನದೊಂದಿಗೆ ಏಕಕಾಲದಲ್ಲಿಯೇ ಸಂಭವಿಸಿರಬೇಕು. ಇದೇ ಸಮಯದಲ್ಲಿ ಈ ಪದದ ಬಳಕೆ ಹೆಚ್ಚು ಹೆಚ್ಚಾಗಿ ಧರ್ಮವೆಂದು ಪ್ರಸಿದ್ಧವಾದ ವಾಸ್ತವ ಮೌಲ್ಯವನ್ನು ಅತ್ಯಂತ ಸಮೀಪವಾಗಿ ಸೂಚಿಸಲು ಗ್ರೀಕ್ ಮತ್ತು ಇತರ ಪಾಶ್ಚಿಮಾತ್ಯ ತತ್ತ್ವಶಾಸ್ತ್ರಗಳಲ್ಲಿ, ಸತ್ಯ, ಶಿವ, ಸುಂದರ ಎಂಬ ಅಮೂರ್ತ ಸಿದ್ಧಾಂತಗಳನ್ನು ಸೂಚಿಸಲು ಬಳಕೆಯಾದ ರೀತಿಯಲ್ಲಿಯೇ ಬಳಕೆಯಾಗಿರಬಹುದು. 'ಧರ್ಮ'ವೆಂಬ ಪದದ ಮೊಟ್ಟಮೊದಲ ಯೂರೋಪ್‌ನ ಅನುವಾದಕರು ಅದನ್ನು 'ಕರ್ತವ್ಯ' ಎಂದು ಮತ್ತು ಕೆಲವೊಮ್ಮೆ 'ಪವಿತ್ರ ನಿಯಮ' ಅಥವಾ 'ಮತ' ಎಂದು ಭಾಷಾಂತರಿಸಿದರು. ಶತಮಾನಗಳ ಸ್ಥಿತ್ಯಂತರಗಳ ಮೂಲಕ ಪದವು ಅನೇಕ ಅರ್ಥಗಳನ್ನು ಪಡೆದುಕೊಂಡಿತು. ಅದು ನೈತಿಕ ಕರ್ತವ್ಯ ಮತ್ತು ಪುಣ್ಯ ಎಂಬುದನ್ನು ಸೂಚಿಸಲು ಬಳಕೆಯಾಯಿತು. ಮತ್ತು ಅದು ಸಾಮಾನ್ಯವಾಗಿ 'ಒಳ್ಳೆಯ ಕೆಲಸಗಳು' ಎಂಬ ಅರ್ಥವನ್ನು ಹೊಂದಿತ್ತು.

ವೇದಗಳಲ್ಲಿ ಮೂಲಭೂತವಾಗಿರುವ ನೈತಿಕ ಮತ್ತು ಧಾರ್ಮಿಕ ವರ್ತನೆಗೆ ಸಂಬಂಧಿಸಿದ ಕಟ್ಟಳೆಗಳ ಸೂಚಕವಾಗಿತ್ತು. ಧರ್ಮದ ಒಂದು ವಿವರಣೆ 'ಚೋದನಾಲಕ್ಷಣಣೋಽರ್ಥೋ ಧರ್ಮಃ' ಎಂಬುದು.

ಅದು ಸಂಪ್ರದಾಯಗಳ ಕಟ್ಟುಕಟ್ಟಳೆಗಳು ಮತ್ತು ಪರಂಪರೆಗಳು ಮತ್ತು ಅಂಗೀಕೃತವಾದ ಆಚಾರ ಎಂಬ ಅರ್ಥವನ್ನು ಹೊಂದಿತ್ತು.

ಧರ್ಮಜ್ಞಸಮಯಃ ಪ್ರಮಾಣಂ ವೇದಾಶ್ಚ' *(ಆಪಸ್ತಂಬ ಧರ್ಮಸೂತ್ರ)*

ಭಾರತದಲ್ಲಿ ಬೇರೆ ಬೇರೆ ಜಾತಿಗಳು ಮತ್ತು ಸಮುದಾಯಗಳಿಗೆ ಶಾಸ್ತ್ರಗಳು ವಿಧಿಸಿರುವ ವಿಭಿನ್ನವಾದ ಕರ್ತವ್ಯಗಳು ಮತ್ತು ನಿಯಮಗಳು ಎಂಬುದನ್ನೂ ಅದು ಸೂಚಿಸುತ್ತದೆ. ಆ ಅರ್ಥದಲ್ಲಿ ಅದು 'ಸ್ವಧರ್ಮ', 'ವರ್ಣಧರ್ಮ', 'ಜಾತಿಧರ್ಮ' ಎಂಬಂಥ ಸಂಯುಕ್ತ ಪದಗಳಲ್ಲಿ ಸೇರ್ಪಡೆಗೊಂಡಿದೆ ಮತ್ತು ಅದು, ಸಾಮಾನ್ಯವಾಗಿ ವಿಭಿನ್ನ ಸಮುದಾಯಗಳ ಪಾರಂಪರಿಕ ಆಚರಣೆಗಳು ಎಂಬುದನ್ನು ಸೂಚಿಸಿದಾಗ ಅದು, 'ಪಾಷಂಡ ಧರ್ಮ' ಎಂಬ ಸಂಯುಕ್ತ ಪದದಲ್ಲಿಯೂ ಬಳಕೆಯಾಗಿರುವುದನ್ನು ನಾವು ಕಾಣುತ್ತೇವೆ. ಅದರ ಅಮೂರ್ತವಾದ ಕಲ್ಪನೆಯಲ್ಲಿ ವ್ಯಕ್ತಿಯೊಬ್ಬನ ಅಸ್ತಿತ್ವದ ಆಧಾರವಾಗಿರುವ ಮೂಲಭೂತ ನಿಯಮ ಎಂಬ ಅರ್ಥವನ್ನು ಅದು ಹೊಂದಿದೆ. ವಸ್ತುವೊಂದನ್ನು ಒಟ್ಟಾಗಿ ಹಿಡಿದಿಡುವ, ಅದು ಏನಾಗಿದೆಯೋ ಅದರಂತೆ ರೂಪಿಸುವ, ಅದು ವಿಘಟನೆಗೊಳ್ಳುವುದರಿಂದ ಮತ್ತು ಅದು ಬೇರೊಂದಾಗಿ ಬದಲಾಗುವುದನ್ನು ತಡೆಯುವ ವ್ಯವಸ್ಥೆಯೇ ಈ ಮೂಲಭೂತನಿಯಮ. ಬೇರೊಂದು ರೀತಿಯಲ್ಲಿ, ಧರ್ಮ ವಸ್ತುವೊಂದರ ಸ್ವಭಾವಸೂಚಕ ಕಾರ್ಯ, ವಿಲಕ್ಷಣವಾದ ಗುಣ, ಮೂಲಭೂತವಾದ ಗುಣಧರ್ಮ ಅಥವಾ ಸಾರಭೂತವಾದ ಸ್ವಭಾವ ಎಂಬುದು ಅದರ ಅಸ್ತಿತ್ವದ ನಿಯಮ. ಮತ್ತೂ ವಿಸ್ತರಿಸಿದಾಗ ಮತ್ತು ಆದರ್ಶೀಕರಿಸಿದಾಗ ಅದು, ಪ್ರಪಂಚವು ಏನಾಗಿದೆಯೋ ಹಾಗೆ ರೂಪಿಸುವ ಮತ್ತು ಅದರ ಎಲ್ಲ ಅಂಗಗಳನ್ನೂ ಒಂದು ಅಖಂಡರೂಪವಾಗಿ ಒಟ್ಟಾಗಿ ಹಿಡಿದಿಡುವಂತಹುದು ಎಂಬ ಅರ್ಥವನ್ನು ಪಡೆದುಕೊಳ್ಳುತ್ತದೆ. ಅದು 'ವಿಶ್ವನಿಯಮ' ಎಂಬ ಆಂಗ್ಲ ಪದಗುಚ್ಛಕ್ಕೆ ಸಮಾನವಾದ ಮಹತ್ತ್ವವನ್ನು ಹೊಂದಿದೆ. ಈ ಸಂದರ್ಭದಲ್ಲಿ ಮೂಲಭೂತವಾದ ಪುರುಷಾರ್ಥಗಳಲ್ಲಿ ಒಂದೆಂಬಂತೆ ಬಳಸಿದಾಗ ಅದು, ಅನ್ಯೋನ್ಯ ಹಕ್ಕುಗಳು ಮತ್ತು ಕರ್ತವ್ಯಗಳು, ಕಾರ್ಯಗಳ ಕಾರಣಗಳು ಮತ್ತು ಪರಿಣಾಮಗಳ ಬಂಧನ ಮಾನವರನ್ನು ಒಟ್ಟಾಗಿ ಬೆಸೆಯುವ ಯೋಜನೆಯೊಂದರ ಅಂಗಗಳಾಗಿರುವ ಕರ್ತವ್ಯಗಳನ್ನು ಸೂಚಿಸುತ್ತದೆ ಮತ್ತು ಹೀಗೆ ಅದು ಸಮಾಜವನ್ನು ಪರಿಪೂರ್ಣವಾದ ವ್ಯವಸ್ಥೆಯಲ್ಲಿ ಸಂರಕ್ಷಿಸುತ್ತದೆ. ಧರ್ಮವೆಂಬ ಪದ 'ಧೃ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ, ಅದರ ಅರ್ಥವೇನೆಂದರೆ ಎತ್ತಿಹಿಡಿಯುವುದು, ಪೋಷಿಸುವುದು ಮತ್ತು ಪಾಲಿಸುವುದು. ಪ್ರಾಯಶಃ ಧರ್ಮವು ನಂತರದ ಸಾಹಿತ್ಯದಲ್ಲಿ

ವ್ಯಕ್ತೀಕರಣಗೊಂಡಿರುವುದರಿಂದ ಮತ್ತು ನ್ಯಾಯದೇವತೆಯಾದ ಯಮನಿಗೆ ಹೆಸರೆಂಬಂತೆ ಬಳಕೆಯಾಗಿರುವುದರಿಂದ ಅದು ಪುಲ್ಲಿಂಗರೂಪವನ್ನು ಪಡೆದುಕೊಂಡಿರಬಹುದು. ಆದರೂ, ಸಹಜವಾಗಿಯೇ ಸಂಸ್ಕೃತ ಪದಗಳು ಲಿಂಗಗಳು ಪದಗಳಿಂದ ಸೂಚಿತವಾದ ವಸ್ತುಗಳಿಗೆ ಸೂಕ್ತವಾದ ಲಿಂಗಗಳೊಂದಿಗೆ ಖಚಿತವಾದ ಹೊಂದಾಣಿಕೆ ಪಡೆದಿರುವುದಿಲ್ಲ. ಉದಾಹರಣೆಗೆ ಪತ್ನಿ ಎಂಬುದಕ್ಕೆ ಬಳಸಲಾಗುವ ದಾರಾಃ ಎಂಬ ಪದ ಪುಲ್ಲಿಂಗ ಬಹುವಚನದಲ್ಲಿದೆ. ಆದ್ದರಿಂದಲೇ ಮುಂದಿನ ಎಲ್ಲ ಸಂಸ್ಕೃತ ಸಾಹಿತ್ಯದಲ್ಲಿಯೂ 'ಧರ್ಮ'ದ ಬಹುವಚನವಾಗಿ 'ಧರ್ಮಾಣಿ' ಎಂದು ಬಳಸಿರುವುದನ್ನು ನೀವು ಕಾಣಲು ಸಾಧ್ಯವೇ ಇಲ್ಲ. ಈಗಾಗಲೇ ನಾನು ಉಲ್ಲೇಖಿಸಿರುವಂತೆ ಧರ್ಮವೆಂಬ ಪದವು ಅನೇಕ ವಿಷಯಗಳನ್ನು ಒಳಗೊಂಡಿದ್ದರೂ ಮತ್ತು ಅದರ ಮಹತ್ವ ತುಂಬ ವ್ಯಾಪಕವಾಗಿದ್ದರೂ, ಪದವು ಪ್ರಧಾನ ಪುರುಷಾರ್ಥವನ್ನು ಸೂಚಿಸಲು ಬಳಕೆಯಾಗುತ್ತಿರುವ ಅದರ ಮೂಲಸಿದ್ಧಾಂತ ಮತ್ತು ಅದರ ನಿಯಮಗಳು ನಮ್ಮ ಭಾರತೀಯ ಚಿಂತಕರಿಂದ ಅತ್ಯಂತ ಸ್ಪಷ್ಟವಾಗಿ ನಿರೂಪಿವಾಗಿವೆ. ಧರ್ಮದ ಉದ್ದೇಶ ಸಮಾಜದ ಸ್ಥಿರತೆ, ಸಾಮಾಜಿಕ ವ್ಯವಸ್ಥೆಯ ರಕ್ಷಣೆ ಮತ್ತು ಮಾನವ ಜನಾಂಗದ ಸಾಮಾನ್ಯ ಕ್ಷೇಮವೇ ಆಗಿದೆ. ಮತ್ತು ಈ ಉದ್ದೇಶದ ಈಡೇರಿಕೆಗೆ ನೆರವಾಗುವ ಯಾವುದೇ ಆಗಿರಲಿ ಅದನ್ನು ಧರ್ಮವೆಂದು ಕರೆಯಲಾಗುತ್ತದೆ.

ಧಾರಣಾತ್ ಧರ್ಮ ಇತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ ।
ಯೋ ಧಾರಣಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ ॥
(*ಮಹಾಭಾರತ* ಕರ್ಣಪರ್ವ, ೬೯ನೆಯ ಅಧ್ಯಾಯ, ಶ್ಲೋಕ ೫೮)

ಪ್ರಭವಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಂ
ಯಃ ಸ್ಯಾತ್ ಪ್ರಭವಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ ॥
(ಶಾಂತಿಪರ್ವ, ೧೦೪ ನೇ ಅಧ್ಯಾಯ, ಶ್ಲೋಕ ೧೦)

* * * *

೯. ಋತ, ಸತ್ಯ ಮತ್ತು ಧರ್ಮ

'ಋತ' ಮತ್ತು 'ಸತ್ಯ' ಎಂಬ ಮತ್ತೆರಡು ಪದಗಳೊಂದಿಗೆ ನಿಕಟವಾದ ಸಂಬಂಧದೊಡನೆ ಬಹುವೇಳೆ ಅದನ್ನು ಬಳಸುವುದರಿಂದ ನಾವು ಧರ್ಮದ ಆಧಾರವಾಗಿರುವ ಕಲ್ಪನೆಯನ್ನು ಸಂಗ್ರಹಿಸಬಹುದು. ಈ ಮೂರೂ ಪದಗಳಾದ 'ಋತ', 'ಸತ್ಯ' ಮತ್ತು 'ಧರ್ಮ' ಋಗ್ವೇದದಷ್ಟು ಹಿಂದಿನದಾದ ಅತ್ಯಂತ ಪ್ರಾಚೀನವಾದ ಇತಿಹಾಸವನ್ನು ಹೊಂದಿವೆ, 'ಋತ' ಮತ್ತು 'ಸತ್ಯ' ಎಂಬ ಪದಗಳು ಋಗ್ವೇದದ ಮುಂದೆ ಕಾಣುವ ಮಂತ್ರಗಳಲ್ಲಿ ಮತ್ತು ಉಪನಿಷತ್ತಿನಲ್ಲಿ ಕಂಡುಬರುತ್ತವೆ.

ಋತಂ ಚ ಸತ್ಯಂ ಚಾಭೀದ್ಧಾತ್ ತಪಸೋಽಧ್ಯಜಾಯತ ॥
ಋತಂ ಸತ್ಯಂ ಪರಂಬ್ರಹ್ಮ ಪುರುಷಂ ಕೃಷ್ಣಪಿಂಗಲಮ್ ॥
ಋತಂ ವದಿಷ್ಯಾಮಿ, ಸತ್ಯಂ ವದಿಷ್ಯಾಮಿ, ತನ್ಮಾಮವತು ತದ್ವಕ್ತಾರಮವತು ।

(ಉಪನಿಷತ್)

'ಋತ' ಪದದ ಅರ್ಥವನ್ನು ವಿವರಿಸುತ್ತ ಋಗ್ವೇದದ ಪ್ರಖ್ಯಾತ ವ್ಯಾಖ್ಯಾನಕಾರರಾದ ವಿದ್ಯಾರಣ್ಯರು 'ಅದು ಸತ್ಯದ ಮಾನಸಿಕ ಗ್ರಹಿಕೆ ಮತ್ತು ಸಾಕ್ಷಾತ್ಕಾರ' ಎಂದು ನುಡಿಯುತ್ತಾರೆ– 'ಮಾನಸಂ ಯಥಾರ್ಥ ಸಂಕಲ್ಪನಮ್' ಮುಂದೆ ಕಾಣಬರುವ ತೈತ್ತಿರೀಯ ಉಪನಿಷತ್ತಿನ ಸಾಲುಗಳಲ್ಲಿ 'ಸತ್ಯ' ಮತ್ತು 'ಧರ್ಮ' ಎಂಬ ಪದಗಳು ಒಟ್ಟಾಗಿಯೇ ಕಾಣಬರುತ್ತವೆ.

ಸತ್ಯಂ ವದ। ಧರ್ಮಂಚರ ।

ಬೃಹದಾರಣ್ಯಕೋಪನಿಷತ್ತಿನಲ್ಲಿ 'ಸತ್ಯ ಮತ್ತು ಧರ್ಮ' ಎಂಬ ಪದಗಳೆರಡು ಮುಂದೆ ಕಾಣಬರುವ ಮಂತ್ರದಲ್ಲಿ ಬಳಕೆಯಾಗಿವೆ ಮತ್ತು ಅಲ್ಲಿ ಸತ್ಯ ಮತ್ತು ಧರ್ಮದ ನಡುವೆ ಇರುವ ನಿಕಟವಾದ ಸಂಬಂಧವು ಸ್ಪಷ್ಟವಾಗಿ ಸೂಚಿತವಾಗಿದೆ.

ಸ ನೈವ ವ್ಯಭವತ್ ತತ್ಶ್ರೇಯೋರೂಪಮತ್ಯಸೃಜತ ಧರ್ಮಮ್ । ತದೇತತ್ಕ್ಷತ್ರಸ್ಯಕ್ಷತ್ರಂ ಯದ್ಧರ್ಮಃ ತಸ್ಮದ್ಧಾರ್ಮಾತ್ ಪರಂ ನಾಸ್ತಿ । ಅಥೋ ಅಬಲೀಯನ್ ಬಲೀಯಾಂಸಂ

ಆಶಂಸತೇ ಧರ್ಮೇಣ ಯಥಾ ರಾಜ್ಞಾ ಏವಂ ಯೋ ವೈಸ ಧರ್ಮಃ । ಸತ್ಯಂ ವೈ ತತ್॥
ತಸ್ಮಾತ್ಸತ್ಯಂ ವದಂತಮಾಹುಃ ಧರ್ಮಂ ವದಂತೀತಿ, ಧರ್ಮಂ ವಾ ವದಂತಂ ಸತ್ಯಂ ವದಂತೀತಿ।
ಏತದ್ಧ್ಯೇವೈತತ್ ಉಭಯಂ ಭವತಿ॥

(ಬೃಹದಾರಣ್ಯಕೋಪನಿಷತ್)

ಈ ಭಾಗದ ಮೇಲಣ ತಮ್ಮ ಭಾಷ್ಯದಲ್ಲಿ ಶಂಕರರು ಸತ್ಯ ಮತ್ತು ಧರ್ಮವನ್ನು ವಿವರಿಸುವುದು ಹೀಗೆ :

ಸತ್ಯಂ ಯಥಾಶಾಸ್ತ್ರಾರ್ಥತಾ ಸ ಏವ ಅನುಷ್ಠೀಯಮಾನಃ ಧರ್ಮನಾಮಾ ಭವತಿ ।

'ಸತ್ಯ ಎಂದರೆ ಸತ್ಯವನ್ನು ನುಡಿಯುವುದು, ಆದರೆ ಧರ್ಮವೆಂದರೆ ಸತ್ಯವನ್ನು ಕಾರ್ಯದಲ್ಲಿ ಆಚರಿಸುವುದು.' ಈ ಮೂರೂ ಪದಗಳ ಮಹತ್ತ್ವವನ್ನು ಕುರಿತ ವಿಶ್ಲೇಷಣೆ, ವ್ಯಕ್ತಿಯೊಬ್ಬನಿಗೆ ಆದರ್ಶವಾಗಿ ಧರ್ಮದ ಮೂಲಭೂತವಾದ ಆಧಾರವನ್ನು ನಮಗೆ ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ. ಋತ ಸತ್ಯದ ಮಾನಸಿಕ ಗ್ರಹಿಕೆ ಮತ್ತು ಸಾಕ್ಷಾತ್ಕಾರವನ್ನು ಸೂಚಿಸಿದರೆ, ಸತ್ಯ ಮನಸ್ಸು ಗ್ರಹಿಸಿದಂತೆ ಮಾತುಗಳಲ್ಲಿ ಸತ್ಯದ ಸ್ಪಷ್ಟವಾದ, ನಿಜವಾದ, ಅಭಿವ್ಯಕ್ತಿಯನ್ನು ಸೂಚಿಸುತ್ತದೆ. ಧರ್ಮ ಜೀವನದ ನಡವಳಿಕೆಯಲ್ಲಿ ಸತ್ಯದ ಆಚರಣೆ. ವಾಸ್ತವವಾಗಿ ಧರ್ಮವೆಂಬುದು ಜೀವನವಿಧಾನ. ಅದು, ಅಂತರ್ದೃಷ್ಟಿಯುಳ್ಳ ವ್ಯಕ್ತಿಯು ತಾನು ನಿಜವಾಗಿ ವ್ಯಕ್ತಪಡಿಸಿರುವಂತೆ ಗ್ರಹಿಸಿರುವ ಸತ್ಯವನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ. ಸಂಕ್ಷೇಪವಾಗಿ ಋತ ಎಂದರೆ ಆಲೋಚನೆಯಲ್ಲಿ ಸತ್ಯ, ಸತ್ಯ ಎಂದರೆ ಮಾತುಗಳಲ್ಲಿ ಸತ್ಯ ಮತು ಧರ್ಮವೆಂದರೆ ಕ್ರಿಯೆಯಲ್ಲಿ ಸತ್ಯ. ಆದ್ದರಿಂದಲೇ ಬೃಹದಾರಣ್ಯಕೋಪನಿಷತ್ತು ಧರ್ಮವಾವುದೋ ಅದೇ ಸತ್ಯ ಎಂದು ಸಾರುತ್ತಿದೆ. ಆದ್ದರಿಂದಲೇ ಭಾರತೀಯ ಚಿಂತಕರ ಪ್ರಕಾರ ಧರ್ಮ ಮತ್ತು ಸತ್ಯ ಪರ್ಯಾಯ ಪದಗಳಾಗಿವೆ. ಮತ್ತು ಮನುಷ್ಯನ ಮೂಲಭೂತವಾದ ಹೆಬ್ಬಯಕೆ ಅವಶ್ಯಕವಾಗಿಯೂ ಮನಸ್ಸು ಮಾತು ಮತ್ತು ಕ್ರಿಯೆಗಳಲ್ಲಿ ಸತ್ಯದ ಅನ್ವೇಷಣೆಯೇ ಆಗಿರಬೇಕು. ಮಾನವ ಜನಾಂಗದ ಅಭ್ಯುದಯ ಮತ್ತು ಕ್ಷೇಮಕ್ಕೆ ಅವಶ್ಯವಾಗಿಯೂ ಕೊಡುಗೆ ನೀಡುವುದಾಗಿರುವುದರಿಂದ ಈ ಸತ್ಯಾನ್ವೇಷಣೆಯೇ ಬಾಳಿನ ಪ್ರಮುಖ ಗುರಿಯಾಗಿಬೇಕೆಂಬ ಬಗ್ಗೆ ಅವರು ದೃಢ ನಂಬಿಕೆಯುಳ್ಳವರಾಗಿದ್ದಾರೆ. ಮಹಾಭಾರತದ ತುಲಾಧಾರ–ಜಾಜಲಿ ಸಂವಾದದಲ್ಲಿ ವ್ಯಾಸರು, ಸಕಲರಿಗೂ ಮಿತ್ರನಾಗಿರುವ ಮತ್ತು ಮನಸ್ಸು, ಮಾತು, ಕೃತಿಗಳಲ್ಲಿ ಎಲ್ಲರ ಕ್ಷೇಮಕ್ಕಾಗಿ ತನ್ನನ್ನು ಅರ್ಪಿಸಿಕೊಂಡಿರುವ ವ್ಯಕ್ತಿಯು ಮಾತ್ರವೇ ಧರ್ಮವೆಂದರೇನೆಂಬುದನ್ನು ಅರಿತಿದ್ದಾನೆಂದು ತಿಳಿಸುತ್ತಾರೆ. ಆದ್ದರಿಂದಲೇ ಬಾಳಿನಲ್ಲಿ

ಮನುಷ್ಯನೊಬ್ಬನ ನಡತೆ, ವರ್ತನೆ ಮತ್ತು ಕ್ರಿಯೆ ಪ್ರೀತಿ ಮತ್ತು ಸ್ನೇಹದಿಂದ ಮತ್ತು ಇಡೀ ಮಾನವ ಜನಾಂಗದ ಕ್ಷೇಮ ಮತ್ತು ಅಭ್ಯುದಯಕ್ಕೆ ಕೊಡುಗೆಯನ್ನು ನೀಡಬೇಕೆಂಬ ಉತ್ಕಟವಾದ ಅಭಿಲಾಷೆಯಿಂದ ಪ್ರೇರಿತವಾದಾಗ ಆತನೊಬ್ಬ 'ಧರ್ಮಿಷ್ಠ'ನೆಂದು ಅಥವಾ ಬಾಳಿನಲ್ಲಿ ಧರ್ಮವನ್ನು ಅನುಸರಿಸುವವನೆಂದು ಹೇಳಬಹುದೆಂಬುದನ್ನು ನಾವು ಕಾಣುತ್ತೇವೆ.

ಸರ್ವೇಷಾಂ ಚ ಸುಹೃನ್ನಿತ್ಯಂ ಸರ್ವೇಷಾಂ ಚ ಹಿತೇ ರತಃ ।
ಕರ್ಮಣಾ ಮನಸಾ ವಾಚಾ ಸ ಧರ್ಮಂ ವೇದ ಜಾಜಲೇ ॥
(ಶಾಂತಿಪರ್ವ ೨೬೮, ಶ್ಲೋಕ ೯)॥

* * * *

೧೦. ಸಮತಾವಾದ ಮತ್ತು ಮಾನವತಾವಾದದೊಡನೆ ಹೋಲಿಸಿದಾಗ ಧರ್ಮ

ಆಧುನಿಕ ಕಲ್ಪನೆಗಳಾದ ಸಮತಾವಾದ ಮತ್ತು ಮಾನವತಾವಾದಗಳೊಡನೆ ಭಾರತೀಯ ಸಿದ್ಧಾಂತವಾದ ಧರ್ಮವನ್ನು ಹೋಲಿಸುವುದು ಕುತೂಹಲಕಾರಿಯಾಗಿರುತ್ತದೆ. ಸಮತಾವಾದ ಮತ್ತು ಮಾನವತಾವಾದಗಳ ಸ್ವಯಂಘೋಷಿತ ಉದ್ದೇಶ ಧರ್ಮದ ಉದ್ದೇಶಕ್ಕೆ ಸಮನಾದುದು, ಅದೆಂದರೆ ಮಾನವಸಮಾಜದ ಅಭಿವೃದ್ಧಿ ಮತ್ತು ಕ್ಷೇಮ. ಆದರೆ, ಧರ್ಮವು ವಿಧಾನ ಮತ್ತು ಮನೋಧರ್ಮಗಳಲ್ಲಿ ಸಮತಾವಾದ ಮತ್ತು ಮಾನವತಾವಾದದ ಇವೇ ಅಂಶಗಳಿಂದ ಮೂಲಭೂತವಾಗಿ ವ್ಯತ್ಯಾಸ ಹೊಂದಿದೆ. ಸಮತಾವಾದವು ತನ್ನ ಆದರ್ಶವನ್ನು ಪಡೆದುಕೊಳ್ಳಲು ಕ್ರೌರ್ಯ ಮತ್ತು ಕ್ರಾಂತಿಕಾರಿ ವಿಧಾನಗಳನ್ನು ಅನುಸರಿಸಲು ಸಿದ್ಧವಾಗಿರುತ್ತದೆ. ಆದರೆ ಧರ್ಮವು ವ್ಯಕ್ತಿಯ ಮತ್ತು ಸಾಮಾನ್ಯವಾಗಿ ಸಮಾಜದ ಕ್ಷೇಮ ಮತ್ತು ಸಂತೋಷವನ್ನು ಅಹಿಂಸೆಯ ಮನೋಧರ್ಮ ಮತ್ತು ವಾತಾವರಣದಲ್ಲಿ ಸಾಧಿಸಲು ಬಯಸುತ್ತದೆ ಮತ್ತು ಕ್ರೌರ್ಯ ಹಾಗೂ ಕ್ರಾಂತಿಗೆ ಅದು ವಿರೋಧಿಯಾಗಿದೆ. ಮಹಾಭಾರತದ ಶಾಂತಿಪರ್ವ ಅಧ್ಯಾಯ ೧೦೯, ಶ್ಲೋಕ ೧೨ರಲ್ಲಿ ವ್ಯಾಸರು ಸಾರುವುದೇನೆಂದರೆ ಎಲ್ಲ ಜೀವಿಗಳ ಬಗೆಗೆ ಅಹಿಂಸೆಯ ಉದ್ದೇಶಕ್ಕಾಗಿಯೇ ಧರ್ಮದ ನಿಯಮಗಳು ಪ್ರತಿಪಾದಿತವಾಗಿವೆ ಮತ್ತು ಯಾವುದೇ ಆಗಿರಲಿ ಅಹಿಂಸೆಯ ಮನೋಧರ್ಮದಿಂದ ಪ್ರೇರಿತಗೊಂಡಿದ್ದಲ್ಲಿ ಅದು ಧರ್ಮವೆನಿಸುತ್ತದೆ.

ಅಹಿಂಸಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಂ ।
ಯಸ್ಸ್ಯಾದ್ ಅಹಿಂಸಾಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ ॥

ವಾಸ್ತವವಾಗಿ ಆತ ಅಹಿಂಸೆಯೇ ಅತ್ಯುನ್ನತವಾದ ಧರ್ಮವೆಂದು ಹೇಳುವ ಹಂತಕ್ಕೆ ಹೋಗುತ್ತಾರೆ. (ಗಮನಿಸಿ : *ಮಹಾಭಾರತ* ಅಧ್ಯಾಯ ೧೧, ೧೩)

ಅಹಿಂಸಾ ಪರಮೋ ಧರ್ಮಃ ।

ಧರ್ಮದ ಪಾರಮ್ಯ 'ದೈಹಿಕ ಬಲವೇ ಸರಿಯಾದುದು' ಎಂಬ ಸಿದ್ಧಾಂತದ ನಿರಾಕರಣೆಯ ಮೇಲೆ ಆಧಾರಗೊಂಡಿದೆ. ಮತ್ತು ಅದು ಪಾಶವೀ ಬಲ ಅಥವಾ

ಬಲಾತ್ಕಾರ ಅಥವಾ ಸೈನಿಕ ಶಕ್ತಿಯು ಮೇಲೆ ನೆಲೆಗೊಂಡಿಲ್ಲ. ಬೃಹದಾರಣ್ಯಕೋಪನಿಷತ್ತಿನ ಈ ಮುಂದೆ ಕಾಣಿಸಿರುವ ಭಾಗದಲ್ಲಿ ಧರ್ಮದ ಈ ಮೂಲಭೂತವಾದ ಆಧಾರವು ಸೊಗಸಾಗಿ ನಿರೂಪಿತವಾಗಿದೆ.

> ಸ ನೈವ ವ್ಯಭವತ್, ತಚ್ಛ್ರೇಯೋರೂಪಮತ್ಯಸೃಜತ ಧರ್ಮಮ್– ತದೇತ ।
> ತ್ಕ್ಷತ್ರಸ್ಯ ಕ್ಷತ್ರಂ ಯದ್ಧರ್ಮಃ। ತಸ್ಮಾದ್ಧರ್ಮಾತ್ಪರಂ ನಾಸ್ತಿ ಅಥೋ ಅಬಲೀಯಾನ್
> ಬಲೀಯಾಂಸಂ ಆಶಸತೇ ಧರ್ಮೇಣ ಯಥಾರಾಜಾ ಏವ ಯೋ ವೈ ಸ ಧರ್ಮಃ ।
> ಸತ್ಯಂ ವೈ ತತ್॥
> ತಸ್ಮಾತ್ಸತ್ಯಂ ವದಂತಮಾಹುಃ ಧರ್ಮಂ ವದಂತಿ, ಧರ್ಮಂವಾವದಂತಂ ಸತ್ಯಂ
> ವದಂತೀತಿ । ಏತದ್ಧ್ಯೇವೈತತ್ ಉಭಯಂ ಭವತಿ ।
> *(ಬೃಹದಾರಣ್ಯಕೋಪನಿಷತ್)*
>
> ಸತ್ಯಂ ಯಥಾಶಾಸ್ತ್ರಾರ್ಥತಾ ಸ ಏವ ಅನುಷ್ಠೀಯಮಾನಃ ಧರ್ಮನಾಮಾ ಭವತಿ ।
> (ಶ್ರೀ ಶಂಕರ)

ಇದನ್ನು ಈ ಕೆಳಗಿನಂತೆ ಭಾಷಾಂತರ ಮಾಡಬಹುದು– 'ನಾಲ್ಕು ವರ್ಣಗಳನ್ನು, ಅಂದರೆ ಬೌದ್ಧಿಕ ಮತ್ತು ಆಧ್ಯಾತ್ಮಿಕವರ್ಗ, ಕ್ಷತ್ರಿಯ ವರ್ಗ, ವಾಣಿಜ್ಯ ಮತ್ತು ಕುಶಲಕರ್ಮಿಗಳ ವರ್ಗ ಮತ್ತು ಶ್ರಮಿಕವರ್ಗವನ್ನು ಸೃಷ್ಟಿಮಾಡಿದ ಮೇಲೆ ಪ್ರಜಾಪತಿಯು ತನ್ನ ಕಾಯಕವು ಪೂರ್ಣಗೊಂಡಿಲ್ಲವೆಂದು ಭಾವಿಸಿದನು, ಆದ್ದರಿಂದಲೇ ಆತನು ಮುಂದುವರಿದು ಇವೆಲ್ಲವುಗಳಿಗಿಂತಲೂ ಮೇಲಾಗಿ ಪರಮೋಚ್ಚ ಆನಂದ ಮತ್ತು ಕ್ಷೇಮ ಸ್ವರೂಪವಾಗಿರುವ ಧರ್ಮವನ್ನು ಸೃಷ್ಟಿಮಾಡಿದನು. ಈ ಧರ್ಮ ಕ್ಷತ್ರಿಯರನ್ನು ನಿಯಂತ್ರಿಸುವಂತಹುದು. ಧರ್ಮಕ್ಕಿಂತಲೂ ಶ್ರೇಷ್ಠವಾದುದು ಯಾವುದೂ ಇಲ್ಲ. ಆದ್ದರಿಂದಲೇ ದುರ್ಬಲನಾದ ಮನುಷ್ಯ ಪ್ರಬಲನಾದ ಮನುಷ್ಯನನ್ನು ಧರ್ಮದ ಮೂಲಕ ನಿಯಂತ್ರಿಸಬಯಸುತ್ತಾನೆ, ದೊರೆಯು ಕಾನೂನಿನ ಬಲದಿಂದ ನಿಯಂತ್ರಿಸುವಂತೆ. ಆ ಧರ್ಮವೇ ಸತ್ಯ.'

ಈ ಗ್ರಂಥಭಾಗದಲ್ಲಿ ಉಪನಿಷತ್ತಿನ ಶ್ರೇಷ್ಠ ಋಷಿ ಸಮಾಜದ ಸ್ಥಿರತೆಯನ್ನು ಕಾಪಾಡಲು ಧರ್ಮ ಅತ್ಯಗತ್ಯವೆಂಬುದನ್ನು ಒತ್ತಿ ಹೇಳುತ್ತಾನೆ. ಇದು ದೊರೆಯ ಅಥವಾ ರಾಜ್ಯದ ಶಕ್ತಿ ಮತ್ತು ಅಧಿಕಾರದಿಂದ ಅಲ್ಲ, ಆದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಧರ್ಮದ ಆಚರಣೆಯಲ್ಲಿ ಅನುಸರಿಸುವ ಆತ್ಮಸಂಯಮದ ಸಹಜವಾದ ಪರಿಣಾಮದಿಂದ ಮಾತ್ರ. ದೈತ್ಯಶಕ್ತಿಯನ್ನು ಹೊಂದಿದ್ದರೂ ಪ್ರಬಲನಾದ ವ್ಯಕ್ತಿಯು ದುರ್ಬಲರ ವಿರುದ್ಧವಾಗಿ ದೈತ್ಯನಂತೆ ಅದನ್ನು ಬಳಸುವುದಿಲ್ಲ ಮತ್ತು ಇತರರಿಗೆ ಅನೀತಿ ಮತ್ತು ಅನ್ಯಾಯವಾಗುವುದನ್ನು ನಿವಾರಿಸುತ್ತಾನೆ. ಈ ರೀತಿಯಲ್ಲಿ

ಪ್ರತಿಯೋರ್ವ ವ್ಯಕ್ತಿಯ ಆತ್ಮಸಂಯಮದ ಅನುಷ್ಠಾನ ಮತ್ತು ತನ್ನ ಸಹವರ್ತಿಗಳ ವಿಚಾರದಲ್ಲಿ ತನ್ನ ಕರ್ತವ್ಯಗಳ ಆಚರಣೆಯಿಂದ ಮಾನವ ಸಮಾಜ ಪ್ರಬಲ ವ್ಯಕ್ತಿಯ ಕ್ರೌರ್ಯ, ದಬ್ಬಾಳಿಕೆಗಾರನ ಅನ್ಯಾಯಗಳು ಮತ್ತು ದುರಹಂಕಾರಿಯ ನಿಷ್ಠುರ ನುಡಿಗಳಿಂದ ಮುಕ್ತವಾಗುತ್ತದೆ. ಈ ಗ್ರಂಥಭಾಗದ ಮೇಲಣ ತಮ್ಮ ಭಾಷ್ಯದಲ್ಲಿ ಶ್ರೀ ಶಂಕರಾಚಾರ್ಯರು, ಸೃಷ್ಟಿಕರ್ತನಾದ ಪ್ರಜಾಪತಿ ಮಾನವ ಕುಲದ ತನ್ನ ಸೃಷ್ಟಿ ಪೂರ್ಣವಾಗಿಲ್ಲವೆಂದು ಭಾವಿಸಿ, ದೊರೆ ಅಥವಾ ಕ್ಷತ್ರಿಯನಿಗಿಂತಲೂ ಮೇಲಾಗಿ ಧರ್ಮವನ್ನು ಸೃಷ್ಟಿಮಾಡಲು ಮುಂದುವರಿದುದೇಕೆ ಎಂಬುದನ್ನು ವಿವರಿಸುತ್ತ ಅತ್ಯಂತ ಮಹತ್ವಪೂರ್ಣವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

> ಉಗ್ರತ್ವಾತ್ ಕ್ಷತ್ರಿಯಸ್ಯ ಅನಿಯತಾಶಂಕಯಾ ।

'ಆತನ ಬಲಾತ್ಕಾರದ ಮತ್ತು ದಬ್ಬಾಳಿಕೆಯ ಲಕ್ಷಣದಿಂದಲಾಗಿ ಕ್ಷತ್ರಿಯನ ಅಧಿಕಾರದ ಅನಿಶ್ಚಿತತೆಯ ಕಾರಣದಿಂದ.' ಏಕೆಂದರೆ, ಯಾವಾಗಲೂ ವೇಗಿಯಾದವನಿಗೇ ಪಂದ್ಯ ಅಥವಾ ಪ್ರಬಲನಾದವನಿಗೇ ಯುದ್ಧ ಮತ್ತು ಸಮರ್ಥನಾದವನಿಗೇ ಯಾವಾಗಲೂ ಉಳಿವು ಎಂಬುದಿಲ್ಲ. ಆದ್ದರಿಂದಲೇ ಪರಮಾತ್ಮ ಆಳುವ ವರ್ಗದ ಸೃಷ್ಟಿ ಮಾತ್ರವೇ ಸಮಾಜದ ಸ್ಥಿರತೆಗೆ ಮತ್ತು ವಿಶ್ವವ್ಯವಸ್ಥೆಗೆ ಸಾಕಾಗುತ್ತದೆ ಎಂಬ ಬಗ್ಗೆ ಅನುಮಾನಗೊಂಡಿದ್ದ. ಯಾವ ರಾಜ್ಯವು ಅತ್ಯಲ್ಪವಾದ ನಿಯಂತ್ರಣಕ್ಕೊಳಗಾಗಿರುವುದೋ ಅದು ಅತ್ಯಂತ ಸಮರ್ಥ ಆಳ್ವಿಕೆಗೆ ಒಳಪಟ್ಟಿರುತ್ತದೆ. ಆದ್ದರಿಂದಲೇ ಉಪನಿಷತ್ತು ರಾಜನಿಗೂ ನಿಯಂತ್ರಕವಾಗಿರುವ ಧರ್ಮವನ್ನು ಭಗವಂತ ಸೃಷ್ಟಿಮಾಡಿದನೆಂದು ವಿವರಿಸತೊಡಗುತ್ತದೆ. ರಾಜನ ಆಳ್ವಿಕೆಗಿಂತಲೂ ಧರ್ಮದ ಪಾರಮ್ಯ ಅತ್ಯಗತ್ಯವಾದುದು. ಈ ಎಲ್ಲ ಚರ್ಚೆಗಳಿಂದ ಭಾರತದ ಅತ್ಯಂತ ಶ್ರೇಷ್ಠ ಮೇಧಾವಿಗಳ ಅಭಿಪ್ರಾಯದಲ್ಲಿ ಧರ್ಮದ ಮೂಲಭೂತವಾದ ಕಲ್ಪನೆಯೇನೆಂಬುದನ್ನು ನಾವು ಅರಿತುಕೊಳ್ಳಬಹುದು. ಅದು ಸತ್ಯ ಮತ್ತು ಅಹಿಂಸೆಯ ಮೇಲೆ ಆಧಾರಗೊಂಡಿದೆ ಮತ್ತು ಅದು ಎಲ್ಲ ಒತ್ತಾಯ ಅಥವಾ ಬಲಾತ್ಕಾರ, ಪಶುಬಲ ಅಥವಾ ಕ್ರೌರ್ಯವನ್ನು ತ್ಯಜಿಸುತ್ತದೆ. ವಿನಾಶದಿಂದ ಕೆಡುಕನ್ನು ಅಂತ್ಯಗೊಳಿಸುವ ಸಿದ್ಧಾಂತದ ಮೇಲೆ ಅದು ಆಧಾರಗೊಂಡಿಲ್ಲ. ಅದು ಆತ್ಮಸಂಯಮದ ಪರಿಣಾಮಕಾರಿತ್ವ ಮತ್ತು ಮಾನವ ಚೈತನ್ಯದ ಘನತೆಯ ಸಾಕ್ಷಾತ್ಕಾರದ ಮೂಲಕ ಸೌಮ್ಯವಾಗಿ ಪ್ರವರ್ತಿಸುತ್ತದೆ. ಧರ್ಮ ಎಂಬುದರಿಂದ 'ಕರ್ತವ್ಯ'ವು ಸೂಚಿತವಾಗಿದೆ. ವ್ಯಕ್ತಿಯೊಬ್ಬನಿಂದ ತನ್ನ ಕುಟುಂಬಕ್ಕೆ, ತನ್ನ ಸಮಾಜಕ್ಕೆ, ಪರಮಾತ್ಮನಿಗೆ, ತನ್ನದೇ ಆದ ಉನ್ನತ ಆತ್ಮಕ್ಕೆ ಸಲ್ಲಬೇಕಾದ ಕರ್ತವ್ಯವೆಲ್ಲವೂ ಆತನ ಧರ್ಮವೇ ಆಗಿದೆ. ಧರ್ಮವು ಸಾಮಾನ್ಯವಾಗಿ ಹಕ್ಕುಗಳಿಗೆ ಒತ್ತನ್ನು ನೀಡುವುದಿಲ್ಲ. ಧರ್ಮಶಾಸ್ತ್ರದ 'ವ್ಯವಹಾರ' ಅಧ್ಯಾಯವನ್ನು ಹೊರತುಪಡಿಸಿದಲ್ಲಿ ಇದು ಸತ್ಯವೇ ಆಗಿದೆ. ಪ್ರತಿಯೊಬ್ಬನಿಗೂ ಮತ್ತೊಬ್ಬನ ವಿಷಯದಲ್ಲಿ ಕರ್ತವ್ಯದ ಒತ್ತಾಯವನ್ನು

ವಿಧಿಸಿರುವುದು ಮಾನವ ಹಕ್ಕುಗಳ ಘೋಷಣೆಯ ಉದ್ದೇಶವನ್ನೇ ನಿರ್ವಹಿಸುತ್ತಿದೆ. ಆದರೆ, ಹಕ್ಕಿನ ಆವೇಶಪೂರ್ಣ ಸಮರ್ಥನೆ ಉಂಟುಮಾಡಬಹುದಾದ ಅನ್ಯೋನ್ಯ ಘರ್ಷಣೆಯನ್ನು ತಪ್ಪಿಸಬಲ್ಲ ಅನುಕೂಲವನ್ನು ಅದು ಹೊಂದಿದೆ.

ವ್ಯಾಸರು ಶಾಂತಿಪರ್ವದ 'ಪರಾಶರಗೀತೆ'ಯ ಅಧ್ಯಾಯ ೩೦೦ರ ೨೯ರಿಂದ ೩೧ನೆಯ ಶ್ಲೋಕಗಳಲ್ಲಿ ಸಾರುವುದೇನೆಂದರೆ ಧಾರ್ಮಿಕನಾದ ವ್ಯಕ್ತಿ ತಾನೇ ಆತ್ಮಸಾಕ್ಷಾತ್ಕಾರ ಪಡೆದವನಾಗಿ ಅಹಿಂಸೆಯ ಮನೋಧರ್ಮದಲ್ಲಿ ಸೂಕ್ಷ್ಮ ವಿವೇಚನೆಯೊಂದಿಗೆ ವ್ಯಕ್ತಿಗಳ ನಡುವೆ ಕಾರ್ಯವೆಸಗುತ್ತಾನೆ. ಮತ್ತು ಧರ್ಮದ ಆಚರಣೆಯೇ ಮನುಷ್ಯನನ್ನು ಕೆಳವರ್ಗದ ಪ್ರಾಣಿಗಳಿಂದ ಪ್ರತ್ಯೇಕಗೊಳಿಸುವ ಅಂಶವಾಗಿದೆ.

ಧರ್ಮಶೀಲೋ ನರೋ ವಿದ್ವಾನ್ ಈಹಕೋಽನೀಹಕೋಪಿವಾ ।
ಆತ್ಮಭೂತಃ ಸದಾಲೋಕೇ ಚರೇದ್ಭೂತಾನಹಿಂಸಯಾ ॥
ಯದಾವ್ಯಪೇತಹೃಲ್ಲೇಖಂ ಮನೋಭವತಿ ತಸ್ಯವೈ ।
ನಾನೃತಂ ಚೈವ ಭವತಿ ತದಾ ಕಲ್ಯಾಣಮೃಚ್ಛತಿ ॥
ಮಾನುಷೇಷು ಮಹಾರಾಜ ಧರ್ಮಾಧೇರ್ಮೌಪ್ರವರ್ತತಃ ।
ನ ತಥಾನ್ಯೇಷು ಭೂತೇಷು ಮನುಷ್ಯರಹಿತೇಷ್ವಿಹ ॥

ಆತ ಮತ್ತೂ ನುಡಿಯುವುದು ಹೀಗೆ– ಧಾರ್ಮಿಕನಾದ ವ್ಯಕ್ತಿ ಮನಸ್ಸಿನ ಎಲ್ಲ ಕಶ್ಮಲಗಳನ್ನೂ ಮತ್ತು ಹೃದಯದಿಂದ ಎಲ್ಲ ಕಳಂಕಗಳನ್ನೂ ತೊಡೆದುಹಾಕುತ್ತಾನೆ, ಸುಳ್ಳಿನಿಂದ ಮುಕ್ತನಾಗಿರುತ್ತಾನೆ ಮತ್ತು ಎಲ್ಲರಿಗೂ ಯಾವಾಗಲೂ ಒಳಿತನ್ನೇ ಮಾಡುತ್ತಾನೆ. 'ಕೃಷ್ಣ ಯಜುರ್ವೇದ'ದ 'ತೈತ್ತಿರೀಯ ಆರಣ್ಯಕ' ದ 'ನವಮ ಪ್ರಪಾಠಕ'ದ 'ದಶಮಾನುವಾಕ'ದಲ್ಲಿ ಋಷಿಯು ಧರ್ಮವು ಸಮಗ್ರವಿಶ್ವದ ಆಧಾರವಾಗಿರುವುದೆಂದು ಸಾರುತ್ತಾನೆ. 'ಈ ಪ್ರಪಂಚದಲ್ಲಿ ಎಲ್ಲ ಜನರೂ ಧಾರ್ಮಿಕವ್ಯಕ್ತಿಯನ್ನು ಮಾರ್ಗದರ್ಶನಕ್ಕಾಗಿ ಸಮೀಪಿಸುತ್ತಾರೆ. ಧರ್ಮದಿಂದ ಪಾಪವು ನಾಶಹೊಂದುತ್ತದೆ. ಧರ್ಮದಲ್ಲಿ ಎಲ್ಲವೂ ನೆಲೆಯೂರಿದೆ. ಆದ್ದರಿಂದಲೇ ಅವರು ಧರ್ಮವನ್ನು ಪರಮೋಚ್ಚವಾದುದೆಂದು ಹೇಳುತ್ತಾರೆ. 'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ, ಲೋಕೇ ಧರ್ಮಿಷ್ಠಂ ಪ್ರಜಾ ಉಪಸರ್ಪಂತಿ, ಧರ್ಮೇಣ ಪಾಪಮಪನುದತಿ, ಧರ್ಮೇ ಸರ್ವಂ ಪ್ರತಿಷ್ಠಿತಂ । ತಸ್ಮಾದ್ಧರ್ಮಂ ಪರಮಂ ವದಂತಿ– ಇತಿ.' ಅದೇ ಗ್ರಂಥ ಭಾಗವು ಐದು ಗುಣಗಳನ್ನು ಧರ್ಮಕ್ಕೆ ಪೂರ್ವವರ್ತಿಯಾದುವುಗಳೆಂದು ಪ್ರಾಶಸ್ತ್ಯ ನೀಡುತ್ತದೆ. ಮೊದಲನೆಯದಾಗಿ ಸತ್ಯವನ್ನು ಉಲ್ಲೇಖಿಸಲಾಗಿದೆ. ನಂತರ ಬರುವುದು ಪಾರಮಾರ್ಥಿಕತೆ ಅಥವಾ 'ತಪಸ್ಸು' ಮತ್ತು ಬಳಿಕ ಇಂದ್ರಿಯ ನಿಗ್ರಹಕ್ಕೆ

ಒತ್ತುನೀಡಲಾಗಿದೆ, ಮತ್ತು ನಂತರ ಶಮ ಅಥವಾ ಮನಸ್ಸಿನ ಸಂಯಮಕ್ಕೆ ಒತ್ತು ನೀಡಲಾಗಿದೆ ಮತ್ತು ಕೊನೆಯದಾಗಿ ದಾನವನ್ನು ಕೊಂಡಾಡಲಾಗಿದೆ. ಹೀಗೆ, ಧರ್ಮದ ಆಚರಣೆ ಸತ್ಯ, ಪಾರಮಾರ್ಥಿಕತೆ, ಇಂದ್ರಿಯಗಳ ನಿಗ್ರಹ, ಮನಸ್ಸಿನ ಸಂಯಮ ಮತ್ತು ದಾನವೆಂಬ ಐದು ಗುಣಗಳ ಸ್ವಾಧೀನತೆಯ ಮೇಲೆ ಆಧಾರಗೊಂಡಿರುವುದನ್ನು ನಾವು ಕಾಣುತ್ತೇವೆ. ಕುರಳ್‌ನಲ್ಲಿ ವಳ್ಳುವರ್ ಧರ್ಮವನ್ನು ಕುರಿತಂತೆ ಹೀಗೆ ವಿಧಿಸುತ್ತಾರೆ:

'ಮನತ್ತುಕ್ಕಣ್ ಮಾಸಿಲನಾದಲ್ ಅನೈತ್ತರನಾಗುಳ ನೀರಪಿರ' ।

ಮನಸ್ಸಿನ ಕಶ್ಮಲದಿಂದ ಮುಕ್ತನಾಗುವುದೇ ಸಮಗ್ರ ಧರ್ಮ, ಉಳಿದುದೆಲ್ಲ ಬಹಿರಂಗ ಪ್ರದರ್ಶನ.

'ಅಲುಕ್ಕಾರು ಅವಾ ವೆಗುಳಿ ಇನ್ನಾಕೋಲ್
ನಾಂಗುಮಿಲುಕ್ಕಾ ವಿಯನ್ರದರಮ್ ॥

ಅಸೂಯೆಯ, ಇಂದ್ರಿಯಗಳ ಅಭಿಲಾಷೆಯ, ಕೋಪ, ಮನನೋಯಿಸುವ ಮಾತುಗಳನ್ನು ತಪ್ಪಿಸಿಕೊಂಡು ಮುನ್ನಡೆಯುವ ನಡವಳಿಕೆಯ ಯಾವ ಮಾರ್ಗವಿದೆಯೋ ಅದುವೇ ಧರ್ಮವೆನಿಸುತ್ತದೆ. ವ್ಯಾಖ್ಯಾನಕಾರರಾದ ಪರಿಮೇಳಳಗರ್ ಈ ಎರಡು ಪದ್ಯಗಳಿಂದ ಧರ್ಮದ ಸ್ವರೂಪವು ನಿರೂಪಿತವಾಗಿದೆಯೆಂದು ಅಭಿಪ್ರಾಯಪಡುತ್ತಾರೆ.

* * * *

೧೧. ನಾಲ್ಕು ಸೇತುಗಳು

ಆದ್ದರಿಂದ ಸಾಮವೇದದಲ್ಲಿನ ರಮಣೀಯವಾದ ಗೀತೆಯೊಂದರ ಪ್ರಕಾರ ಮನುಷ್ಯನಿಗೆ ನಾಲ್ಕು ಮಹತ್ತರವಾದ ಸೇತುಗಳನ್ನು ಅಥವಾ ಏರಿಗಳನ್ನು, ಅವುಗಳಿಗನುಗುಣವಾದ ನಾಲ್ಕು ಗುಣಗಳನ್ನು ಪರಿಪೂರ್ಣವಾಗಿರುವಂತೆ ಬೆಳೆಸಿಕೊಂಡು ದಾಟುವುದೇ ಅತ್ಯಂತ ಶ್ರೇಷ್ಠವಾದ ಆದರ್ಶವಾಗಿದೆ. ಉಲ್ಲೇಖಗೊಂಡಿರುವ ನಾಲ್ಕು ಸೇತುಗಳೆಂದರೆ 'ಅದಾನ' ಅಥವಾ ಸ್ವಾರ್ಥದ ಹೆಚ್ಚಳ, 'ಕ್ರೋಧ' ಅಥವಾ ಕೋಪ, 'ಅಶ್ರದ್ಧಾ' ಅಥವಾ ನಂಬಿಕೆಯ ಕೊರತೆ ಮತ್ತು 'ಅಸತ್ಯ', ಮನುಷ್ಯನು ಕೋಪವನ್ನು 'ಅಕ್ರೋಧ' ಅಥವಾ ಪ್ರಶಾಂತತೆಯಿಂದ. ಸ್ವಾರ್ಥತೆಯನ್ನು ದಾನದಿಂದ, ನಂಬಿಕೆಯ ಕೊರತೆಯನ್ನು ಸ್ಥಿರವಾದ ನಂಬಿಕೆಯಿಂದ, ಅಸತ್ಯವನ್ನು ಸತ್ಯದಿಂದ ಗೆಲ್ಲಬೇಕೆಂದು ಭಾರತೀಯ ಋಷಿಗಳು ಅಪೇಕ್ಷಿಸುತ್ತಾರೆ. ವ್ಯಕ್ತಿಯೊಬ್ಬನು ತಾನು ಈ ನಾಲ್ಕು ಸೇತುಗಳನ್ನು ದಾಟಿರುವೆನೆಂದು ಹೇಳಬಹುದಾದ ಹಂತವನ್ನು ತಲುಪಿದಾಗ ಆತ ಆತ್ಮವನ್ನು ಸಾಕ್ಷಾತ್ಕರಿಸಿಕೊಂಡವ ಅಥವಾ 'ಜೀವನ್ಮುಕ್ತ' ಎನ್ನಿಸಿಕೊಳ್ಳುತ್ತಾನೆ.

ಸೇತೋನ್‌ಸ್ತರ ದುಸ್ತರಾನ್, ದಾನೇನ ಅದಾನಂ ಅಹಮಸ್ಮಿ ಪ್ರಥಮಜಾ
ಋತಾ(೩)ಸ್ಯ ಸೇತೂನ್‌ಸ್ತರ ದುಸ್ತರಾನ್ಽ ಅಕ್ರೋಧೇನ ಕ್ರೋಧಂ
ಅಕ್ರೋಧೇನ ಕ್ರೋಧಂ ಪೂರ್ವಂ ದೇವೇಭ್ಯೋ ಅಮೃತಸ್ಯ ನಾ (೩) ಭಾಯಿ।
ಸೇತೂನ್‌ಸ್ತರ ದುಸ್ತರಾನ್ ಶ್ರದ್ಧಯಾ ಅಶ್ರದ್ಧಾಂ ಯೋ ಮಾ ದದಾತಿ ಸ ಇದೇವಾ
ಮಾ೩ಽಽವಾಃ

ಸೇತೂನ್ ಸ್ತರ ದುಸ್ತರಾನ್ ಸತ್ಯೇನಾನೃತಂ ಅಹಮನ್ನಮನ್ನದಂತಮಾತಧಿ
ಏಷಾಗತಿಃ ಏತದಮೃತಂ ಸ್ವರ್ಗಚ್ಛ ಜ್ಯೋತಿರ್ಗಚ್ಛ ಸೇತೂನ್‌ಸ್ತೀರ್ತ್ವಾ ಚತುರಾಃ ॥

'ತೈತ್ತಿರಿಯೋಪನಿಷತ್ತು' ಉಲ್ಲೇಖಿಸುವ ಜೀವನ್ಮುಕ್ತನು ಹಾಡುವ ಸಾಮವೇದದ ಗೀತೆ ಇದೇ.

ಏಕತತ್ಸಾಮ ಗಾಯನ್ನಾಸ್ತೇ ॥ ಹಾತವುಹಾ ತವುಹಾ ವು ॥

ತಮ್ಮ ಭಾಷ್ಯದಲ್ಲಿ ವಿದ್ಯಾರಣ್ಯರು 'ಸೇತು ಸಾಮ' ಗೀತೆಯನ್ನೇ

ಹಾಡಬೇಕಾಗಿರುವುದು ಎಂದು ಸ್ಪಷ್ಟಪಡಿಸುತ್ತಾರೆ. ತಮ್ಮ 'ಶತಶ್ಲೋಕಿ'ಯ ೧೧ನೆಯ ಶ್ಲೋಕದಲ್ಲಿ ಶ್ರೀ ಶಂಕರಾಚಾರ್ಯರು ನಾಲ್ಕು 'ಸೇತು'ಗಳನ್ನು ದಾಟುವುದನ್ನು ಸೊಗಸಾಗಿ ನಿರೂಪಿಸಿದ್ದಾರೆ. ಅವರು ಹೇಳಿರುವುದು ಹೀಗೆ:

ದಾನಂ ಬ್ರಹ್ಮಾರ್ಪಣಂ ಯತ್ಕ್ರಿಯತ ನೃಭಿಃ ಸ್ಯಾತ್ಕ್ಷಮಾಕ್ರೋಧಸಂಜ್ಞಾ
ಶ್ರದ್ಧಾಸ್ತಿಕ್ಯಂ ಚ ಸತ್ಯಂ ಸದಿತಿ ಪರಮತಃ ಸೇತುಸಂಜ್ಞಂ ಚತುಷ್ಕಮ್ ।
ತಸ್ಮಾತ್ಸಂಧಾಯ ಜಂತೋರಿತಿ ಚತುರ ಇಮಾನ್ದಾನಪೂರ್ವೈಃ ಚತುರ್ಭಿಃ
ತೀರ್ತ್ವಾ ಶ್ರೇಯೋಽಮೃತಂ ಚ ಶ್ರಯತ ಇಹ ನರಃ ಸ್ವರ್ಗತಿಂ ಜ್ಯೋತಿರಾಪ್ತಿಮ್ ॥

'ಬಂಧನಕ್ಕೆ ಕಾರಣವಾಗುವುವು ನಾಲ್ಕು ಸೇತುಗಳು ಮತ್ತು ಈ ನಾಲ್ಕನ್ನು ದಾಟುವುದು ವ್ಯಕ್ತಿಯೊಬ್ಬನಿಗೆ ಅಮರತ್ವ ಮತ್ತು ಚಿರಂತನ ಸಂತೋಷವನ್ನು ಪಡೆಯುವ ಸಾಮರ್ಥ್ಯವನ್ನು ನೀಡುತ್ತದೆ.' ಮಹಾಭಾರತ, ಉದ್ಯೋಗಪರ್ವ, ವಿದುರನೀತಿಯ ಅಧ್ಯಾಯ ೩೮, ಶ್ಲೋಕ ೭೫ರಲ್ಲಿ ಇದೇ ಭಾವನೆಗಳನ್ನು ವಿದುರ ಮಾರ್ದನಿಸುತ್ತಾನೆ.

ಅಕ್ರೋಧೇನ ಜಯೇತ್ಕ್ರೋಧಂ ಅಸಾಧುಂ ಸಾಧುನಾ ಜಯೇತ್ ।
ಜಯೇತ್ ಕದರ್ಯಂ ದಾನೇನ ಜಯೇತ್ಸತ್ಯೇನ ಚಾನೃತಮ್ ॥

ಕೋಪವನ್ನು ಶಾಂತತೆಯಿಂದ ಗೆಲ್ಲಬೇಕು, ಕೆಡುಕು ಮಾಡುವುದನ್ನು ಸಾಧುತ್ವದಿಂದ ಗೆಲ್ಲಬೇಕು, ಜಿಪುಣನನ್ನು ದಾನಗಳಿಂದ ಗೆಲ್ಲಬೇಕು ಮತ್ತು ಸುಳ್ಳನ್ನು ಸತ್ಯದಿಂದ ಗೆಲ್ಲಬೇಕು. ಬೌದ್ಧರ 'ಧಮ್ಮಪದ' ದಲ್ಲಿ ಇದೇ ಪದ್ಯವು ಪಾಳಿಯಲ್ಲಿ ಕಂಡುಬರುತ್ತದೆ.

ಅಕ್ರೋಧೇನ ಜಿನೇ ಕ್ರೋಧಂ ಅಸಾಧುಂ ಸಾಧುನಾ ಜಿನೇ ।
ಜಿನೇ ಕದರ್ಯಂ ದಾನೇನ ಸಚ್ಚೇನಾಲೀಕವಾದಿನಮ್ ॥

ಧರ್ಮವೂ ಮಾನವತಾವಾದವೇ ಎಂದು ಬೆರಕೆ ಮಾಡಿ ದಿಗ್ಭ್ರಮೆಗೊಳ್ಳಬೇಕಾಗಿಲ್ಲ. ಧರ್ಮವು ಆಧ್ಯಾತ್ಮಿಕತೆಯ ನಿರಂತರವಾದ ಚಿಲುಮೆಯನ್ನು ಆಧರಿಸಿ ಉಚ್ಛ್ರಾಯಸ್ಥಿತಿಯನ್ನು ಪಡೆಯುತ್ತದೆ. ಅದು ತನ್ನ ಮೂಲಗಳನ್ನು ಭೂಮಿ ಮತ್ತು ಪ್ರಾಪಂಚಿಕ ಜೀವನದಲ್ಲಿ ಹೊಂದಿರುವಂತೆಯೇ, ತನ್ನ ಶಿಖರವನ್ನು ಸ್ವರ್ಗ ಅಥವಾ ಮೋಕ್ಷದಲ್ಲಿ ಹೊಂದಿದೆ.

ಎತ್ತರವಾದ ಕಡಿದಾದ ಬಂಡೆಯೊಂದು ತನ್ನ ಘನಗಂಭೀರಾಕೃತಿಯನ್ನು ಮೇಲೆತ್ತುವಂತೆ
ಕಣಿವೆಯಿಂದ ಹೊರಹೊಮ್ಮುತ್ತದೆ, ತೊರೆಯುತ್ತದೆ ಮಧ್ಯದಲ್ಲಿ ಬಿರುಗಾಳಿಯನು
ವಿಶಾಲವಾದದರೆದೆಯ ಸುತ್ತ ಹೊರಳುತ್ತಿದ್ದ ಮೋಡ ಹರಡಿದ್ದರೂ
ಶಾಶ್ವತ ಸೂರ್ಯಪ್ರಕಾಶ ನೆಲೆಸುತ್ತದೆ ಶಿರದ ಮೇಲದರ.

* * * *

೧೨. ಆಧ್ಯಾತ್ಮಿಕ ಮತ್ತು ನೈತಿಕವಾಗಿ ಧರ್ಮದ ಕಲ್ಪನೆ

ಮಾನವತಾವಾದವು ಜನ್ಮಾಂತರ ಅಥವಾ ಅಂತಿಮಸತ್ಯ ಅಥವಾ ದೇವತ್ವದ ಬಗ್ಗೆ ಚಿಂತಿಸುವುದಿಲ್ಲ. ಮಾನವತಾವಾದವು ತನ್ನ ಸಹಮಾನವರನ್ನು ಕುರಿತಂತೆ ವ್ಯಕ್ತಿಯ ಕರ್ತವ್ಯಗಳು, ಪ್ರೇಮ ಮತ್ತು ಮಾನವಜನಾಂಗಕ್ಕೆ ಸೇವೆಯನ್ನು ಒತ್ತಿ ಹೇಳುತ್ತಲಿದ್ದರೂ, ಪರಮಾತ್ಮನಿಗೆ ಅಥವಾ ತನ್ನ ಉನ್ನತವಾದ ಆತ್ಮಕ್ಕೆ ಸಲ್ಲಿಸಬೇಕಾದ ಕರ್ತವ್ಯದ ಬಗ್ಗೆ ಯಾವುದೇ ಸಂಬಂಧವಿಲ್ಲದಂತೆ ಪ್ರವರ್ತಿಸುತ್ತದೆ. ಆದರೆ ಧರ್ಮದ ಆದರ್ಶ ಆಧ್ಯಾತ್ಮಿಕವಾದುದು. ಮಹಾಭಾರತದ ವನಪರ್ವದ 'ಯಕ್ಷಪ್ರಶ್ನೆ'ಯ ೩೧೪ನೇ ಅಧ್ಯಾಯದ ೫೯, ೬೦ನೆಯ ಶ್ಲೋಕಗಳಲ್ಲಿ ಧರ್ಮಪುತ್ರನು ನೀಡಿರುವ ಉತ್ತರ, ಧರ್ಮವೆಂಬುದು ಕೇವಲ ಪ್ರಬುದ್ಧವಾದ ಮಾನವತಾವಾದ ಮಾತ್ರವಲ್ಲ, ಆದರೆ ಅದಕ್ಕಿಂತಲೂ ಹೆಚ್ಚಿನದಾದುದು ಮತ್ತು ಸಂಪೂರ್ಣವಾಗಿ ಧಾರ್ಮಿಕವೂ ಮತ್ತು ಆಧ್ಯಾತ್ಮಿಕವೂ ಆಗಿರುವ ಪರಮಾತ್ಮನನ್ನು ಕುರಿತ ಮತ್ತು ವ್ಯಕ್ತಿಯೊಬ್ಬನ ಪೂರ್ವಜರ ಆತ್ಮಗಳನ್ನೂ ಕುರಿತ ಕರ್ತವ್ಯಗಳನ್ನು ಒಳಗೊಂಡಿದೆಯೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತಿದೆ.

ಯಕ್ಷಪ್ರಶ್ನೆಯ ಸಂಕ್ಷಿಪ್ತವಾದ ಕಥೆ ಹೀಗಿದೆ : ಒಮ್ಮೆ ಹೀಗಾಯಿತು, ಪಾಂಡವ ಸೋದರರು ಕಾಡಿನಲ್ಲಿ ಅಲೆದಾಡುತ್ತಿದ್ದಾಗ ಅವರಿಗೆ ಬಾಯಾರಿಕೆಯುಂಟಾಯಿತು, ಮತ್ತು ತಮ್ಮ ಬಾಯಾರಿಕೆಯನ್ನು ತಣಿಸಿಕೊಳ್ಳಲು ಅವರಿಗೆ ನೀರು ಬೇಕಾಗಿತ್ತು. ನೀರನ್ನು ಹುಡುಕಿಕೊಂಡು ಮೊದಲು ಹೊರಟ ಸಹದೇವ ಕೊಳವೊಂದನ್ನು ಕಂಡ, ನೀರಿನ ಬಳಿಗೆ ತೆರಳಿದ. ಹಠಾತ್ತನೆ ಆತನಿಗೆದುರಾದ ಯಕ್ಷನೊಬ್ಬನು ಆತನಿಗೆ ಕೇಳಲಾಗುವ ಪ್ರಶ್ನೆಗಳಿಗೆ ಆತನು ಉತ್ತರ ನೀಡಬೇಕೆಂದೂ ಮತ್ತು ಆತನು ತೃಪ್ತಿಕರವಾದ ಉತ್ತರಗಳನ್ನು ನೀಡಿದ್ದೇ ಆದಲ್ಲಿ ನೀರನ್ನು ಕುಡಿಯಬಹುದೆಂದು ನುಡಿದನು. ಇಲ್ಲದಿದ್ದಲ್ಲಿ ಆತ ಹತ್ತಿರದಲ್ಲಿಯೇ ಪ್ರಜ್ಞಾಶೂನ್ಯವಾಗಿ ಕೆಳಗೆ ಬೀಳುವುದಾಗಿಯೂ ತಿಳಿಸಿದನು. ಯಕ್ಷನ ಮಾತುಗಳಿಗೆ ಬೆಲೆಕೊಡದೆ ಸಹದೇವನು ನೀರನ್ನು ಕುಡಿದು ನೆಲದ ಮೇಲೆ ಪ್ರಜ್ಞೆ ತಪ್ಪಿ ಉರುಳಿದನು. ಒಬ್ಬನ ನಂತರ ಒಬ್ಬರಾದ ನಕುಲ, ಅರ್ಜುನ, ಭೀಮಸೇನರಿಗೂ ಇದೇ ಪರಿಸ್ಥಿತಿಯುಂಟಾಯಿತು. ಅಂತಿಮವಾಗಿ ಧರ್ಮರಾಯನು ಯಕ್ಷನ ಪ್ರಶ್ನೆಗಳಿಗೆ ಯಶಸ್ವಿಯಾಗಿ ಉತ್ತರಗಳನ್ನು ನೀಡಿದನು. ಯಕ್ಷನು ಯುಧಿಷ್ಠಿರನಿಗೆ ವರವೊಂದನ್ನು

ನೀಡಿದನು, ಅದರ ದೆಸೆಯಿಂದ ಆತನ ಸೋದರರು ಮತ್ತೆ ಚೈತನ್ಯವನ್ನು ಪಡೆದರು. ಹೀಗೆ ಇನ್ನೂರ ಹದಿನಾರು ಪ್ರಶ್ನೆಗಳನ್ನು ಕೇಳಲಾಯಿತು. ಯಕ್ಷನು ಯುಧಿಷ್ಠಿರನ ಮುಂದೆ ಕುತೂಹಲ ಕೆರಳಿಸುವ ಕಗ್ಗಂಟೊಂದನ್ನು ಇರಿಸಿದಾಗ, ಅದಕ್ಕೆ ಧರ್ಮಪುತ್ರನು ವಿಶೇಷ ರೀತಿಯಿಂದ ಪರಿಹಾರವನ್ನು ಸೂಚಿಸಿದನು. ಆ ಮಾರ್ಗವು ಹಿಂದೂ ಧರ್ಮಕ್ಕೆ ಸೇರಿದ ಪ್ರತಿಯೋರ್ವ ವ್ಯಕ್ತಿಗೂ ಐದು ಬಗೆಯ ಕರ್ತವ್ಯಗಳು ಅಥವಾ 'ಪಂಚಮಹಾಯಜ್ಞ'ಗಳನ್ನು ನೆರವೇರಿಸುವಂತೆ ಆದೇಶ ನೀಡುತ್ತದೆ.

ಯಕ್ಷ :

ಇಂದ್ರಿಯಾರ್ಥಾನನುಭವನ್ ಬುದ್ಧಿಮಾನ್ ಲೋಕಪೂಜಿತಃ ।
ಸಮ್ಮತಃ ಸರ್ವಭೂತಾನಾಂ ಉಚ್ಛ್ವಸನ್ ಕೋ ನ ಜೀವತಿ ॥

ಧರ್ಮಪುತ್ರನು (ಈ ಪ್ರಶ್ನೆಗೆ ಉತ್ತರ ನೀಡಿದುದು ಹೀಗೆ,
ಧರ್ಮಪುತ್ರ :
ದೇವತಾತಿಥಿಭೃತ್ಯಾನಾಂ ಪಿತೃಣಾಂ ಆತ್ಮನಶ್ಚಯಃ
ನ ನಿರ್ವಪತಿ ಪಂಚಾನಾಂ ಉಚ್ಛ್ವಸನ್ ನ ಸ ಜೀವತಿ
(ವನಪರ್ವ, ಅಧ್ಯಾಯ ೩೧೪, ಶ್ಲೋಕ ೫೯, ೬೦)

'ಉಸಿರಾಡುತ್ತಲಿದ್ದರೂ, ಇಂದ್ರಿಯಸುಖಗಳನ್ನು ಅನುಭವಿಸುತ್ತಿದ್ದರೂ ಬುದ್ಧಿವಂತನೂ, ಸಮಾಜದಿಂದ ಮನ್ನಣೆಗೊಳಗಾದವನೂ ಮತ್ತು ಎಲ್ಲರಿಗೂ ಪ್ರಿಯನಾದವನೂ ಆದ ವ್ಯಕ್ತಿಯೊಬ್ಬನು ಬದುಕಿಲ್ಲದಿರುವುದು ಹೇಗೆ?'

'ದೇವರಿಗೆ, ಅತಿಥಿಗಳಿಗೆ, ಸೇವಕರಿಗೆ, ಪಿತೃಗಳಿಗೆ ಮತ್ತು ತನ್ನ ಆತ್ಮಕ್ಕೆ– ಹೀಗೆ ಐದು ಯಜ್ಞಗಳನ್ನು ಯಾರು ನೆರವೇರಿಸುವುದಿಲ್ಲವೋ ಅಂತಹವನು ನಿಜವಾಗಿ ಉಸಿರಾಡುತ್ತಲಿದ್ದರೂ ಬದುಕಿರುವನೆಂದು ಹೇಳಲಾಗುವುದಿಲ್ಲ'.

ಸಂತ ತಿರುವಳ್ಳುವರ್ ಸಹ ಪಂಚ ಮಹಾಯಜ್ಞಗಳನ್ನು ಹೀಗೆ ಪ್ರಸ್ತುತಪಡಿಸುತ್ತಾರೆ :

ತೇನ್ ಪುಲತ್ತಾರ್ ದೈವಂ ವಿರುಂದು ಒಕ್ಕುಳ್ತಾನ್ ಎನ್ರಂಗು
ಐಂಬುಲತ್ತು ಆರು ಒಂಬಲ್ ತಲೈ ।

ಹೀಗೆ ಧರ್ಮದ ಕಲ್ಪನೆ ಆಧ್ಯಾತ್ಮಿಕವೂ ಮತ್ತು ನೈತಿಕವೂ ಆಗಿದೆ. ಉದಾಹರಣೆಗೆ, ಅತಿಥಿಯನ್ನು ಕುರಿತ ಕರ್ತವ್ಯವನ್ನು ವ್ಯಕ್ತಿಯೊಬ್ಬನೂ

ಆಚರಿಸಬೇಕಾದ ಕೇವಲ ಒಂದು ಸಾಮಾಜಿಕ ಋಣವೆಂದು ಪರಿಗಣಿಸಬಹುದು. ಅದು ಒಂದು ಚಹಾಕೂಟ ಅಥವಾ ಭೋಜನಕೂಟದಂತೆ ಸಾಮಾಜಿಕ ಆಡಂಬರದ ಪ್ರದರ್ಶನವೂ ಆಗಿರಬಹುದು. ಆದರೆ ಅದೇ ಕರ್ತವ್ಯವನ್ನು 'ಯಜ್ಞ'ದಂತೆ, ಪೂಜಾಕರ್ಮದಂತೆ ಆಚರಿಸಿದಾಗ ಅದು ಧರ್ಮವೆನಿಸುತ್ತದೆ. ಈ ಕಾರ್ಯದಲ್ಲಿ ಆತಿಥೇಯನ ಅತಿಥಿ ಸತ್ಕಾರವನ್ನು ಮತ್ತು ಆತನು ನೀಡಿದ ಆಹಾರವನ್ನು ಒಪ್ಪಿಕೊಳ್ಳುವಲ್ಲಿನ ಆತನ ನಮ್ರತೆಗಾಗಿ ಅತಿಥಿಗೆ ಕೃತಜ್ಞತೆಗಳನ್ನು ಸಲ್ಲಿಸಲಾಗುತ್ತದೆ ಮತ್ತು ಆಹಾರ ನೀಡಿಕೆಯು ಯಜ್ಞದ ಲಕ್ಷಣವೆಂಬುದರ ಕುರುಹಾಗಿ ಅತಿಥಿಗೆ 'ಭುಕ್ತದಕ್ಷಿಣೆ'ಯನ್ನೂ ನೀಡಲಾಗುತ್ತದೆ. ಧರ್ಮವೆಂಬುದು ಕೇವಲ ಸದ್ಗುಣ ಮತ್ತು ಒಳ್ಳೆಯತನ ಮಾತ್ರವಲ್ಲ, ಆದರೆ ಚಿರಂತನ ಆನಂದದ ಪರಲೋಕ ಜೀವನಕ್ಕೆ ಒಂದು ಸಿದ್ಧತೆಯೂ ಹೌದು. ಡಾ॥ ರಾಧಾಕೃಷ್ಣನ್‌ರವರು ತಮ್ಮ 'ಜೀವನದ ಆದರ್ಶವಾದಿ ದೃಷ್ಟಿ' *(Idealist View of Life)* ಯಲ್ಲಿ (ಪುಟ ೬೦) ಹೇಳುವಂತೆ 'ಜೀವನದ ಅಡಿಪಾಯಗಳು ಅಲುಗಾಡಿದಾಗ ಉತ್ತರವೊಂದನ್ನು ಕೋರುವ ಮೂಲಭೂತ ವಿವಾದಾಂಶಗಳು ನಮಗೆ ಎದುರಾದಾಗ ಮಾನವತಾವಾದ ಸಾಕಾಗುವುದಿಲ್ಲ. ಜೀವನವೆಂಬುದು ಒಂದು ಶ್ರೇಷ್ಠ ಕೊಡುಗೆ ಮತ್ತು ನಾವು ಅದನ್ನು ಎತ್ತರದ ಭಾವಸ್ಥಿತಿಗೆ ತರಬೇಕಿದೆ.' ಈ ಆಧ್ಯಾತ್ಮಿಕತೆ ಮಾತ್ರವೇ ಸ್ಫೂರ್ತಿ ನೀಡಬಲ್ಲುದು. ಜೀವನವನ್ನು ಕುರಿತಂತೆ ಸಾಮಾನ್ಯ ಮನುಷ್ಯನ ಮನೋಭಾವವನ್ನು ಜಾನ್ ರಸ್ಕಿನ್ ಅರ್ಥಗರ್ಭಿತವಾಗಿ ಹೀಗೆ ನುಡಿಯುತ್ತಾನೆ : 'ನಾವು ಸಾಮಾನ್ಯವಾಗಿ ಸಾವಿನ ಸಿದ್ಧತೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುವಷ್ಟರ ಮಟ್ಟಿಗೆ ಅಮರತ್ವದಲ್ಲಿ ಮತ್ತು ಮರಣದನಂತರದ ಯಾವುದೇ ಒಂದರ ಸಿದ್ಧತೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುವಷ್ಟರ ಮಟ್ಟಿಗೆ ಮರ್ತ್ಯತೆಯಲ್ಲಿ ನಂಬಿಕೆಯಿರಿಸುತ್ತೇವೆ.'

ಮನಸ್ಸಿನಲ್ಲಿರಿಸಿಕೊಳ್ಳಬೇಕಾದ ಧರ್ಮದ ಮತ್ತೊಂದು ಪ್ರಮುಖವಾದ ಮಗ್ಗುಲಿದೆ. ಧರ್ಮದ ಸಾರ ಅದರ ಪರಿಪೂರ್ಣವಾದ ವಸ್ತುನಿಷ್ಠತೆ, ತನ್ನ ಹಕ್ಕುಗಳು ಮತ್ತು ತನ್ನ ಬಗ್ಗೆ ಇತರರ ಕರ್ತವ್ಯಗಳನ್ನು ಗಣನೆಗೆ ತೆಗೆದುಕೊಳ್ಳದೆ ಮತ್ತು ಅವುಗಳ ಹೊರತಾಗಿಯೂ ಧಾರ್ಮಿಕನಾದ ವ್ಯಕ್ತಿ ಅದನ್ನು ಅನುಸರಿಸಬೇಕು. ಶ್ರೀ ರಾಮಚಂದ್ರ ಧರ್ಮದ ಸಾಕಾರರೂಪಿಯಾಗಿದ್ದಾನೆ. 'ರಾಮೋ ವಿಗ್ರಹವಾನ್ ಧರ್ಮಃ.' ಆತ, ದೊರೆಗಳ ನಡುವೆ ಇದ್ದ ಸರ್ವಮಾನ್ಯವಾದ ಜ್ಯೇಷ್ಠಾಧಿಕಾರದ ಕಾನೂನಿಗನುಗುಣವಾಗಿ ಹಾಗೂ ಜನರ ಇಚ್ಛೆ ಮತ್ತು ತಂದೆಯ ಅಪೇಕ್ಷೆಯಿಂದ ಸಿಂಹಾಸನಕ್ಕೆ ನಿಸ್ಸಂದೇಹವಾದ ಹಕ್ಕನ್ನು ಪಡೆದಿದ್ದ. ಆದರೂ ಆತ ತನ್ನದೇ ಶಪಥವನ್ನು ಉಳಿಸಿಕೊಳ್ಳುವ ಮತ್ತು ತನ್ನ ತಂದೆಯು ಕೈಕೇಯಿಗೆ ನೀಡಿದ್ದ ವಾಗ್ದಾನವನ್ನು ನಡೆಸಿಕೊಡಲು ಸಮರ್ಥನಾಗುವಂತೆ ತನ್ನ ಕರ್ತವ್ಯ ನಿರ್ವಹಣೆ ಎಂಬ ಇಬ್ಬಗೆಯ ಕರ್ತವ್ಯವನ್ನು ನಡೆಸಿದನು.

ತನ್ನ ಹಕ್ಕುಗಳ ಬಗ್ಗೆ ಚೆನ್ನಾಗಿ ಅರಿತಿರುವ ಅವುಗಳ ಉಲ್ಲಂಘನೆಯ ಬಗ್ಗೆ ಸೂಕ್ಷ್ಮ ಸಂವೇದನೆಯುಳ್ಳ ಮತ್ತು ಎಷ್ಟೇ ಅಪಾಯವೊದಗಲಿ ಅವುಗಳನ್ನು ಸಮರ್ಥಿಸಲು ಕಾತರನಾಗಿರುವ ಆಧುನಿಕ ಮನುಷ್ಯನು, ಧರ್ಮವನ್ನು ಪರಿಪೂರ್ಣ ಆದರ್ಶವೆಂಬಂತೆ ಮತ್ತು ಧರ್ಮದ ನಿಯಮಗಳ ಖಚಿತ ನಿರೂಪಣೆಯೆನ್ನಬಹುದಾದಂತೆ ಕಾಣುವ ಭಾರತೀಯ ಚಿಂತನೆಯ ದೃಷ್ಟಿಕೋನವನ್ನು ಸಂಪೂರ್ಣವಾಗಿ ಗ್ರಹಿಸುವುದಿಲ್ಲ. ಸ್ವಲ್ಪ ಸಮಯದ ಹಿಂದೆ ಡೆಲ್ಲಿಯಲ್ಲಿನ ನಮ್ಮ ಸಂಸತ್ತಿನಲ್ಲಿ ವಿವಾಹಿತಳಾದ ಮಹಿಳೆ ಎಸಗಿದ ವ್ಯಭಿಚಾರದ ಅಪರಾಧಕ್ಕೆ ಶಿಕ್ಷೆಯನ್ನು ವಿಧಿಸುವುದಕ್ಕಾಗಿ ಮಸೂದೆಯೊಂದನ್ನು ಮಂಡಿಸಲು ಪ್ರಯತ್ನಿಸಲಾಯಿತು. ಅಲ್ಲಿ ಮಹಿಳೆಯರೂ ಸೇರಿದಂತೆ ಮಾತನಾಡಿದವರು ಮಹಿಳೆಯರ ಸ್ಥಾನಮಾನಗಳನ್ನು ಸುಧಾರಣೆ ಮಾಡದಿರುವವರೆಗೆ, ಬಹುಪತ್ನಿತ್ವಕ್ಕೆ ಅವಕಾಶವಿರುವವರೆಗೆ ಮತ್ತು ಬಾಲ್ಯವಿವಾಹಕ್ಕೆ ತಡೆಯೊಡ್ಡದೇ ಇರುವವರೆಗೆ ಪಾತಿವ್ರತ್ಯ ಧರ್ಮದ ಕರ್ತವ್ಯಲೋಪಕ್ಕಾಗಿ ಮಹಿಳೆಯನ್ನು ಶಿಕ್ಷಿಸಬಾರದೆಂದು ನುಡಿದರು. ಪತಿಯು ದುರ್ವ್ಯಸನಿ ಮತ್ತು ದುಷ್ಟ ಅಥವಾ ರೋಗ ಪೀಡಿತನಾಗಿದ್ದರೂ ಪತಿಗೆ ಪಾತಿವ್ರತ್ಯ ಮತ್ತು ನಿಷ್ಠೆಯ ದಿವ್ಯವಾದ ಆದರ್ಶವನ್ನು ಅವರು ಸಾರಿರುವುದರಿಂದ ವಾಲ್ಮೀಕಿ ಮತ್ತು ಮನುವಿನಂತಹ ಭಾರತೀಯ ಚಿಂತಕರನ್ನು ಪಕ್ಷಪಾತಿಗಳೆಂದು ನಿಂದಿಸಲಾಗಿದೆ. ಸೀತೆ ಪಾತಿವ್ರತ್ಯದ ಭಾರತೀಯ ಆದರ್ಶಕ್ಕೆ ಸ್ಫೂರ್ತಿದಾಯಕ ಉದಾಹರಣೆಯಾಗಿದ್ದಾಳೆ. ಸ್ವಾಮಿ ವಿವೇಕಾನಂದರು ಈ ಆದರ್ಶವನ್ನು ಅನುಪಮವಾದ ಭಾಷೆಯಲ್ಲಿ ಹೀಗೆ ಚಿತ್ರಿಸಿದ್ದಾರೆ : 'ಸೀತೆಯ ಆದರ್ಶದಂತೆ, ಅದರ ವಾಸ್ತವ ಬಾಳಿನಲ್ಲಿ ಅಷ್ಟರಮಟ್ಟಿಗೆ ಪ್ರವೇಶಪಡೆದಿರುವ ಮತ್ತು ಜನಾಂಗದ ಪ್ರತಿಯೊಂದು ರಕ್ತದ ಕಣದಲ್ಲಿಯೂ ಅಷ್ಟರಮಟ್ಟಿಗೆ ರೋಮಾಂಚನವುಂಟು ಮಾಡಿರುವ, ಈ ಇಡೀ ರಾಷ್ಟ್ರವನ್ನು ವ್ಯಾಪಿಸಿರುವ ಬೇರೊಂದು ಕಥೆಯಿಲ್ಲ. ಒಳಿತಾದ, ಶುದ್ಧ ಮತ್ತು ಪವಿತ್ರವಾದ ಮಹಿಳೆಯೊಬ್ಬಳಲ್ಲಿ ಸ್ತ್ರೀಸಹಜವಾದುದೆಂದು ಕರೆಯಲಾಗುವ ಎಲ್ಲಕ್ಕೂ ಭಾರತದಲ್ಲಿ ಸೀತೆಯೆಂದೇ ಹೆಸರು.' ಅರಣ್ಯಕ್ಕೆ ವನವಾಸಕ್ಕಾಗಿ ತೆರಳಿದ ಆಕೆಯ ಘೋರ ಅನ್ಯಾಯ, ವಿಯೋಗದಲ್ಲಿ ಆಕೆಯ ಸುದೀರ್ಘ ಯಾತನೆ, ರಾಮ ಆಕೆಗೆ ನುಡಿದ ಒರಟಾದ ಮತ್ತು ಕಠೋರವಾದ ನುಡಿಗಳು, ರಾವಣನ ವಾಸಸ್ಥಾನದಲ್ಲಿ ತನ್ನ ಪಾತಿವ್ರತ್ಯವನ್ನು ಸಮರ್ಥಿಸಲು ಆಕೆಯ 'ಅಗ್ನಿಪ್ರವೇಶ', ಯಾರೋ ಓರ್ವನು ನುಡಿದ ಅಪವಾದದ ಮಾತುಗಳಿಗಾಗಿ ಆಕೆ ಗರ್ಭವತಿಯಾಗಿರುವಾಗ ಆಕೆಯ ಗಂಡ ಮತ್ತೊಮ್ಮೆ ಆಕೆಯನ್ನು ಕಠೋರವಾಗಿ ತೊರೆದುದು– ಈ ಎಲ್ಲವನ್ನೂ ನಾವು ಚಿಂತಿಸೋಣ; ಆಕೆ ಈ ಎಲ್ಲ ಘೋರವಾದ ಮತ್ತು ಕಠೋರವಾದ ಅನ್ಯಾಯಗಳನ್ನು ಅನುಭವಿಸಿದಳು, ಆದರೂ ಎಂದೆಂದಿಗೂ ನಂಬಿಕಸ್ತಳಾಗಿ ಮತ್ತು ನಿಷ್ಠಾವಂತಳಾದ ಪತ್ನಿಯಾಗಿಯೇ ಇದ್ದಳು. ವೈಮನಸ್ಯವನ್ನು

ಏಕೆ ತಿಳಿದಿರಲಿಲ್ಲ. ಆಧುನಿಕ ಮನಸ್ಸು ಆಕ್ರಮಣ ಮಾಡುವುದರ ಮೂಲಕ ಕೆಡುಕನ್ನು ನಾಶಮಾಡಲು ಬಯಸುತ್ತದೆ. ಆದರೆ ಭಾರತೀಯ ಚಿಂತನೆ ಯಾತನೆ ಅನುಭವಿಸುವವನಿಗೆ ಅದು ಏನೂ ಅಲ್ಲವೆನಿಸುವವರೆಗೆ ನೋವನ್ನನುಭವಿಸುವುದರಿಂದ ಅದನ್ನು ತೊಡೆದುಹಾಕುವುದರಲ್ಲಿ ನಂಬಿಕೆಯಿರಿಸಿದೆ. ಹೀಗೆ ಮಾಡುವುದರಿಂದ ಮನುಷ್ಯ ತನ್ನ ಕರ್ತವ್ಯವನ್ನು ನೆರವೇರಿಸಿದ ಮತ್ತು ಅಮರತ್ವವನ್ನು ಪಡೆದ ಮಹತ್ತಮವಾದ ಆಧ್ಯಾತ್ಮಿಕ ತೃಪ್ತಿಯನ್ನು ಹೊಂದುತ್ತಾನೆ. ಹೀಗೆಯೇ ಸತ್ಯದ ಸಮಗ್ರ ಆದರ್ಶದ ಅನ್ವೇಷಣೆಯಲ್ಲಿ ಬಹು ಹಿಂದೆ ಕಾಶಿಯ ಪವಿತ್ರ ನೆಲದ ಮೇಲೆ ಜರುಗಿದ ಹರಿಶ್ಚಂದ್ರನ ದುರಂತವನ್ನೂ ನಾವು ಕಂಡಿದ್ದೇವೆ. ನಮ್ಮದೇ ಕಾಲದಲ್ಲಿ ಅಹಿಂಸೆಯ ಸಮಗ್ರ ಆದರ್ಶದ ಬಲಿಪೀಠದಲ್ಲಿ ಮಹಾತ್ಮಾ ಗಾಂಧಿಯವರು ತಮ್ಮ ಜೀವನವನ್ನು ಸಮರ್ಪಣೆ ಮಾಡಿದರು. ಮಹಾಭಾರತದ ಇಡೀ ಉಪದೇಶದ ಸಾರವಾಗಿರುವ 'ಭಾರತ ಸಾವಿತ್ರಿ'ಯ ಕೊನೆಯ ಪದ್ಯದಲ್ಲಿ ವ್ಯಾಸರು ಘೋಷಿಸಿರುವುದು ಹೀಗೆ:

> ನ ಜಾತು ಕಾಮಾನ್ನ ಭಯಾನ್ನ ಲೋಭಾದ್ಧರ್ಮಂ ತ್ಯಜೇತ್ ಜೀವಿತಸ್ಯಾಪಿ ಹೇತೋಃ।
> ನಿತ್ಯೋಧರ್ಮಃ ಸುಖದುಃಖೇ ತ್ವನಿತ್ಯೇ ಜೀವೋ ನಿತ್ಯಃ ಹೇತುರಸ್ಯತ್ವನಿತ್ಯಃ ॥

ಮೋಹದಿಂದಲಾಗಲಿ ಅಥವಾ ಅತ್ಯಾಸೆಯಿಂದಲಾಗಲಿ, ಬದುಕಲೋಸುಗವಾಗಿಯೇ ಆಗಲಿ ವ್ಯಕ್ತಿಯೊಬ್ಬನು ಧರ್ಮವನ್ನು ಎಂದಿಗೂ ತೊರೆಯಬಾರದು, ಧರ್ಮವು ಎಂದೆಂದಿಗೂ ಇರುವಂತಹುದು. ಸಂತೋಷ ಮತ್ತು ದುಃಖ ಕ್ಷಣಿಕವಾದುವು. ಆತ್ಮ ಶಾಶ್ವತ. ಅದನ್ನು ಸಶರೀರವಾಗಿರಿಸಿರುವುದಾವುದೋ ಅದು ಶಾಶ್ವತವಾದುದಲ್ಲ.

ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ, ವ್ಯಕ್ತಿಯೊಬ್ಬನು ಸಂಬಂಧಪಡೆದಿರುವ ಸ್ಥಾನ, ಅಂತಸ್ತು, ಜಾತಿ ಅಥವಾ ಆಧಿಕಾರಿಕ ಗುಂಪಿನ ವಿಭಿನ್ನ ಸನ್ನಿವೇಶಗಳಲ್ಲಿ ಮತ್ತು 'ಧರ್ಮಸಂಕಟ'ವೆಂದು ಕರೆಯಲಾಗುವ ಕರ್ತವ್ಯಗಳು ಮತ್ತು ಆದರ್ಶಗಳ ನಡುವೆ ಸಂಘರ್ಷಗಳು ತಲೆದೋರಿದ ಸಂದಿಗ್ಧ ಸಂದರ್ಭಗಳಲ್ಲಿ ನಿಜವಾದ ಧರ್ಮ ಮತ್ತು ಸರಿಯಾದ ನಡವಳಿಕೆ ಯಾವುದೆಂದು ನಿರ್ಧರಿಸಲು ಇರುವ ಮಹಾಕಷ್ಟದ ಬಗ್ಗೆ ಭಾರತೀಯ ಚಿಂತಕರು ಚೆನ್ನಾಗಿ ಅರಿತಿದ್ದಾರೆ. ಅಂಥ ನಿರ್ಣಾಯಕ ಸಂಘರ್ಷವೊಂದು ಅರ್ಜುನನಿಗೆ ಎದುರಾದಾಗ, 'ಗೀತಾರ್ಥ ಸಂಗ್ರಹ'ದಲ್ಲಿ ಯಾಮುನಾಚಾರ್ಯರು ಹೇಳುವಂತೆ,

> ಅಸ್ಥಾನಸ್ನೇಹಕಾರುಣ್ಯಧರ್ಮಾಧರ್ಮಧಿಯಾ ಕುಲಮ್ ।
> ಪಾರ್ಥಂ ಪ್ರಪನ್ನಮುದ್ದಿಶ್ಯ ಶಾಸ್ತ್ರಾವತರಣಂ ಕೃತಮ್ ॥

ಅರ್ಜುನನ ಮನಸ್ಸು ಧರ್ಮ, ಅಧರ್ಮದ ಬಗ್ಗೆ, ಹೋರಾಡಬೇಕಾದ ತನ್ನ ಕರ್ತವ್ಯದ ಬಗ್ಗೆ, ಅನುಚಿತವಾದ ಸ್ನೇಹ ಮತ್ತು ಕಾರುಣ್ಯದಿಂದ ಆತನ ಮನಸ್ಸು ಯುದ್ಧರಂಗದಲ್ಲಿ ಅತೀವವಾಗಿ ವಿಚಲಿತಗೊಂಡಿತು. ಆತನ ಭಯಗಳು ಮತ್ತು ಆತನ ದಿಗ್ಭ್ರಮೆಯನ್ನು ಪರಿಹರಿಸುವ ಉದ್ದೇಶದೊಂದಿಗೆ ಹುಟ್ಟಿಕೊಂಡ ಗೀತಾಶಾಸ್ತ್ರವು ಮಾನವ ಜನಾಂಗಕ್ಕೆ ಮಾರ್ಗದರ್ಶಕವಾಗಿದೆ.

* * * *

೧೩. ಧರ್ಮದ ಪ್ರಭೇದಗಳು

ಮನುಷ್ಯನ ಸ್ಥಾನ, ಬದುಕಿನಲಿ ಅಂತಸ್ತು, ಉದ್ಯೋಗ ಅಥವಾ ವೃತ್ತಿಗನುಗುಣವಾಗಿ ಧರ್ಮವು ನಾನಾ ವಿಧವಾಗಿರುತ್ತದೆ. 'ಮಿತಾಕ್ಷರ'ದಲ್ಲಿ ವಿಜ್ಞಾನೇಶ್ವರನು ಆರು ಬಗೆಯ ಧರ್ಮಗಳನ್ನು ಉಲ್ಲೇಖಿಸುತ್ತಾನೆ. ಅವುಗಳನ್ನು ಪ್ರಧಾನವಾಗಿ ಸಾಧನಧರ್ಮ ಮತ್ತು ವಿಶೇಷಧರ್ಮವೆಂದು ವಿಂಗಡಿಬಹುದು. ವಿಶೇಷಧರ್ಮವನ್ನು ಮತ್ತೆ ವರ್ಣಧರ್ಮ, ಆಶ್ರಮಧರ್ಮ, ವರ್ಣಾಶ್ರಮ ಧರ್ಮ, ಗುಣಧರ್ಮ ಮತ್ತು ನಿಮಿತ್ತಧರ್ಮಗಳೆಂದು ಪುನರ್ವಿಭಾಗ ಮಾಡಬಹುದು. ಇವುಗಳನ್ನು ಆಧುನಿಕ ಪಾರಿಭಾಷಿಕ ಪದಗಳಿಗೆ ಅನುವಾದ ಮಾಡಿದಲ್ಲಿ ಇವು ವ್ಯಕ್ತಿಯೊಬ್ಬನ ಸ್ಥಾನದ ಕರ್ತವ್ಯಗಳು, ಬದುಕಿನಲ್ಲಿ ಅಂತಸ್ತಿನ ವ್ಯಕ್ತಿಯೋರ್ವನ ವಿಶೇಷ ಉದ್ಯೋಗದ ಅಥವಾ ವೃತ್ತಿಯ ಮತ್ತು ವ್ಯಕ್ತಿಯೊಬ್ಬನ ಕರ್ತವ್ಯದ ಉಲ್ಲಂಘನೆಗೆ ಪ್ರಾಯಶ್ಚಿತ್ತಗಳು ಎಂದಾಗುತ್ತದೆ.

ಮನುವು ಆರನೆಯ ಅಧ್ಯಾಯದ ೯೨ನೆಯ ಶ್ಲೋಕದಲ್ಲಿ ಹತ್ತು ಧರ್ಮಗಳನ್ನು 'ದಶಲಕ್ಷಣಕೋ ಧರ್ಮಃ'ಎಂದು ಸೂಚಿಸುತ್ತಾನೆ.

ಧೃತಿ ಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಃ ಧರ್ಮಲಕ್ಷಣಮ್ ॥

'ಅಹಿಂಸೆ', 'ಸತ್ಯ', 'ಅಸ್ತೇಯ', 'ಶೌಚ', 'ಇಂದ್ರಿಯನಿಗ್ರಹ', ಹಿಂಸೆ ಮಾಡದಿರುವುದು, ನಿಜ ನುಡಿಯುವುದು, ಕಳ್ಳತನ ಮಾಡದಿರುವುದು, ದೇಹ, ಮನಸ್ಸು ಮತ್ತು ಮಾತಿನ ಶುದ್ಧಿ ಮತ್ತು ಆತ್ಮನಿಯಂತ್ರಣ ಇವು ಸಾಮಾನ್ಯಧರ್ಮಗಳು. ಭಾರತೀಯ ಚಿಂತಕರು ಧರ್ಮದ ಪರಮೋಚ್ಚ ಆದರ್ಶ ಮತ್ತು ಸಾಪೇಕ್ಷವಾಗಿ ಕೆಳಹಂತದ ಆದರ್ಶವನ್ನೂ ಗುರುತಿಸುತ್ತಾರೆ. ಪರಮೋಚ್ಚ ಆದರ್ಶವು 'ಮಹಾವ್ರತ' ಎಂದು ಪ್ರಸಿದ್ಧವಾಗಿದೆ. ಪತಂಜಲಿಯ ಯೋಗಸೂತ್ರವು ಅದನ್ನು ಹೀಗೆ ನಿರೂಪಿಸುತ್ತದೆ:

ಜಾತಿದೇಶಕಾಲ ಸಮಯಾನವಚ್ಛಿನ್ನಾಃ ಸಾರ್ವಭೌಮಾಃ ಮಹಾವ್ರತಮ್ ।

'ವಿಶ್ವವ್ಯಾಪಕವೂ ಮತ್ತು ಜಾತಿ, ವಸ್ತುವೊಂದರ ಮೂಲಭೂತ ಸ್ವಭಾವ,

ದೇಶ, ಕಾಲ ಮತ್ತು ಸನ್ನಿವೇಶಗಳಿಂದ ಪ್ರಭಾವಿತವಾದುದು' – ಸೂತ್ರದ ಮೇಲಣ ತಮ್ಮ ವ್ಯಾಖ್ಯಾನದಲ್ಲಿ ವ್ಯಾಸರು, ಈ ಪರಿಪೂರ್ಣ ಆದರ್ಶ ಸಮಾಜದಲ್ಲಿನ ಎಲ್ಲ ವ್ಯಕ್ತಿಗಳಿಗೂ ಹೇಗೆ ಅನ್ವಯವಾಗುವಂತಹುದಲ್ಲ ಎಂಬುದನ್ನು ಸೂಚಿಸಿದ್ದಾರೆ. ಹಿಂದೂ ಋಷಿಗಳು ಮತ್ತು ಧರ್ಮೋಪದೇಶಕರು ವ್ಯಾವಹಾರಿಕ ಜೀವನದ ಇತಿಮಿತಿಗಳನ್ನು ಚೆನ್ನಾಗಿ ಅರಿತಿದ್ದಾರೆ. ಮತ್ತು ಅವರು ಸಾಪೇಕ್ಷವಾಗಿ ಕೆಳಹಂತವನ್ನೂ ಕುರಿತು ಮಾತನಾಡಿದ್ದಾರೆ. ಶಾಂತಿಪರ್ವದಲ್ಲಿ ಶ್ರೀಕೃಷ್ಣನು ಪರಿಪೂರ್ಣವಾದ ಆದರ್ಶಕ್ಕಿರುವ ಅಪವಾದಗಳು ಮತ್ತು ಇತಿಮಿತಿಗಳ ನಿಯಮವನ್ನು ವರ್ಣಿಸಿದ್ದಾನೆ. ಇದನ್ನು ಸಮರ್ಥಿಸಲು ಕೌಶಿಕನೆಂಬುವನ ಕಥೆಯನ್ನು ಉಲ್ಲೇಖಿಸುತ್ತಾನೆ. ಎಂಥಹುದೇ ಸಮಯಗಳಲ್ಲಿಯೂ ಮತ್ತು ಎಂಥಹುದೇ ಆಪತ್ತೊದಗಿದರೂ ಸತ್ಯವನ್ನೇ ನುಡಿಯುವ ಶಪಥವನ್ನು ತೆಗೆದುಕೊಂಡ ಬಳಿಕ, ತನ್ನಲ್ಲಿ ಆಶ್ರಯವನ್ನು ಬಯಸಿದ ವ್ಯಕ್ತಿಯೊಬ್ಬನು ಅವಿತುಕೊಂಡಿದ್ದ ಸ್ಥಳವನ್ನು ಆ ವ್ಯಕ್ತಿಯನ್ನು ಹುಡುಕುತ್ತಿದ್ದ ದರೋಡೆಕೋರರಿಗೆ ಕೌಶಿಕ ತಿಳಿಸಿದ ಮತ್ತು ಅವರಿಂದ ಆತ ಕೊಲೆಯಾಗಲು ಜವಾಬ್ದಾರನಾದ. ಆ ಸಂದರ್ಭದಲ್ಲಿ ಸತ್ಯವನ್ನು ನುಡಿಯುವುದು ಪ್ರಶಂಸೆ ಮಾಡುವಂತಹುದಾಗಿರಲಿಲ್ಲ, ಏಕೆಂದರೆ ಅದು ಮತ್ತೊಬ್ಬ ವ್ಯಕ್ತಿಯ ಹಾನಿಯಲ್ಲಿ ಪರಿಣಾಮಗೊಂಡಿತು. ಇದೇ ಸಮಯದಲ್ಲಿ, ನ್ಯಾಯಾಲಯದಲ್ಲಿ ಒಬ್ಬ ಸಾಕ್ಷಿದಾರನಾಗಿ ವ್ಯಕ್ತಿಯೊಬ್ಬನು, ಅದು ಮತ್ತೊಬ್ಬ ವ್ಯಕ್ತಿಗೆ ಶಿಕ್ಷೆಯಾಗುವುದರಲ್ಲಿ ಪರ್ಯವಸಾನಗೊಂಡರೂ ಸತ್ಯವನ್ನು ಹೇಳಲೇಬೇಕು. ಒಟ್ಟಿನಲ್ಲಿ ಪರೀಕ್ಷೆ ಏನೆಂದರೆ ಒಂದು ನಿರ್ದಿಷ್ಟ ನಡವಳಿಕೆ ಸಮಾಜದ ಕ್ಷೇಮ ಮತ್ತು ಸ್ಥಿರತೆಗೆ ಅನುಕೂಲಕರವಾಗಿದೆಯೇ ಎಂಬುದು ಮಾತ್ರ.

ಅಹಿಂಸೆಯ ಪರಿಪೂರ್ಣ ಆದರ್ಶವನ್ನು ಕುರಿತಂತೆ ಪ್ರಸಿದ್ಧವಾದ ಇತಿಮಿತಿಗಳಿವೆ. ಆತ್ಮರಕ್ಷಣೆ ಮತ್ತು ನ್ಯಾಯವಾದ ಹಕ್ಕುಗಳನ್ನು ಜಾರಿಗೊಳಿಸಲು ಮಾಡುವ ಯುದ್ಧದಲ್ಲಿ ಗಾಸಿಗೊಳಿಸುವುದನ್ನು ಧರ್ಮವೆಂದು ಗುರುತಿಸಲಾಗಿದೆ. ಭಾರತೀಯ ಚಿಂತನೆ ಯುದ್ಧವನ್ನು ಸಮಾಜದ ಒಂದು ನಿರ್ದಿಷ್ಟವರ್ಗದ 'ಸ್ವಧರ್ಮ'ವೆಂದು ಅಂಗೀಕರಿಸಿದೆ. ಯಜ್ಞದಲ್ಲಿನ ಹಿಂಸೆಯನ್ನು ಅಹಿಂಸೆಗೆ ಶಾಸ್ತ್ರವೇ ವಿಧಿಸಿರುವ ಅಪವಾದವೆಂದು ಪರಿಗಣಿಸಲಾಗಿದೆ. ಇವೆಲ್ಲವೂ ಆ ರೀತಿಯಾಗಿ ಪರಿಗಣಿಸಲಾಗಿರುವುದೇಕೆಂದರೆ ನಮ್ಮ ಚಿಂತಕರ ಅಭಿಪ್ರಾಯದಲ್ಲಿ ಅವು ಸಮಗ್ರ ಸಮಾಜದ ಕ್ಷೇಮಕ್ಕೆ ಅನುಕೂಲಕರವಾಗಿವೆ. ಆದರೆ ವಿನಾಶಕಾರಿಯಾದ ಯುದ್ಧಗಳ ತನ್ನ ಕಹಿ ಅನುಭವದಿಂದ ಮಾವನಜನಾಂಗ ಇಂದು ಹೂಡಲಾಗುತ್ತಿರುವ ಮತ್ತು ನಡೆಸಲಾಗುತ್ತಿರುವ ಯುದ್ಧಗಳನ್ನು ರಾಷ್ಟ್ರಗಳ ನಡುವಣ ಹಕ್ಕುಗಳ ವಿವಾದಗಳನ್ನು ಪರಿಹರಿಸುವ ಸಾಧನವೆಂಬ ನಂಬಿಕೆಯನ್ನು ಕಳೆದುಕೊಂಡಿದೆ. ಇತ್ತೀಚಿನ ಭಾರತೀಯ ಚಿಂತನೆ ಯಜ್ಞದಲ್ಲಿ ಪ್ರಾಣಿಗಳನ್ನು ಕೊಲ್ಲುವುದರ ಬಗ್ಗೆಯೂ ಉತ್ಸಾಹವನ್ನು ಹೊಂದಿಲ್ಲ. ಒಂದು ನಿರ್ದಿಷ್ಟವಾದ ಸಂದರ್ಭದಲ್ಲಿ ಸರಿಯಾದ

ಮಾರ್ಗವಾವುದೆಂಬುದರ ಬಗೆಗೆ ಅಭಿಪ್ರಾಯಭೇದದ ಸಾಧ್ಯತೆಗಳು ಅತ್ಯಧಿಕವಾಗಿರುತ್ತವೆ. ಆದ್ದರಿಂದಲೇ ಮಹಾಭಾರತ ಹೀಗೆ ಹೇಳುತ್ತದೆ:

'ಸೂಕ್ಷ್ಮಾ ಗತಿರ್ಹಿ ಧರ್ಮಸ್ಯ, ಸೂಕ್ಷ್ಮತ್ವಾತ್ ನ ಸ ವಿಜ್ಞಾತುಂ ಶಕ್ಯತೇ ಬಹುನಿರ್ಣಯಃ ।

ಧರ್ಮದ ಮಾರ್ಗ ಸೂಕ್ಷ್ಮವಾದುದು ಮತ್ತು ಜಟಿಲವಾದುದು

ತರ್ಕೋಽಪ್ರತಿಷಃ ಸ್ಮೃತಯೋ ವಿಭಿನ್ನಾಃ
ನೈಕೋ ಮುನಿಃ ಯಸ್ಯ ಮತಂ ಪ್ರಮಾಣಮ್ ।
ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ
ಮಹಾಜನೋ ಯೇನ ಗತಃ ಸ ಪಂಥಾಃ ॥

'ಬೌದ್ಧಿಕ ತರ್ಕಕ್ಕೆ ಅಂತ್ಯವೆಂಬುದಿಲ್ಲ, ಸ್ಮೃತಿಗಳ ಮಧ್ಯವೇ ತಿಕ್ಕಾಟವಿದೆ, ಇಂತಹವನ ಅಭಿಪ್ರಾಯ ಪ್ರಮಾಣವೆನ್ನಬಹುದಾದ ಒಬ್ಬನೇ ಚಿಂತಕನಿಲ್ಲ. ಧರ್ಮದ ನಿಯಮ ಅಗೋಚರವಾಗಿದೆ ಮತ್ತು ಸೂಕ್ಷ್ಮವಾಗಿದೆ. ಸಂಸ್ಕೃತಿಯಲ್ಲಿ ದೊಡ್ಡವರೆನಿಸಿಕೊಂಡವರನ್ನು ಅನುಸರಿಸುವುದೊಂದೇ ಮಾರ್ಗ.' ಪರಮಾತ್ಮ ಗೀತೆಯಲ್ಲಿ ಹೇಳಿದ :

ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ ।

ಯಾವುದು ಸರಿ, ಯಾವುದಲ್ಲ ಎಂಬುದರಲ್ಲಿ ದಿವ್ಯಜ್ಞಾನಿಗಳು ಮತ್ತು ಪ್ರವಾದಿಗಳೂ ಭ್ರಮೆಗೊಳಗಾಗುತ್ತಾರೆ. ಕಾಳಿದಾಸ, ವ್ಯಕ್ತಿಯೊಬ್ಬನ ತನ್ನದೇ ಆದ ಪ್ರಜ್ಞೆಯ– ಸಂಸ್ಕೃತಿಯಿಂದ ಸಮಗ್ರವಾಗಿ ಅಭಿವೃದ್ಧಿಗೊಂಡ ಮತ್ತು ಎಲ್ಲ ಜೀವಿಗಳ ಬಗ್ಗೆ ಪ್ರೇಮದಿಂದ ತುಂಬಿತುಳುಕುತ್ತಿರುವ ಪ್ರಜ್ಞೆ– ಪ್ರಮಾಣದ ಬಗ್ಗೆ ನುಡಿಯುತ್ತಾನೆ.:

'ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ ।'

ಮನು 'ಸ್ವಸ್ಯ ಚ ಪ್ರಿಯಮಾತ್ಮನಃ' ವನ್ನು ಮತ್ತು 'ಹೃದಯಾಭ್ಯನುಜ್ಞಾ'ವನ್ನು ಉಲ್ಲೇಖಿಸುತ್ತಾನೆ.

* * * *

೧೪. ಪುರುಷಾರ್ಥಗಳ ನಡುವಣ ಸಂಬಂಧ

ಇದೀಗ ನಾನು ನಾಲ್ಕು ಪುರುಷಾರ್ಥಗಳ ಅನ್ಯೋನ್ಯ ಸಂಬಂಧ ಮತ್ತು ಭಾರತೀಯ ಚಿಂತನೆಗನುಗುಣವಾಗಿ ಅವುಗಳ ತುಲನಾತ್ಮಕ ಪ್ರಾಮುಖ್ಯತೆಯ ಪರ್ಯಾಲೋಚನೆಗೆ ತೊಡಗುತ್ತೇನೆ. ಧರ್ಮ ಅರ್ಥ ಮತ್ತು ಕಾಮ ಒಟ್ಟಿಗೆ ಸಾಗುತ್ತವೆ. ಅವು ತ್ರಿವರ್ಗವೆಂದು ಪ್ರಸಿದ್ಧವಾಗಿವೆ, ಮೊತ್ತು ಮೋಕ್ಷ ತಾನೇ ಪ್ರತ್ಯೇಕವಾಗಿರುತ್ತವೆ. ಮೋಕ್ಷವು ಸಾಮಾನ್ಯವಾಗಿ ಮರಣೋತ್ತರ ಜೀವನದಲ್ಲಿ ಪಡೆಯಬೇಕಾದ ಆದರ್ಶವಾಗಿರುವುದರಿಂದ, ಈಗಾಗಲೇ ಸೂಚಿಸಲಾಗಿರುವಂತೆ ಅದ್ವೈತದಂತಹ ವಿಚಾರಪಂಥಗಳಿಂದ ಜೀವನ್ಮುಕ್ತಿಯ ಸಾಧ್ಯತೆಯು ಪರಿಗಣಿತವಾಗಿದ್ದರೂ, ಭೂಮಿಯ ಮೇಲಣ ಜೀವನಕ್ಕೆ ಸಂಬಂಧಿಸಿರುವ ಉಳಿದ ಮೂರರಿಂದ ಅದನ್ನು ಕೈಬಿಡಲಾಗಿದೆ ಮತ್ತು ಪ್ರತ್ಯೇಕವಾಗಿ ಪರಿಶೀಲಿಸಲಾಗಿದೆ. ಆದ್ದರಿಂದಲೇ ಸಂತ ತಿರುವಳ್ಳುವರ್ ಅಮರಕೃತಿಯಾದ 'ಕುರಳ್'ನಲ್ಲಿ ಅರಂ, ಪೊರುಳ್, ಮತ್ತು ಇನ್ಬಂ ಎಂಬ ಮೂರು ಶೀರ್ಷಿಕೆಗಳ ಅಡಿಯಲ್ಲಿ, ಮಹಾಭಾರತವು ಮೋಕ್ಷವನ್ನು ಧರ್ಮವೆಂದು ನುಡಿಯುತ್ತಲಿರುವಂತೆಯೇ ಮೋಕ್ಷವೆಂಬ ಆದರ್ಶವನ್ನು ಅವರು ಪ್ರತಿಪಾದಿಸಿದ್ದಾರೆ.

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೊಂದಿಗೆ ಅವು ವ್ಯವಹರಿಸುತ್ತಿದ್ದರೂ ಸ್ಮೃತಿಗಳು ಧರ್ಮಶಾಸ್ತ್ರವೆಂದೇ ಪ್ರಸಿದ್ಧಿಯನ್ನು ಪಡೆಯುತ್ತ ಬಂದಿವೆ. ಏಕೆಂದರೆ ಅವು ನಾಲ್ಕು ಪುರುಷಾರ್ಥಗಳನ್ನು ಒಂದರ (ಧರ್ಮದ) ಬಗ್ಗೆ ವಿಶೇಷವಾಗಿ ವ್ಯವಹರಿಸುತ್ತಿವೆ. ಮನುಷ್ಯನಿಗೆ ಧರ್ಮಪ್ರಧಾನವಾದ ಗುರಿ ಮತ್ತು ಅರ್ಥ ಮತ್ತು ಕಾಮಗಳು ಧರ್ಮದಿಂದ ನಿಯಂತ್ರಣಗೊಳ್ಳಬೇಕಾಗಿರುವ ಮತ್ತು ತಕ್ಕರೀತಿಯಲ್ಲಿ ಧರ್ಮದ ಅನ್ವೇಷಣೆಯ ಫಲಗಳಾಗಿರುವ ಆನುಷಂಗಿಕ ಗುರಿಗಳಾಗಿವೆ.

ಯಾಜ್ಞವಲ್ಕ್ಯ ಸ್ಮೃತಿಯ ಮೇಲಣ ತನ್ನ ವ್ಯಾಖ್ಯಾನವಾದ 'ಮಿತಾಕ್ಷರಿ'ಯಲ್ಲಿ ಧರ್ಮಶಾಸ್ತ್ರದ ಮೂಲತತ್ತ್ವವನ್ನು ವಿವರಿಸುತ್ತ ವಿಜ್ಞಾನೇಶ್ವರ ಹೀಗೆ ನುಡಿಯುತ್ತಾನೆ:

ತತ್ರ ಯದ್ಯಪಿ ಧರ್ಮಾರ್ಥಕಾಮಮೋಕ್ಷಾಃ ಶಾಸ್ತ್ರೇಣಾನೇನ ಪ್ರತಿಪಾದ್ಯಂತೇ, ತಥಾಪಿ ಧರ್ಮಸ್ಯ ಪ್ರಾಧಾನ್ಯಾದ್ಧರ್ಮಗ್ರಹಣಮ್ । ಪ್ರಾಧಾನ್ಯಂ ಚ ಧರ್ಮಮೂಲತ್ವಾದಿತರೇಷಾಮ್ । ನ ಚ ವಕ್ತವ್ಯಂ ಧರ್ಮಮೂಲೋ ಅರ್ಥಃ ಅರ್ಥಮೂಲೋ ಧರ್ಮ ಇತಿ ಅವಿಶೇಷ ಇತಿ । ಯತೋ ಅರ್ಥಮಂತರೇಣಾಪಿ ಜಪತಸ್ತೀರ್ಥಯಾತ್ರಾದಿನಾ ಧರ್ಮನಿಷ್ಪತ್ತಿಃ । ಅರ್ಥಲೇಶೋಽಪಿನ ಧರ್ಮಮಂತರೇಣೇತಿ। ಏವಂ ಕಾಮಮೋಕ್ಷಾವಪೀತಿ ।

ಮಿತಾಕ್ಷರವು ಮತ್ತೂ ತಿಳಿಸುವ ಅಭಿಪ್ರಾಯವೇನೆಂದರೆ, ಅರ್ಥದ ಮೂಲ ಧರ್ಮ, ಆದರೆ ವಿಪರ್ಯಯವಲ್ಲ; ಏಕೆಂದರೆ, ಧರ್ಮವನ್ನು ಅರ್ಥದ ನೆರವಿಲ್ಲದೆಯೂ ಆಚರಿಸಬಹುದು, ಉದಾಹರಣೆಗೆ ಜಪ ಮತ್ತು ತಪಸ್ಸಿನಿಂದ. ಆದರೆ ಧರ್ಮವಿಲ್ಲದೆ ಅರ್ಥದ ಲವಲೇಶವೂ ಇರಲು ಸಾಧ್ಯವಿಲ್ಲ. ಅದರಂತೆಯೇ ಕಾಮ ಮತ್ತು ಮೋಕ್ಷ. ನೀಲಕಂಠದೀಕ್ಷಿತರು ಸುಂದರವಾದ ಪದ್ಯವೊಂದರಲ್ಲಿ ಇದೇ ಅಭಿಪ್ರಾಯವನ್ನು ಮಾರ್ದನಿಸುತ್ತಾರೆ : 'ನನ್ನ ಬಳಿ ಸಾಕಷ್ಟು ಐಶ್ವರ್ಯವಿಲ್ಲದಿದ್ದರೆ, ಅದರ ಆಚರಣೆಗಾಗಿ ಐಶ್ವರ್ಯವನ್ನು ಕೋರುವ ಧರ್ಮವನ್ನೇ ನಾನು ತೊರೆಯುತ್ತೇನೆ. ದೈಹಿಕ ಚಟುವಟಿಕೆಗಳಿಂದ ಆಚರಿಸಬಹುದಾದ ಅನೇಕ ವಿಷಯಗಳಿವೆ. ದೇಹವು ದಣಿದಿದ್ದರೂ ಅದರಿಂದ ಧರ್ಮಕ್ಕಾವ ನಷ್ಟವೂ ಸಾಧ್ಯವಿಲ್ಲ. ನಮ್ಮ ಆಲೋಚನೆಗಳನ್ನು ಏನಿಲ್ಲವೆಂದರೂ ಶಿವನ ಮೇಲೆ ಕೇಂದ್ರೀಕರಿಸಿ ನಾವು ನಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುತ್ತೇವೆ.'

ಅರ್ಥಾ ನ ಸ್ಯುರ್ಯದಿ ವಿಜಹಿಮೋ ಧರ್ಮಮರ್ಥೈಕಸಾಧ್ಯಂ
        ಕಾಯಕ್ಲೇಶೈಃ ಕತಿಕತಿವಿಧಃ ಸಾಧನೀಯೋ ಹಿ ಧರ್ಮಃ ।
ಕಾಯಃ ಶ್ರಾಂತೋ ಯದಿ ಭವತಿ ಕಸ್ತಾವತಾ ಧರ್ಮಲೋಪಃ
        ಚಿತ್ತಂ ದತ್ತ್ವಾ ಸಕೃದಪಿ ಶಿವೇ ಚಿಂತಿತಂ ಸಾಧಯಾಮ ॥

* * * *

೧೫. ಅವುಗಳ ತುಲನಾತ್ಮಕ ಪ್ರಾಮುಖ್ಯತೆ

ಮೂರರಲ್ಲಿ ಯಾವುದು ಅಥವಾ ಈ ಎಲ್ಲ ಮೂರೂ ಪುರುಷಾರ್ಥಗಳೂ ಜೀವನದ ಗುರಿಗಳಾಗಿರಬೇಕೇ ಎಂಬ ಪ್ರಶ್ನೆಯನ್ನು ಮನು ಚರ್ಚಿಸುತ್ತಾನೆ. ಜೀವನದಲ್ಲಿ ಧರ್ಮ ಮತ್ತು ಆರ್ಥ ಮಾತ್ರವೇ ಒಳಿತಾದುವು ಎಂಬ ಕೆಲವರ ಮತ್ತು ಅರ್ಥ ಮತ್ತು ಕಾಮಗಳೇ ಅತ್ಯಂತ ಒಳಿತಾದುವೆಂಬ ಮತ್ತೆ ಕೆಲವರ, ಜೀವನದ ಏಕೈಕ ಗುರಿ ಅರ್ಥವೊಂದೇ ಎಂಬ ಮತ್ತೆ ಕೆಲವರ ಮತ್ತು ಧರ್ಮವೊಂದೇ ಒಳಿತಾದುದು ಎಂಬ ಮತ್ತೂ ಕೆಲವರ ಅಭಿಪ್ರಾಯಗಳನ್ನು ಉಲ್ಲೇಖಿಸುತ್ತ ಧರ್ಮ, ಅರ್ಥ ಮತ್ತು ಕಾಮ ಒಗ್ಗೂಡಿ ಜೀನವದ ಒಳಿತಾಗಿವೆಯೆಂದು ತೀರ್ಮಾನಕ್ಕೆ ಬರುತ್ತಾನೆ (ಮನು ೩, ಶ್ಲೋಕ ೨೨೪)

> ಧರ್ಮಾರ್ಥಾವುಚ್ಯತೇ ಶ್ರೇಯಃ ಕಾಮಾರ್ಥೌ ಧರ್ಮ ಏವಚ ।
> ಅರ್ಥ ಏವೇಹ ವಾ ಶ್ರೇಯಃ ತ್ರಿವರ್ಗ ಇತಿ ತು ಸ್ಥಿತಿಃ ॥

ರಾಮಾಯಣದ ಅಯೋಧ್ಯಾಕಾಂಡದ 'ಕಚ್ಚಿತ್ ಸರ್ಗ'ದಲ್ಲಿ ರಾಮನು ಭರತನಿಗೆ ಒಡ್ಡಿದ ಪ್ರಶ್ನೆಗಳಲ್ಲಿ ಒಂದು ಹೀಗಿದೆ :

> ಕಚ್ಚಿದರ್ಥಂ ಚ ಧರ್ಮಂ ಚ ಕಾಮಂ ಚ ಜಯತಾಂವರ ।
> ವಿಭಜ್ಯ ಕಾಲೇ ಕಾಲಜ್ಞಸ್ಸರ್ವಾನ್ಭರತ ಸೇವಸೇ ॥

'ಮೂರರ ನಡುವೆ ನಿನ್ನ ಸಮಯವನ್ನು ಸರಿಯಾದ ರೀತಿಯಲ್ಲಿ ವಿಭಾಗಮಾಡಿಕೊಂಡು ಅರ್ಥ, ಧರ್ಮ ಮತ್ತು ಕಾಮಗಳೆಂಬ ಎಲ್ಲ ಮೂರರ ಸಲುವಾಗಿಯೂ ಕಾರ್ಯಪ್ರವೃತ್ತನಾಗಿರುವೆಯಾ?' ಈ ಮನೋಭಾವನೆ ಮೂರೂ ಪುರುಷಾರ್ಥಗಳೂ ಅವಶ್ಯಕವಾದುವು ಮತ್ತು ಅವು ಒಟ್ಟಾಗಿ ಮನುಷ್ಯನ ಸಮಗ್ರ ವ್ಯಕ್ತಿತ್ವದ ಹೆಬ್ಬಯಕೆಯನ್ನು ಒಳಗೊಂಡಿವೆಯೆಂಬ ನಿಯಮದ ಮೇಲೆ ಸಾಗುತ್ತದೆ. ಮಹಾಭಾರತದ ಶಾಂತಿಪರ್ವದ 'ಆಪದ್ಧರ್ಮ' ಭಾಗದಲ್ಲಿ ವ್ಯಾಸರು ಐದು ಜನ ಪಾಂಡವರು ಮತ್ತು ವಿದುರನ ನಡುವೆ ನಡೆದ ಅತ್ಯಂತ ಕುತೂಹಲಕಾರಿಯಾದ,

ನಾಲ್ಕು ಪುರುಷಾರ್ಥಗಳ, ತುಲನಾತ್ಮಕ ಪ್ರಾಮುಖ್ಯತೆಯನ್ನು ಕುರಿತ ಚರ್ಚೆಯ ವಿವರವನ್ನು ನೀಡಿದ್ದಾರೆ. ವಿದುರ ಧರ್ಮದ ಶ್ರೇಷ್ಠತೆಯನ್ನೂ ಮತ್ತು ಅರ್ಥ ಹಾಗೂ ಕಾಮಗಳಿಗೆ ನಂತರದ ಸ್ಥಾನವೆಂದೂ ಒತ್ತಿಹೇಳುತ್ತಾನೆ. ಏಕೆಂದರೆ ಅರ್ಥ ಮತ್ತು ಕಾಮಗಳ ಅಡಿಪಾಯ ಧರ್ಮ. ಅರ್ಜುನ ಅರ್ಥದ ಅಗತ್ಯವನ್ನೂ, ಅದಿಲ್ಲದೆ ಧರ್ಮ ಮತ್ತು ಕಾಮಗಳನ್ನು ಸಾಧಿಸಲಾಗುವುದಿಲ್ಲವೆಂದೂ ಸಮರ್ಥನೆ ನೀಡಿದರೆ, ಭೀಮಸೇನ ಕಾಮದ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತಾನೆ. ಅವಳಿ ಮಕ್ಕಳಾದ ನಕುಲ ಸಹದೇವರು ಮನುಷ್ಯನು ಈ ಮೂರನ್ನೂ ಅನುಸರಿಬೇಕೆಂದೂ ಮತ್ತು ಅವು ಸಮಾನವಾಗಿಯೇ ಪ್ರಮುಖವಾದುವೆಂದೂ ಸ್ಪಷ್ಟವಾಗಿ ಪ್ರತಿಪಾದಿಸುತ್ತಾರೆ.

> ಧರ್ಮಾರ್ಥಕಾಮಾಸ್ಸಮಮೇವ ಸೇವ್ಯಾಃ ।
> ಯೋ ಹ್ಯೇಕಭಕ್ತಃ ಸ ನರೋ ಜಘನ್ಯಃ ॥ ೩೯ ॥
> ದ್ವಯೋಸ್ತು ಸಕ್ತಂ ಪ್ರವದಂತಿ ಮಧ್ಯಮಂ
> ಸ ಉತ್ತಮೋ ಯೋ ನಿರತಸ್ತ್ರಿವರ್ಗೇ ।
> ವಿಭಜ್ಯ ಕಾಲಂ ಪರಿಸೇವಮಾನಃ.... ॥ ೪೦ ॥

ಈ ಪದ್ಯದ ಕೊನೆಯ ಪದಗಳು ಈಗಾಗಲೇ 'ರಾಮಾಯಣ'ದಲ್ಲಿ ಉಲ್ಲೇಖಗೊಂಡಿರುವ ಪದಗಳಿಗೆ ಹೋಲುವಂತಿವೆ. ಮನುಷ್ಯನಿಗೆ ನಾಲ್ಕು ಪುರುಷಾರ್ಥಗಳೂ ಸಮಾನವಾಗಿಯೇ ಪ್ರಮುಖವಾದುವು ಎಂಬ ಅಭಿಪ್ರಾಯವನ್ನು ಕಾಳಿದಾಸ 'ರಘುಂಶ'ದಲ್ಲಿ ಕಾವ್ಯೋಪಮೆಯೊಂದರ ಮೂಲಕ ಸುಂದರವಾಗಿ ಅಭಿವ್ಯಕ್ತಗೊಳಿಸಿದ್ದಾನೆ:

> ಸ ಚತುರ್ಧಾ ಬಭೌ ವ್ಯಸ್ತಃ ಪ್ರಸವಃ ಪೃಥಿವೀಪತೇಃ ।
> ಧರ್ಮಾರ್ಥಕಾಮಮೋಕ್ಷಾಣಾಂ ಅವತಾರ ಇವಾಂಗಭಾಕ್ ॥
> (೧೦ನೆಯ ಸರ್ಗ, ಶ್ಲೋಕ ೮೫)

ಅಲ್ಲಿ ಆತನು ದಶರಥನ ನಾಲ್ಕು ಜನ ಮಕ್ಕಳನ್ನು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳಿಗೆ ಹೋಲಿಕೆ ಮಾಡಿದ್ದಾನೆ. ಮತ್ತು ನಾಲ್ಕು ಜನ ಸೋದರರು ಒಟ್ಟಿಗೆ ನಾಲ್ಕು ಪುರುಷಾರ್ಥಗಳು ಸಾಕಾರಗೊಂಡಿರುವಂತೆ ಶೋಭಿಸುತ್ತಿದ್ದರೆಂದು ತಿಳಿಸುತ್ತಾನೆ. 'ರಘುವಂಶ'ದ ೧೪ನೆಯ ಸರ್ಗದ ೨೧ನೆಯ ಶ್ಲೋಕದಲ್ಲಿ ಆತ, ರಾಮನು ತನ್ನ ತಮ್ಮಂದಿರನ್ನು ಕುರಿತಂತೆ ಯಾವ ಮನೋಭಾವವನ್ನು ಹೊಂದಿದ್ದನೋ ಹಾಗೆಯೇ ಧರ್ಮ, ಅರ್ಥ ಮತ್ತು

ಕಾಮಗಳನ್ನು ಸಮಾನವಾಗಿಯೇ ಅನುಸರಿಸುತ್ತಲಿದ್ದನೆಂದು ತಿಳಿಸುತ್ತಾನೆ:

> ಪಿತುರ್ನಿಯೋಗಾದ್ವನವಾಸಮೇವಂ ನಿಸ್ತೀರ್ಯರಾಮಃ ಪ್ರತಿಪನ್ನರಾಜ್ಯಃ ।
> ಧರ್ಮಾರ್ಥಕಾಮೇಷು ಸಮಾಂ ಪ್ರಪೇದೇ ಯಥಾ ತಥೈವಾವರಜೇಷು ವೃತ್ತಿಮ್ ॥

ಸಭಾಪರ್ವದ 'ನಾರದಧರ್ಮಪುತ್ರ ಸಂವಾದ'ದಲ್ಲಿ ಧರ್ಮ, ಅರ್ಥ, ಕಾಮ ಎಂಬ ಪ್ರತಿಯೊಂದರ ಅನುಸರಣೆಗೆ ಪ್ರತಿದಿನದ ಕಾಲಾವಧಿಯನ್ನು ಮತ್ತು ಈ ಮೂರರಲ್ಲಿ ಪ್ರತಿಯೊಂದಕ್ಕೆ ಮನುಷ್ಯನ ಆಯುಸ್ಸಿನ ಅವಧಿಯನ್ನು ಸೂಚಿಸಿದ್ದಾನೆ. ಹಗಲನ್ನು ಧರ್ಮಕ್ಕೂ, ಮಧ್ಯಾಹ್ನವನ್ನು ಅರ್ಥಕ್ಕೂ ಮತ್ತು ಉಳಿದುದನ್ನು ಕಾಮಕ್ಕೂ ಮೀಸಲಿಡಬೇಕು. ಮನುಷ್ಯನ ಬಾಳಿನ ಮೊದಲ ಭಾಗವನ್ನು ಕಾಮಕ್ಕೂ, ಎರಡನೆಯ ಭಾಗವನ್ನು ಅರ್ಥಕ್ಕೂ ಮತ್ತು ಕೊನೆಯದನ್ನು ಧರ್ಮಕ್ಕೂ ಮೀಸಲಿಡಬೇಕು.

> ಧರ್ಮಂ ಪೂರ್ವೇ ಧನಂ ಮಧ್ಯೇ ಜಘನ್ಯೇ ಕಾಮಮಾಚರೇತ್ ।
> ಅಹನ್ಯನುಚರೇದೇವಮೇಷ ಶಾಸ್ತ್ರಕೃತೋ ವಿಧಿಃ ॥
> ಕಾಮಂ ಪೂರ್ವೇ ಧನಂ ಮಧ್ಯೇ ಜಘನ್ಯೇ ಧರ್ಮಮಾಚರೇತ್ ।
> ವಯಸ್ಯನುಚರೇದೇವಮೇಷ ಶಾಸ್ತ್ರಕೃತೋ ವಿಧಿಃ ॥
> ನ ಧರ್ಮಪರ ಏವ ಸ್ಯಾತ್ ನ ಚಾರ್ಥಪರಮೋ ನರಃ ।
> ನ ಕಾಮಪರ ಏವ ಸ್ಯಾತ್ ಸರ್ವಾನ್ಸೇವೇತ ಪಂಡಿತಃ ॥

ಬೇರೆಯವುಗಳನ್ನು ಸಂಪೂರ್ಣವಾಗಿ ಬದಿಗಿರಿಸಿ, ಪ್ರತಿಯೊಂದನ್ನೂ ಒಂದು ನಿರ್ದಿಷ್ಟ ಧರ್ಮಕ್ಕೆ ಮೀಸಲಿರಿಸಬೇಕೆಂಬ ಅರ್ಥದಲ್ಲಿ ಅವಧಿಯ ವಿಭಾಗವನ್ನು ತೀರಾ ಕಟ್ಟುನಿಟ್ಟಾಗಿ ಅರಿತುಕೊಳ್ಳಬಾರದು; ಅದರ ಅರ್ಥವೇನೆಂದರೆ, ಪದ್ಯದಲ್ಲಿ ಸೂಚಿತವಾಗಿರುವ ಪುರುಷಾರ್ಥಗಳಿಗೆ ಬಹುಮಟ್ಟಿಗೆ ಅದನ್ನು ಮೀಸಲಿರಿಸಬೇಕೆಂದು ಮಾತ್ರ. 'ವಿಷ್ಣುಪುರಾಣ' ಸಹ ಪ್ರತಿಯೋರ್ವ ವ್ಯಕ್ತಿಯೂ ಮೂರು ಪುರುಷಾರ್ಥಗಳನ್ನು ಹೀಗೇಯೇ ಅನುಸರಿಸಬೇಕೆಂದು ಆದೇಶಿಸುತ್ತದೆ : 'ಬೆಳಗಿನ ಜಾವವೇ ಎದ್ದು ನಿರ್ಮಲಮತಿಯಿಂದ ವ್ಯಕ್ತಿಯೊಬ್ಬನು ಧರ್ಮವನ್ನು ಅದರೊಂದಿಗೆ ಸಾಮರಸ್ಯವಿರುವಂತೆ ಅರ್ಥವನ್ನು ಮತ್ತು ಇವೆರಡನ್ನೂ ಉಲ್ಲಂಘಿಸದಂತೆ ಕಾಮವನ್ನೂ ಚಿಂತಿಸಬೇಕು. ಈ ಮೂರರಕ್ಕೂ ನಿಮ್ಮ ಮನೋಭಾವ ಸಮಾನವಾಗಿರಬೇಕು, ಹಾಗಿಲ್ಲದಿದ್ದಲ್ಲಿ ದೃಶ್ಯ ಮತ್ತು ಅದೃಶ್ಯವಾದ ಎರಡೂ ಫಲಗಳೂ ನಾಶವಾಗುವ ಸಾಧ್ಯತೆ ಇದೆ. ಧರ್ಮಕ್ಕೆ ಅಪಾಯುವುಂಟಾಗುವ ಸಾಧ್ಯತೆ ಇದ್ದಲ್ಲಿ ಅರ್ಥ ಮತ್ತು ಕಾಮಗಳೆರಡನ್ನೂ ತೊರೆಯಬೇಕು. ಸಾರ್ವಜನಿಕ ಅಭಿಪ್ರಾಯಕ್ಕೆ

ವಿರೋಧಿಯಾಗಿದ್ದಲ್ಲಿ ಮತ್ತು ಸಮಾಜದ ಸಂತೋಷಕ್ಕೆ ಅನುಕೂಲವಾಗಿಲ್ಲದಿದ್ದಲ್ಲಿ ಧರ್ಮವನ್ನೂ ತೊರೆಯಬಹುದು.

> ಬ್ರಾಹ್ಮೀ ಮುಹೂರ್ತೇ ಉತ್ಥಾಯ ಮನಸಾ ಮತಿಮಾನ್ ನೃಪ ।
> ವಿಬುದ್ಧಃ ಚಿಂತಯೇದ್ಧರ್ಮಮರ್ಥಂ ಚಾಸ್ಯಾವಿರೋಧಿನಮ್ ॥
> ಅಪೀಡಯಾ ತಯೋಃ ಕಾಮಂ ಉಭಯೋರಪಿ ಚಿಂತಯೇತ್ ।
> ದೃಷ್ಟಾದೃಷ್ಟವಿನಾಶಾಯ ತ್ರಿವರ್ಗಂ ಸಮದರ್ಶನಃ ॥
> ಪರಿತ್ಯಜೇದರ್ಥಕಾಮೌ ಧರ್ಮಪೀಡಕರೌ ನೃಪ ।
> ಧರ್ಮಂ ಚಾಪ್ಯಸುಖೋದರ್ಕಂ ಲೋಕವಿದ್ವಿಷ್ಟಮೇವ ವಾ ॥

* * * *

೧೬. ಅರ್ಥ ಮತ್ತು ಕಾಮ ಧರ್ಮದಿಂದ ನಿಯಂತ್ರಿತವಾಗಿರಬೇಕು

ಮನುಷ್ಯನಿಗೆ ಧರ್ಮ, ಅರ್ಥ, ಕಾಮಗಳ ಸಮಾನ ಪ್ರಾಮುಖ್ಯತೆಯನ್ನು ಒತ್ತಿಹೇಳುವಾಗ ಭಾರತೀಯ ಚಿಂತಕರು ಅರ್ಥ ಮತ್ತು ಕಾಮಗಳ ಅನುಸರಣೆಗಳು ಧರ್ಮದ ಕರ್ತವ್ಯಗಳು ಮತ್ತು ಕಟ್ಟಳೆಗಳಿಂದ ನಿಯಂತ್ರಿತವಾಗಿರಲೇಬೇಕು ಎಂಬ ನಿಯಮವನ್ನು ಯಾವಾಗಲೂ ಪ್ರತಿಪಾದಿಸುತ್ತಾರೆ. ಧರ್ಮವನ್ನು ಲೆಕ್ಕಿಸದೆಯೇ, ಹತೋಟಿಯಲ್ಲಿಟ್ಟುಕೊಳ್ಳುವ ಭಾವೋದ್ರಿಕ್ತವಾದ ಅರ್ಥ ಅಥವಾ ಕಾಮಗಳಲ್ಲೊಂದರ ಅನುಸರಣೆಯನ್ನು ಅವರು ಖಂಡಿಸುತ್ತಾರೆ. ಅವರು ಧರ್ಮವನ್ನು ಮನುಷ್ಯನಿಗೆ ಅರ್ಥ ಮತ್ತು ಕಾಮಗಳ ಹೆಬ್ಬಯಕೆಯ ಈಡೇರಿಕೆಗೆ ತಳಹದಿಯೆಂದು ಪರಿಗಣಿಸುತ್ತಾರೆ. ನಾನು ಈಗಾಗಲೇ ಸೂಚಿಸಿರುವಂತೆ, ಅವರು ಧರ್ಮವನ್ನು ಸಮಾಜದ ಮತ್ತು ವಿಶ್ವನಿಯಮದ ಆಶ್ರಯದಾತವೆಂದೂ ಮತ್ತು ಪೋಷಕವೆಂದೂ ಭಾವಿಸುತ್ತಾರೆ. ವ್ಯಕ್ತಿಯು ವಿಶ್ವನಿಯಮ ಮತ್ತು ಸಮಾಜದ ಸ್ಥಿರತೆಯನ್ನು ರಕ್ಷಣೆ ಮಾಡದ ಹೊರತು ಐಶ್ವರ್ಯ ಮತ್ತು ಸಂತೋಷವನ್ನು ಅನುಭವಿಸಲು ಬಯಸುವುದು ಸಾಧ್ಯವೇ ಇಲ್ಲ. ಮಹಾಭಾರತದ ಕೊನೆಯ ಹಂತದಲ್ಲಿ ಉಲ್ಲೇಖಗೊಂಡಿರುವ, ಆ ಮಹಾಕೃತಿಯ ಉಪದೇಶದ ಸಾರಾಂಶವೆಂದು ಪರಿಗಣಿತವಾಗಿರುವ 'ಭಾರತ ಸಾವಿತ್ರಿ'ಯ ಭಾಗವಾಗಿರುವ ನಾಲ್ಕು ಪದ್ಯಗಳಲ್ಲಿ ಮೂರನೆಯದರಲ್ಲಿ ವ್ಯಾಸರು ಭಾರತದ ಪರಮೋಚ್ಚ ಪ್ರಾಮುಖ್ಯತೆಯನ್ನು ಆವೇಶಪೂರ್ಣವಾಗಿ ಸಮರ್ಥಿಸಿರುವುದು ಹೀಗೆ :

ಊರ್ಧ್ವಬಾಹುರ್ವಿರೌಮ್ಯೇಷಃ ನ ಚ ಕಶ್ಚಿತ್ ಶೃಣೋತಿ ಮಾಂ ।
ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ ॥

'ಕೈಯ್ಯನ್ನು ಮೇಲೆತ್ತಿ ಮಾಳಿಗೆಯ ಮೇಲಿಂದ ಕೂಗಿ ಹೇಳುತ್ತಿದ್ದೇನೆ. ಆದರೆ, ಯಾರೂ ನನ್ನ ಮಾತುಗಳನ್ನು ಕೇಳುತ್ತಿಲ್ಲ, ಧರ್ಮದಿಂದಲೇ ಅರ್ಥಕಾಮಗಳು ಫಲಿಸುತ್ತವೆ; ಹಾಗಿದ್ದರೂ ಧರ್ಮವನ್ನೇಕೆ ಅನುಸರಿಸುತ್ತಿಲ್ಲ?' ಅರ್ಥಕಾಮಗಳು ಮನುಷ್ಯನ ಮಾನಸಿಕ ಪ್ರವೃತ್ತಿಗಳನ್ನು ತೃಪ್ತಿಪಡಿಸುತ್ತವೆ ಮತ್ತು ಅವು ಪ್ರತಿಯೊಬ್ಬ ವ್ಯಕ್ತಿಯ ಎರಡು ಮೂಲಭೂತ ಹೆಬ್ಬಯಕೆಗಳ ಅಗತ್ಯಗಳಾಗಿವೆ ಎಂಬುದನ್ನು ಇಲ್ಲಿ ಆತ ಮಾನ್ಯಮಾಡುತ್ತಾರೆ. ಅದೇ ಸಮಯದಲ್ಲಿ ಅವರು, ಅರ್ಥಕಾಮಗಳ ವಿವೇಚನಾಯುತ ಹೆಬ್ಬಯಕೆಯ ಈಡೇರಿಕೆಗಾಗಿ ಮನುಷ್ಯನ ಅನ್ವೇಷಣೆಯನ್ನು

ಧರ್ಮವು ನಿಯಂತ್ರಿಸಲೇಬೇಕೆಂಬ ನಿಯಮವನ್ನು ದೃಢವಾಗಿ ಪ್ರತಿಪಾದಿಸುತ್ತಾರೆ. ಸಂತ ವಳ್ಳುವರ್ ಈ ಕೆಳಗಣ 'ಕುರಳ್'ನಲ್ಲಿ ಇದೇ ಭಾವನೆಯನ್ನು ಮಾರ್ದನಿಸಿದ್ದಾರೆ:

'ಶಿರಪ್ಪೀನುಂ ಶೆಲ್ವಮುಮೀನಂ ಅರತ್ತಿನೂಂಗುಂ ಆಕ್ಕುಂ ಎಲ್ಲಾವುಯಿರುಕ್ಕು'

ಜೀವನದಲ್ಲಿ ಧರ್ಮಕ್ಕಿಂತಲೂ ಶ್ರೇಷ್ಠವಾದುದು ಬೇರೇನಾದರೂ ಇದೆಯೇನು? ಅದು ಮೋಕ್ಷ ಮತ್ತು ಅರ್ಥಗಳನ್ನು ಒದಗಿಸುತ್ತದೆ. 'ಪುರನಾನೂರು' ಸಹ ಇದನ್ನೇ ತಿಳಿಸುತ್ತದೆ;

'ಶಿರಪ್ಪುಡೈ ಮರಬಿರ್ ಪೊರುಲುಂ ಇನ್ಬಮುಂ ಅರಟ್ಟು ವಳಿಪಡುಂ ತೊರ್‍ರಂ ಪೋಲ್'

ಧರ್ಮವನ್ನು ಅನ್ವೇಷಿಸುವವನು ಮೋಕ್ಷ, ಅರ್ಥ ಮತ್ತು ಕಾಮಗಳನ್ನು ಪಡೆಯುತ್ತಾನೆ. ರಾಮಾಯಣದಲ್ಲಿ ಸೀತೆ ತನ್ನ ಪತಿಯು ದಂಡಕಾರಣ್ಯವನ್ನು ಪ್ರವೇಶಿಸಿದಾಗ ರಾಕ್ಷಸರನ್ನು ನಿರ್ಮೂಲನ ಮಾಡುವ ಆತನ ಶಪಥವನ್ನು ಪೂರ್ಣಗೊಳಿಸುವಂತೆಯೂ, ಧರ್ಮದಿಂದಲೇ ಅರ್ಥ ಮತ್ತು ಸುಖ ಅಥವಾ ಕಾಮವೂ ಫಲಿಸುವುದೆಂದು ನೆನಪಿಸುತ್ತಾಳೆ. ಧರ್ಮ ವಿಶ್ವದ ಸಾರ.

ಧರ್ಮಾದರ್ಥಃ ಪ್ರಭವತೇ ಧರ್ಮಾತ್ಪ್ರಭವತೇ ಸುಖಮ್ ।
ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್ ॥

(ಅರಣ್ಯಕಾಂಡ, ಸರ್ಗ ೯, ಶ್ಲೋಕ ೩೦)

ಮಹಾಭಾರತದ ವ್ಯಾಖ್ಯಾನಕಾರ ನೀಲಕಂಠ ತನ್ನ ಉಪೋದ್ಘಾತದ ಪದ್ಯಗಳಲ್ಲೊಂದರಲ್ಲಿ ಹೇಳಿರುವುದೇನೆಂದರೆ, ಧರ್ಮದಿಂದ ಸಂಸ್ಕಾರಗೊಂಡಾಗ ಅರ್ಥ ಮತ್ತು ಕಾಮ ಹೆಚ್ಚು ಉದಾತ್ತ ಸ್ವರೂಪವನ್ನು ಪಡೆಯುತ್ತವೆ. ಅಲ್ಪಬುದ್ಧಿಯ ಜನರು ಐಂದ್ರಿಯಿಕ ಸುಖಗಳು ಮತ್ತು ಬಯಕೆಗಳ ತೃಪ್ತಿಗಾಗಿ ಅರ್ಥ, ಕಾಮಗಳನ್ನು ಅನ್ವೇಷಿಸುತ್ತಾರೆ; ಮತ್ತು ಇಹದಲ್ಲಿ ಪ್ರಾಪಂಚಿಕ ವಸ್ತುಗಳಿಗಾಗಿ ಮತ್ತು ಪರದಲ್ಲಿ ಸ್ವರ್ಗದ ಭೋಗಭಾಗ್ಯಗಳಿಗಾಗಿ ಧರ್ಮವನ್ನು ಅನ್ವೇಷಿಸುತ್ತಾರೆ. ಆದರೆ ಮಹಾತ್ಮರು ತಮ್ಮ ಮನಸ್ಸುಗಳು ಶುದ್ಧಿಗೊಳ್ಳಲೆಂಬ ಉದ್ದೇಶಕ್ಕಾಗಿಯೇ ಧರ್ಮವನ್ನು ಅನ್ವೇಷಿಸುತ್ತಾರೆ. ಮತ್ತು ಧಾರ್ಮಿಕ ಯಜ್ಞಗಳನ್ನು ಆಚರಿಸುವಂತಾಗಲು ಮತ್ತು ಮಾನವ ಜನಾಂಗದ ಕ್ಷೇಮಕ್ಕಾಗಿ ಮತ್ತು ತಮ್ಮ ಜೀವನವನ್ನು ನಡೆಸಲು ಬೇಕಾದ ಪೋಷಣೆಗಾಗಿ ಐಶ್ವರ್ಯವನ್ನು ಬಯಸುತ್ತಾರೆ ಮತ್ತು ಅವರು ಮೋಕ್ಷವನ್ನು ಹೊಂದಲು ಕಾತರದಿಂದ ಬಯಸುತ್ತಾರೆ. ಅಲ್ಪಬುದ್ಧಿಯವರ ಮತ್ತು ಮಹಾತ್ಮರ ವರ್ತನೆಯು ಕೌರವರ ಮತ್ತು ಪಾಂಡವರ ಜೀವನಗಳ ಕಥೆಯಿಂದಲೇ ನಿರೂಪಿತವಾಗಿದೆಯೆಂದು ಆತ ಮುಂದುವರಿಸುತ್ತಾನೆ:

ಧರ್ಮಾದಿತ್ರಯಮರ್ಥಕಾಮಕರಣಪ್ರೀತ್ಯರ್ಥಮಿತ್ಯಲ್ಪಕಾಃ ।
ಧೀಶುದ್ಧಿಕ್ರತು ಜೀವನಾರ್ಥಕತಯಾ ಮುಕ್ತ್ಯರ್ಥಮಿತ್ಯುತ್ತಮಾಃ ॥
ಏತತ್ಪಾಂಡವ–ಧಾರ್ತರಾಷ್ಟ್ರ – ಚರಿತವ್ಯಾಖ್ಯಾಮಿಷಾದ್ದರ್ಶಿತಂ ।
ಯೇನಾಸೌ ನಿಜವಾಕ್ಯಜಾತಹೃದಯಂ ಮಹ್ಯಂ ದದಾತ್ವಾದರಾತ್ ॥

ಮನು ವಿಧಿಸುವುದು ಹೀಗೆ–

ಪರಿತ್ಯಜೇದರ್ಥಕಾಮೌ ಯೌ ಸ್ಯಾತಾಂ ಧರ್ಮವರ್ಜಿತೌ ।
ಧರ್ಮಂ ಚಾಪ್ಯಸುಖೋದರ್ಕಂ ಲೋಕವಿಕ್ರುಷ್ಟಮೇವ ಚ ॥

(ಅಧ್ಯಾಯ ೪, ಶ್ಲೋಕ ೧೭೬)

ಪ್ರತಿಯೋರ್ವ ವ್ಯಕ್ತಿಯೂ ಐಶ್ವರ್ಯದ ಸಂಗ್ರಹವನ್ನು ಮತ್ತು ಬಯಕೆಗಳ ಈಡೇರಿಕೆಯನ್ನು ಅವು ಧರ್ಮಕ್ಕೆ ವಿರುದ್ಧವಾಗಿದ್ದರೆ ತೊರೆದುಬಿಡಲಿ ಮತ್ತು ಸಾಮಾನ್ಯರಿಗೆ ವಿರುದ್ಧವಾಗಿರುವ ಮತ್ತು ಭಾವನೆಗಳಿಗೆ ಗಾಸಿಯುಂಟುಮಾಡುವ ಮತ್ತು ಪರಲೋಕ ಜೀವನದಲ್ಲಿಯೂ ಆನಂದಕ್ಕೆ ಮುಳುವಾದ ಧರ್ಮದ ಕಾರ್ಯಗಳನ್ನು ತೊರೆದುಬಿಡಲಿ. ನಿಜವಾದ ವೈದಿಕ ಸಂಸ್ಕೃತಿಯನ್ನುಳ್ಳ ಮನುಷ್ಯನನ್ನು ಕವಿ ಭವಭೂತಿ ಹೀಗೆ ವರ್ಣಿಸುತ್ತಾನೆ.

ತೇ ಶ್ರೋತ್ರಿಯಾಃ ತತ್ತ್ವವಿನಿಶ್ಚಯಾಯ ಭೂರಿಶ್ರುತಂ ಶಾಶ್ವತಮಾದ್ರಿಯಂತೇ ।
ಇಷ್ಟಾಯ ಪೂರ್ತಾಯ ಚ ಕರ್ಮಣೇಽರ್ಥಾನ್ ದಾರಾನಪತ್ಯಾಯ ತಪೋಽರ್ಥಮಾಯುಃ॥

(ಮಾಲತೀಮಾಧವ)

ಐಶ್ವರ್ಯ ಮತ್ತು ಪ್ರಾಪಂಚಿಕ ಸೌಖ್ಯಗಳನ್ನು ಆತ ಬಯಸುವುದು ತನ್ನ ಸಹಜೀವಿಗಳ ಸೇವೆ ಮತ್ತು ದಾನಮಾಡುವ ಸಲುವಾಗಿ ಮತ್ತು ತನ್ನ ಧಾರ್ಮಿಕ ಕರ್ತವ್ಯಗಳ ಈಡೇರಿಕೆಗಾಗಿ. ವೈವಾಹಿಕ ಜೀವನವನ್ನು ಬಯಸುವುದು ಸಂತಾನಕ್ಕಾಗಿ ಮತ್ತು ದೀರ್ಘಾಯುಷ್ಯವನ್ನು ಇಚ್ಛಿಸುವುದು ಆಧ್ಯಾತ್ಮಿಕತೆಯ ಸಾಧನೆಗಾಗಿ. ಇದೇ ರೀತಿಯಲ್ಲಿ ಕಾಳಿದಾಸ 'ರಘುವಂಶ'ದಲ್ಲಿ ರಘುವಂಶದ ದೊರೆಗಳ ಶ್ರೇಷ್ಠತೆಯನ್ನು ವರ್ಣಿಸುತ್ತ, ಅವರು ಐಶ್ವರ್ಯವನ್ನು ಸಂಪಾದಿಸಿದುದು ದಾನಮಾಡುವ ಸಲುವಾಗಿ ಮತ್ತು ವೈವಾಹಿಕ ಜೀವನದ ಸುಖಭೋಗಗಳನ್ನು ಪ್ರೀತಿಸಿದುದು ಸಂತಾನದ ಸಲುವಾಗಿ ಮಾತ್ರ ಎಂದು ನುಡಿದಿದ್ದಾನೆ.

ತ್ಯಾಗಾಯ ಸಂಭೃತಾರ್ಥಾನಾಂ ಸತ್ಯಾಯ ಮಿತಭಾಷಿಣಾಂ ।
ಯಶಸೇ ವಿಜಿಗೀಷೂಣಾಂ ಪ್ರಜಾಯೈ ಗೃಹಮೇಧಿನಾಮ್ ॥

(ರಘುವಂಶ, ಸರ್ಗ ೧, ಶ್ಲೋಕ ೭)

ಶ್ರೇಷ್ಠ, ಭಾರತೀಯ ಮಹಿಳಾ ನೀತಿಬೋಧಕಳಾದ ಅವ್ವೈ ಹೀಗೆ ಹೇಳುತ್ತಾಳೆ: 'ಧರ್ಮ ದಾನಮಾಡುವುದರಲ್ಲಿದೆ; ಐಶ್ವರ್ಯವನ್ನು ಕೆಟ್ಟದ್ದನ್ನು ಮಾಡದೆ ಸಂಪಾದಿಸಬೇಕು; ಕಾಮ, ಒಂದೇ ಮನಸ್ಸುಳ್ಳ ಇಬ್ಬರು ಜೀವನ ಸಂಗಾತಿಗಳ ನಡುವೆ ಅಸ್ತಿತ್ವದಲ್ಲಿರುವ ಶುದ್ಧ ಪ್ರೇಮ ಮತ್ತು ಗೌರವ; ಮೋಕ್ಷ, ಪರಮಾತ್ಮನ ಬಗ್ಗೆ ಆಲೋಚಿಸುತ್ತ ಮೊದಲಿಗೆ ಬರುವ ಮೂರು ಪುರುಷಾರ್ಥಗಳನ್ನೂ ತೊರೆದುಬಿಡುವುದು.'

ಈಡಲರಂ ತೀವಿನೈ ವಿಟ್ಟೀತ್ತಾಲ್ ಪೊರುಳ್ ಎನ್ನಾನ್ರುಂ ಕಾದಲಿರುವರ್ ಕರುತ್ತೋರುಮಿತ್ತು
ಆಡರವು ಪಟ್ಟಾದೇ ಇನ್ಬಮ್. ಪರನೈ ನೀನೈಂದು ಇಮ್ಮೂನ್ರಿರೈಯುಮ್ ವಿಟ್ಟದೇ
ಪೇರಿನ್ಬಮ್ ॥

'ಮನುಸ್ಮೃತಿ'ಯು ನಾಲ್ಕನೆಯ ಅಧ್ಯಾಯದಲ್ಲಿ ಪ್ರತಿಯೋರ್ವ ವ್ಯಕ್ತಿಯೂ ತನ್ನ ಜೀವನೋಪಾಯವನ್ನು ನಿಂದನೀಯವಲ್ಲದ ಮತ್ತು ಧರ್ಮಕ್ಕೆ ವಿರುದ್ಧವಲ್ಲದ ಮತ್ತು ಹೆಚ್ಚಿನ ಯಾತನೆಗಳನ್ನು ಅಗತ್ಯಗೊಳಿಸದಿರುವ ಕಾರ್ಯಗಳಿಂದ ಸಂಪಾದಿಸಬೇಕೆಂದು ವಿಧಿಸುತ್ತದೆ (ಶ್ಲೋಕ ೩):

ಯಾತ್ರಾಮಾತ್ರ ಪ್ರಸಿದ್ಧ್ಯರ್ಥಂ ಸ್ವೈಃ ಕರ್ಮಭಿರಗರ್ಹಿತೈಃ ।
ಅಕ್ಲೇಶೇನ ಶರೀರಸ್ಯ ಕುರ್ವೀತ ಧನಸಂಚಯಮ್ ॥

೧೫ನೆಯ ಶ್ಲೋಕ ಮತ್ತೆ ನುಡಿಯುತ್ತದೆ:

ನೇಹೇತಾರ್ಥಾನ್ ಪ್ರಸಂಗೇನ ನ ವಿರುದ್ಧೇನ ಕರ್ಮಣಾ ।
ನ ವಿದ್ಯಮಾನೇಷ್ವರ್ಥೇಷು ನಾರ್ತ್ಯಾಮಪಿ ಯತಸ್ತತಃ ॥

ಇಂದ್ರಿಯಗಳ ಸುಖಭೋಗಗಳನ್ನೊಳಗೊಂಡಿರುವ ಅಥವಾ ನಿಷಿದ್ಧವಾದ ಮಾರ್ಗಗಳಿಂದ ಹಣವನ್ನು ಸಂಪಾದಿಸಬಾರದು, ವ್ಯಕ್ತಿಯೊಬ್ಬನಿಗೆ ಹಣದ ಅಗತ್ಯವಿರಬಹುದಾಗಲಿ ಅಥವಾ ದ್ರವ್ಯಾನುಕೂಲತೆ ಹೊಂದಿರಬಹುದಾಗಲಿ, ಆತನು ವಿವೇಚನೆಯಿಲ್ಲದೆ ಯಾವುದಾದರೂ ಮತ್ತು ಎಲ್ಲ ಮೂಲಗಳಿಂದಲೂ ಐಶ್ವರ್ಯವನ್ನು ಸಂಪಾದಿಸಲು ಪ್ರಯತ್ನಿಸಬಾರದು. ತಿರುವಳ್ಳುವರ್ ನುಡಿಯುತ್ತಾರೆ:

ಅರತ್ತಾನ್ ವರುವುದೇ ಇನ್ಬಮ್ ಮರ್ರೆಲ್ಲಾಂ ಪುರಟ್ಟ ಪುಗಳುಮಿಲ ।

'ಧರ್ಮದಿಂದ ಹೊರಹೊಮ್ಮಿದುದೊಂದೇ "ಇನ್ಬಮ್", ಉಳಿದುದೆಲ್ಲವೂ ಇನ್ಬಮ್ ಆಗಿದ್ದರೂ ವಾಸ್ತವವಾಗಿ ದುರ್ಗತಿಯೇ ಮತ್ತು ಮನ್ನಣೆಗೆ ಅರ್ಹವಾದುದಲ್ಲ.'

ಈ ಮೊದಲೇ ಹೇಳಿದ ಉಲ್ಲೇಖಗಳಿಂದ ಸ್ಪಷ್ಟವಾಗಿರುವುದೇನೆಂದರೆ ಭಾರತೀಯ ಚಿಂತನೆಯ ಪ್ರಕಾರ ಧರ್ಮ ಐಶ್ವರ್ಯದ ಸಂಪಾದನೆ ಮತ್ತು ಪ್ರಾಪಂಚಿಕ ಸೌಖ್ಯಗಳು ಮತ್ತು ನಮ್ಮ ಬಯಕೆಗಳ ಈಡೇರಿಕೆ ಈ ಎರಡನ್ನೂ ನಿಯಂತ್ರಿಸುತ್ತದೆ. ತನ್ನನ್ನು ಅರಣ್ಯಕ್ಕೆ ಹೊರದೂಡಿದ ಸಂದರ್ಭದಲ್ಲಿ ಲಕ್ಷ್ಮಣನಿಗೆ ಉಪದೇಶ ನೀಡಿದಾಗ ರಾಮನ ಬಾಯಲ್ಲಿ ವಾಲ್ಮೀಕಿಗಳು ಮೇಲ್ಕಂಡ ಶ್ಲೋಕಗಳಲ್ಲಿ ಅಡಕವಾಗಿರುವ ಭಾವನೆಗಳನ್ನೇ ನುಡಿಸಿದ್ದಾರೆ. ಪ್ರಪಂಚದಲ್ಲಿನ ಅನುಭವದಿಂದ ಕಂಡುಬರುವುದೇನೆಂದರೆ ಧರ್ಮ, ಅರ್ಥ ಮತ್ತು ಕಾಮಗಳನ್ನು ಧರ್ಮದ ಅನ್ವೇಷಣೆಯ ಫಲವಾಗಿಯೇ ಹೊಂದಬಹುದು ಮತ್ತು ಈ ಮೂರು ಪುರುಷಾರ್ಥಗಳ ಈಡೇರುವಿಕೆಗೆ ಕಾರಣವಾಗುವಂತಹ ಕಾರ್ಯಗಳನ್ನೇ ಅನುಸರಿಬೇಕಾಗಿದೆ. ವಿವಾಹದಿಂದಲಾಗಿ ಒಳ್ಳೆಯ ಮಗನಿಗೆ ಜನ್ಮ ನೀಡಿದವಳಾಗಿ

ಪ್ರೀತಿಪಾತ್ರಳೂ ಮತ್ತು ವಿಧೇಯಳೂ ಆದ ಪತ್ನಿಯ ದೆಸೆಯಿಂದ ಮೂರು ಪುರುಷಾರ್ಥಗಳನ್ನು ವ್ಯಕ್ತಿಯೊಬ್ಬನು ಪಡೆಯಲು ಸಮರ್ಥನಾಗುವಂತಹ ರೀತಿಯೇ ಇದು.

ಧರ್ಮಾರ್ಥಕಾಮಾಃ ಕಿಲ ಜೀವಲೋಕೇ ಸಮೀಕ್ಷಿತಾ ಧರ್ಮಫಲೋದಯೇಷು।
ಯೇ ತತ್ರ ಸರ್ವೇ ಸ್ಯುಃ ಅಸಂಶಯಂ ಮೇ ಭಾರ್ಯೇವ ವಶ್ಯಾಭಿಮತಾ ಸುಪುತ್ರಾ॥

ಆದರೆ, ಯಾವುದೇ ಕಾರ್ಯದಿಂದ ಈ ಮೂರೂ ಪುರುಷಾರ್ಥಗಳನ್ನು ಪಡೆಯಲಾಗದಿದ್ದರೆ, ಆಗ ಕನಿಷ್ಠಪಕ್ಷ ಧರ್ಮಕ್ಕೆ ಯಾವುದು ಅನುಕೂಲಕರವಾಗಿದೆಯೋ ಅದನ್ನು ಅನುಸರಿಸಬೇಕು. ಮತ್ತೊಂದು ದೃಷ್ಟಿಯಲ್ಲಿ ವ್ಯಕ್ತಿಯೊಬ್ಬನು ಐಶ್ವರ್ಯದ ಅನ್ವೇಷಣೆಯೊಂದರಲ್ಲಿಯೇ ಒಲವುಳ್ಳವನಾಗಿದ್ದರೆ, ಆತ ಎಲ್ಲರಿಗೂ ಶತ್ರುವಾಗಿ ಪರಿಣಮಿಸುತ್ತಾನೆ ಮತ್ತು ಯಾರು ಭೋಗಿಯೇ ಆಗಿರಲು ನಿರ್ಧರಿಸಿರುವನೋ ಅಂತಹ ವ್ಯಕ್ತಿ ಯಾವುದೇ ಪ್ರಶಂಸೆಗೆ ಪಾತ್ರನಾಗುವುದಿಲ್ಲ.

ಯಸ್ಮಿನ್ನು ಸರ್ವೇ ಸ್ಯುರಸನ್ನಿವಿಷ್ಟಾ ಧರ್ಮೋಯತಸ್ಸ್ಯಾತ್ತದುಪಕ್ರಮೇತ।
ದ್ವೇಷ್ಯೋ ಭವತ್ಯರ್ಥಪರೋ ಹಿ ಲೋಕೇ ಕಾಮಾತ್ಮತಾ ಖಲ್ವಪಿ ನ ಪ್ರಶಸ್ತಾ ॥

ಐಶ್ವರ್ಯದ ಅನ್ವೇಷಣೆಯನ್ನು ಲೆಕ್ಕಿಸದ ಮತ್ತು ಪ್ರಾಪಂಚಿಕ ಸಂತೋಷವನ್ನೂ ತ್ಯಜಿಸುವ ಮಟ್ಟಿಗೆ ಧಾರ್ಮಿಕಜೀವನವನ್ನು ನಡೆಸುವ ಆದರ್ಶ ಋಷಿಗಳೆಂಬ ಹೆಸರಿಗೆ ಯೋಗ್ಯರಾದ ಆಯ್ದ ಕೆಲವರಿಗೆ ಮಾತ್ರ ಸಾಧ್ಯವಾಗುವಂತಹುದು. ಆದ್ದರಿಂದಲೇ ರಾಮ ಕೈಕೇಯಿಗೆ ತಾನು ಋಷಿಗಳಂತೆ ಧಾರ್ಮಿಕ ಜೀವನವನ್ನು ನಡೆಸಲು ನಿರ್ಧರಿಸಿರುವುದಾಗಿಯೂ ಮತ್ತು ತಾನು ಜೀವನದುದ್ದಕ್ಕೂ ತನ್ನ ನಡವಳಿಕೆಯಲ್ಲಿ ಅರ್ಥವನ್ನು ಕುರಿತಂತೆ ಆಸಕ್ತಿಯುಳ್ಳವನಾಗಿಲ್ಲವೆಂದೂ ಕೆಚ್ಚಿನಿಂದ ಸಾರುತ್ತಾನೆ. *(ನೋಡಿ : ಅಯೋಧ್ಯಾಕಾಂಡ)*

ನಾಹಮರ್ಥಪರೋ ದೇವಿ ಲೋಕಮಾವಸ್ತುಮುತ್ಸಹೇ ।
ವಿದ್ಧಿ ಮಾಂ ಋಷಿಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಮ್ ॥

'ಮಹಾಭಾರತ'ದ "ವನಪರ್ವ"ದಲ್ಲಿ ಇದೇ ಅಭಿಪ್ರಾಯವನ್ನು ವ್ಯಾಸರು ಗಮನಸೆಳೆಯುವಂತೆ ಹೀಗೆ ಪ್ರಸ್ತುತಪಡಿಸಿದ್ದಾರೆ. ಅವರು ಮಾನವರನ್ನು ನಾಲ್ಕು ವಿಧವಾಗಿ ವರ್ಗೀಕರಿಸುತ್ತಾರೆ, ವರ್ತಮಾನ ಜೀವನದಲ್ಲಿ ಪ್ರಾಪಂಚಿಕ ಸಂತೋಷಕ್ಕಾಗಿ ಗಮನನೀಡುವವರು ಮತ್ತು ಮರಣೋತ್ತರ ಜೀವನಕ್ಕೆ ಗಮನ ನೀಡದವರು; ಎರಡನೆಯದಾಗಿ, ಭೂಮಿಯ ಮೇಲಣ ತನ್ನ ಜೀವಿತಾವಧಿಯಲ್ಲಿ ಪ್ರಾಪಂಚಿಕ ಸುಖಕ್ಕಾಗಿ ಲವಲೇಶವೂ ಗಮನನೀಡದವರು, ಆದರೆ ಮರಣದ ನಂತರ ಚಿರಂತನ ಆನಂದಕ್ಕಾಗಿ ತಮ್ಮನ್ನು ತಾವೇ ಸಿದ್ಧಗೊಳಿಸಿಕೊಳ್ಳುವವರು; ಮತ್ತೆ ಇಹದಲ್ಲಿ ಪ್ರಾಪಂಚಿಕ ಸುಖ ಮತ್ತು ಪರದಲ್ಲಿ ಆನಂದ ಈ ಎರಡಕ್ಕೂ ಗಮನಹರಿಸುವವರು; ಮತ್ತು ಕೊನೆಯದಾಗಿ, ಇಹದಲ್ಲಿನ ಆನಂದಕ್ಕಾಗಲಿ ಅಥವಾ ಪರದಲ್ಲಿನದಕ್ಕಾಗಲಿ ಗಮನ

ನೀಡದಿರುವವರು. ಮೊದಲನೆಯ ವರ್ಗಕ್ಕೂ, ಇಹದಲ್ಲಿ ಪ್ರಾಪಂಚಿಕ ಸುಖಕ್ಕಾಗಿ ಮಾತ್ರವೇ ಜೀವನ ನಡೆಸುವ ಮತ್ತು ಭವಿಷ್ಯಕ್ಕೆ ಗಮನವನ್ನೇ ನೀಡದಿರುವ ರಾಜಪುತ್ರನ ಉದಾಹರಣೆಯನ್ನು ನೀಡುತ್ತಾರೆ. ಎರಡನೆಯ ವರ್ಗಕ್ಕೆ ಅವರು ಋಷಿಯ ಉದಾಹರಣೆ ನೀಡುತ್ತಾರೆ. ಮೂರನೆಯದಕ್ಕೆ ಪ್ರಪಂಚದ ಒಳ್ಳೆಯ ಮನುಷ್ಯನ ಉದಾಹರಣೆಯನ್ನು ನೀಡುತ್ತಾರೆ ಮತ್ತು ಕೊನೆಯ ವರ್ಗಕ್ಕೆ ಅವರು ಕ್ರೂರಿಯಾದ ಬೇಡನ ಉದಾಹರಣೆಯನ್ನು ನೀಡುತ್ತಾರೆ.

ಇಹೈವೈಕಸ್ಯ ನೋ ತತ್ರ ತವೈಕಸ್ಯ ನೋ ಇಹ ।
ಇಹ ಚಾಮುತ್ರ ಚಾನ್ಯಸ್ಯ ನೇಹ ನಾಮುತ್ರ ಕಸ್ಯಚಿತ್ ॥
ರಾಜಪುತ್ರ ಚಿರಂ ಜೀವ ಮಾ ಜೀವ ಋಷಿಪುತ್ರಕ ।
ಜೀವ ವಾ ಮರ ವಾ ಸಾಧೋ ವ್ಯಾಧ ಮಾ ಜೀವ ಮಾ ಮರ ॥

ಹೀಗೆ ಧರ್ಮ ಜೀವನದ ವಿಭಿನ್ನ ಚಟುವಟಿಕೆಗಳಿಗೆ ಸಾಮಂಜಸ್ಯವನ್ನು ಮತ್ತು ಮಾರ್ಗದರ್ಶನವನ್ನು ನೀಡುತ್ತದೆ. ಸರಿಯಾದ ಜೀವನ ನಿಯಮಕ್ಕೆ, ಯೋಗ್ಯ ಮಾರ್ಗವನ್ನು ಕಂಡುಕೊಳ್ಳುವ ಪರಿಪೂರ್ಣ ವ್ಯಕ್ತಿಯ ಸಾಮರಸ್ಯಕ್ಕೆ ಇದು ಸಮಗ್ರವಾದ ಜೀವನದ ಧರ್ಮಶಾಸ್ತ್ರವೇ ಆಗಿದೆ. ಆದರೆ ವ್ಯಕ್ತಿಯೊಬ್ಬನ ಸಮಗ್ರ ಜೀವನವನ್ನು ಮತ್ತು ಸಮಾಜದ ಸಮಗ್ರ ನಿಯಮವನ್ನು ಉದಾತ್ತಗೊಳಿಸುವ ಆಧ್ಯಾತ್ಮಿಕ ಸ್ವಾತಂತ್ರ್ಯದ ಮಹಾನ್ ಆದರ್ಶ ಧರ್ಮಕ್ಕಿಂತಲೂ ಶ್ರೇಷ್ಠವಾದುದು. ತನ್ನ 'ಧರ್ಮ ಮತ್ತು ಸಮಾಜ' *(Dharma and Society)* ದಲ್ಲಿ ಜಿ. ಹೆಚ್. ಮೀಸ್ ಪ್ರಸ್ತುತಪಡಿಸಿರುವಂತೆ ಮೋಕ್ಷ ಪರಮಾತ್ಮನ ಸಾಮ್ರಾಜ್ಯವಾದರೆ ಧರ್ಮ ಭೂಮಿಯ ಮೇಲೆ ಇರುವ ಭಗವಂತನ ಸಾಮ್ರಾಜ್ಯ. ಆದ್ದರಿಂದ ಭಾರತೀಯ ಚಿಂತನೆಯ ಪ್ರಕಾರ ನಾಲ್ಕು ಪುರುಷಾರ್ಥಗಳು ಭೂಮಿಯ ಮೇಲೆ ಒಳ್ಳೆಯ ಮತ್ತು ಸುವ್ಯವಸ್ಥಿತವಾದ ಜೀವನವನ್ನು ನಡೆಸುವ ಇಚ್ಛೆಯುಳ್ಳ ವ್ಯಕ್ತಿಯೊಬ್ಬನ ಮೂಲಭೂತ ಹೆಬ್ಬಯಕೆಗಳ ಎಲ್ಲ ಅಂಶಗಳನ್ನೂ ಪೂರೈಸುತ್ತವೆ.

* * * *

೧೭. ಧರ್ಮವು ಐಹಿಕ ಮತ್ತು ಆಧ್ಯಾತ್ಮಿಕವನ್ನು ಒಗ್ಗೂಡಿಸುತ್ತದೆ

ಸಾಮಾಜಿಕ ನಿಯಮದ ಪರಮೋಚ್ಚ ಗುರಿಯೆಂದರೆ ಮಾನವರನ್ನು ಮಾನವ ಶರೀರದ ಸಂಕೋಲೆಯೂ ಸೇರಿದಂತೆ ಎಲ್ಲ ಬಂಧನಗಳಿಂದಲೂ ಸಂಪೂರ್ಣ ಸ್ವಾತಂತ್ರ್ಯದ ಮತ್ತು ಯಾವುದೇ ಸಂಕಟ ಅಥವಾ ಯಾತನೆಯೊಂದಿಗೆ ಬೆರೆಯದಿರುವ ಪರಮೋಚ್ಚವಾದ, ಶಾಶ್ವತ ಆನಂದದ ಸ್ಥಿತಿಯನ್ನು ಪಡೆಯಲು ತರಬೇತಿ ನೀಡುವುದು. ಆದರೂ, ಪ್ರತಿಯೊಬ್ಬ ವ್ಯಕ್ತಿಯೂ ನೈತಿಕ, ಲೌಕಿಕ ಮತ್ತು ಬೌದ್ಧಿಕ ಜೀವನದ ಶ್ರೇಷ್ಠ ಮಟ್ಟವನ್ನು ಪಡೆಯಲು ಸಾಧ್ಯವಾಗುವಂತಹ ಸಾಮಾಜಿಕ ಪರಿಸ್ಥಿತಿಗಳ ಅಭಿವೃದ್ಧಿಗಾಗಿ ಐಹಿಕ ಉದ್ದೇಶಗಳಿಂದ ಅದು ಸಂಬಂಧವನ್ನು ಕಡಿದುಕೊಂಡಿಲ್ಲ. ಅದು ಎಲ್ಲರ ಒಳಿತು ಮತ್ತು ನೆಮ್ಮದಿಯೊಂದಿಗೆ ಸಾಮರಸ್ಯ ಹೊಂದಿರುತ್ತದೆ ಮತ್ತು ಮಾನವ ವ್ಯಕ್ತಿತ್ವದ ಘನತೆ ಮತ್ತು ಸ್ವಾತಂತ್ರ್ಯದೊಂದಿಗೆ ಸುಸಂಗತವಾಗಿರುತ್ತದೆ. ಈ ನಾಲ್ಕು ಪುರುಷಾರ್ಥಗಳ ಅನ್ವೇಷಣೆಯು ಮೂಲಭೂತ ನಿಯಮಗಳಾದ ಸತ್ಯ, ಅಹಿಂಸೆ ಮತ್ತು ಎಲ್ಲರ ವಿಷಯದಲ್ಲಿ ಕರುಣೆ, ಆತ್ಮತ್ಯಾಗ ಮತ್ತು ಆತ್ಮಸಂಯಮಗಳ ಮೇಲೆ ಆಧಾರಗೊಂಡಿರಬೇಕು. ಮಾನವ ಜನಾಂಗಕ್ಕೆ ಉಪನಿಷತ್ತಿನ ಋಷಿಗಳ ಮಹಾಸಂದೇಶ ಮತ್ತು ಗಟ್ಟಿ ದನಿಯ ಕರೆ, ಪ್ರತಿಯೊಂದು 'ದ' ಎಂಬ ಅಕ್ಷರದಿಂದ ಪ್ರಾರಂಭವಾಗುವ ಮೂರು ಪದಗಳಲ್ಲಿ ಅಂದರೆ 'ದಾನ, ದಯಾ ಮತ್ತು ದಮ'ಗಳಲ್ಲಿ ಸಂಗ್ರಹವಾಗಿ ಅಭಿವ್ಯಕ್ತವಾಗಿದೆ. ಉಪನಿಷತ್ತಿನಲ್ಲಿ ಸುಂದರವಾದ ಕಥೆಯೊಂದನ್ನು ಹೇಳಲಾಗಿದೆ. ಬಹು ಹಿಂದೆ ದೇವತೆಗಳು, ಮನುಷ್ಯರು ಮತ್ತು ರಾಕ್ಷಸರು ಸಲಹೆಗಾಗಿ ಪ್ರಜಾಪತಿಯ ಬಳಿಗೆ ತೆರಳಿದರು. ಆತ ಅವರ ಎದುರಿನಿಂದ ಕಣ್ಮರೆಯಾದ ಮತ್ತು 'ದ.ದ.ದ' ಎಂಬ ಧ್ವನಿಗೆ ಸಮಾನವಾದ ಗುಡುಗಿನ ಮೊಳಗು ಮಾತ್ರವೇ ಅಲ್ಲಿತ್ತು. ತನ್ನಲ್ಲಿ ಯಾವ ನ್ಯೂನತೆಯಿದೆಯೆಂದು ಅದು ಭಾವಿಸಿತೋ ಅದಕ್ಕನುಗುಣವಾಗಿ ಪ್ರತಿಯೊಂದು ಗುಂಪೂ ಇದನ್ನು 'ದ' ಎಂಬುದರಿಂದ ಪ್ರಾರಂಭವಾಗುವ ಪದದಿಂದ ಸಂಗ್ರಹವಾಗಿ ತಿಳಿಸಿದ ಉಪದೇಶದಿಂದ ಅರ್ಥೈಸಿತು. ಆತ್ಮಸಂಯಮದ ಕೊರತೆಯುಳ್ಳ ದೇವತೆಗಳು ಅದನ್ನು 'ದಮ' ಎಂದು ಅರ್ಥೈಸಿದರು, ಕ್ರೌರ್ಯಕ್ಕೆ ಕುಖ್ಯಾತರಾಗಿದ್ದ ರಾಕ್ಷಸರು 'ದಯಾ' ಅಥವಾ ಕರುಣೆಯಿಂದ ಅದನ್ನು ಅರ್ಥೈಸಿದರು, ಮತ್ತು ಒಡೆತನದೊಲವಿನ ಪ್ರವೃತ್ತಿಯನ್ನು ತಮ್ಮ ಗುಣಲಕ್ಷಣವಾಗಿ ಹೊಂದಿದ್ದ ಮಾನವರು

ಅದನ್ನು 'ದಾನ' ಅಥವಾ ಔದಾರ್ಯವೆಂದು ಅರ್ಥೈಸಿದರು. ಎಲ್ಲ ಮೂರು ಗುಂಪುಗಳೂ ಭೇಟಿಯಾದರು ಮತ್ತು ಪ್ರಜಾಪತಿಯ ಸಂದೇಶವನ್ನು ಸೂಚಿಸುವ ಮೂರು ಪದಗಳನ್ನು ಪರಸ್ಪರರಿಗೆ ತಿಳಿಸಿದರು. ತಮ್ಮ ಭಾಷ್ಯದಲ್ಲಿ ಶ್ರೀ ಶಂಕರರು ಅತ್ಯಂತ ವಿವೇಚನೆಯಿಂದ ಅಭಿಪ್ರಾಯಪಟ್ಟಿರುವುದೇನೆಂದರೆ, ಮನುಷ್ಯರ ಮಧ್ಯದಲ್ಲಿ ಈ ಮೂರು ಗುಂಪುಗಳೂ ಕಾಣಬರುತ್ತವೆ. ಮತ್ತು ದಾನ, ದಯಾ ಮತ್ತು ದಮ ಎಂಬ ಮೂರು ಪದಗಳಲ್ಲಿ ಅಡಕವಾಗಿರುವ ಸಂದೇಶ ಇಡೀ ಮಾನವಕುಲಕ್ಕೆ ಅನ್ವಯಿಸುತ್ತದೆ. ಹೀಗೆ ವೇದದ ಋಷಿಯು ವಿಶ್ವದೆಲ್ಲೆಡೆಯಲ್ಲಿಯೂ ಪ್ರತಿಧ್ವನಿಸಿದ ಗುಡುಗಿನ ಮೊಳಗು ಧ್ವನಿಗಳಿಂದ ತನ್ನ ಅಂತರಾಳದ ಸ್ಫೂರ್ತಿಯನ್ನು ಪ್ರಕಟಪಡಿಸಿದ್ದಾನೆ. ವಿಶ್ವಶಾಂತಿಗಾಗಿ ಮತ್ತು ಸಮಾನವಾದ ಮಾನವತೆಗಾಗಿ ಕಾರ್ಯನಿರತವಾಗಿರುವ ವಿಶ್ವಸಂಸ್ಥೆಯ ಪ್ರವೇಶದ್ವಾರಗಳಲ್ಲಿ ಮಾತ್ರವೇ ಅಲ್ಲ, ಸಮಾಜದಲ್ಲಿನ ಪ್ರತಿಯೋರ್ವ ವ್ಯಕ್ತಿಯ ಹೃದಯದ ಪ್ರವೇಶದ್ವಾರದಲ್ಲಿಯೂ ಈ ಮೂರು ಪದಗಳು ಸುವರ್ಣಾಕ್ಷರಗಳಲ್ಲಿ ಬರೆದಿಡಲು ಅರ್ಹವಾಗಿವೆ. ಮಾನವತೆಯನ್ನು ಪ್ರತಿಪಾದಿಸುತ್ತಲಿರುವ ರಾಷ್ಟ್ರಗಳು ಪ್ರತಿಯೋರ್ವ ಮಾನವನ ಹೃದಯಕ್ಕೆ ಈ ಸಂದೇಶವನ್ನು ಕೊಂಡೊಯ್ಯಬೇಕು. ಇಲ್ಲದಿದ್ದಲ್ಲಿ ಮಾನವಕುಲಕ್ಕೆ ಭವಿತವ್ಯವೇ ಇರುವುದಿಲ್ಲ. ಮತ್ತು ಪ್ರಪಂಚದಲ್ಲಿ ಶಾಂತಿಯನ್ನು ನಿರೀಕ್ಷಿಸುವಂತೆಯೇ ಇಲ್ಲ. ಭೂಪಾಲದಿಂದ ಈಶಾನ್ಯಕ್ಕೆ ಮೂವತ್ತು ಮೈಲಿಗಳ ದೂರದಲ್ಲಿರುವ ಬೆಸ್‌ನಗರದಲ್ಲಿ ನಿಲ್ಲಿಸಲಾಗಿರುವ ಹೆಲಿಯೊಡೋರಸ್‌ನ ಎತ್ತರವಾದ ದುಂಡು ಗಂಬದ ಶಾಶ್ವತವಾಗಿರುವ ಬಂಡೆಯ ಮೇಲೆ ಇದೇ ಸ್ಮರಣೆಯ ಸಂದೇಶವನ್ನು ಕೆತ್ತಿರುವುದನ್ನು ನಾವು ಕಾಣುತ್ತೇವೆ. ಶಾಸನಗಳಲ್ಲಿ ಕಂಡುಬರುವಂತೆ ಈ ಗ್ರಾನೈಟ್ ಕಂಬವನ್ನು ಸ್ಥಾಪಿಸಿದವನು ಹೆಲಿಯೊಡೋರಸ್ ಎಂಬ ಗ್ರೀಕ್ ವ್ಯಕ್ತಿ. ಸಿರಿಯಾದ ಆಂಟಿಯಾಲ್ಕಿಡಾಸ್‌ನಿಂದ ದೂತನಾಗಿ ಕಳುಹಿಸಲಾದ ಭಾಗವತನೆಂದು ಆತ ತನ್ನನ್ನು ತಾನು ಕರೆದುಕೊಳ್ಳುತ್ತಾನೆ. (ಶಾಸನದ) ಕೊನೆಯ ಭಾಗ ಪ್ರಾಕೃತದಲ್ಲಿದೆ : ' ತ್ರೀಣಿ ಅಮೃತಪದಾನಿ (ಸು) ಅನುತ್ತಿತಾನಿ, ನಯಂತಿ ಸ್ವಗ ದಮ ಛಗ ಅಪ್ರಮದ.' ಈ ಮೂರು ಮಹಾಭಾರತದ 'ಸನತ್ಸುಜಾತೀಯ'ದಲ್ಲಿ ಕಂಡುಬರುವುದಕ್ಕೆ ಸಮನಾಗಿಯೇ ಇವೆ :

ದಮಸ್ತ್ಯಾಗೋಽಪ್ರಮಾದಶ್ಚ ಏತೇಷ್ವಮೃತಮಾಹಿತಮ್ ॥

ಆತ್ಮಸಂಯಮ, ತ್ಯಾಗ ಮತ್ತು ದೋಷರಾಹಿತ್ಯ ಈ ಮೂರು ಅಮರತ್ವದ ಅಡಿಪಾಯಗಳು. ಮಾನವ ಹೃದಯದ ಮೂಲಭೂತ ಹೆಬ್ಬಯಕೆಗಳ ಬಗ್ಗೆ ತಮ್ಮ ಸ್ಪಷ್ಟವಾದ ವಿಶ್ಲೇಷಣೆಯಿಂದಲೂ ಮತ್ತು ಮನುಷ್ಯನು ಹೊಂದಿರಬೇಕಾದ ಉನ್ನತ

ಆದರ್ಶಗಳ ಮತ್ತು ಅವುಗಳಿಗಾಗಿ ಆತ ಸಮಾಜದ ಒಂದು ಅಂಗವಾಗಿ ಮತ್ತು ವಿಶ್ವದ ಪ್ರಜೆಯಾಗಿ ಕಾರ್ಯದಲ್ಲಿ ತೊಡಗಬೇಕೆಂಬುದರ ಖಚಿತ ನಿರೂಪಣೆಯಿಂದಲೂ ಭಾರತೀಯ ಚಿಂತಕರು ಮಾನವ ಕುಲದ ಚಿಂತನೆಗೆ ಅನನ್ಯವಾದ ಕೊಡುಗೆಯನ್ನು ನೀಡಿದ್ದಾರೆ.

* * * *

೧೮. ಮಾನವತಾವಾದದ ಆದರ್ಶಗಳು

ಕೆಲವು ವರ್ಷಗಳ ಹಿಂದೆ ನನ್ನ ಗೌರವಾನ್ವಿತ ಸ್ನೇಹಿತರೊಬ್ಬರು ಬೈಬಲ್‌ನಲ್ಲಿರುವ ಸಂತ ಮ್ಯಾಥ್ಯೂಸ್‌ನ ಗ್ರಂಥದಲ್ಲಿನ ಒಂದು ವಾಕ್ಯವೃಂದದತ್ತ ನನ್ನ ಗಮನ ಸೆಳೆದರು. ಅದರಲ್ಲಿ ಏಸು ಕ್ರಿಸ್ತ ಸಹಮಾನವರಿಗೆ ಸಲ್ಲಿಸುವ ಸೇವೆ ಪರಮಾತ್ಮನಿಗೆ ಸಲ್ಲಿಸಿದ ಸೇವೆಯೆಂದು ಸೊಗಸಾದ ರೀತಿಯಲ್ಲಿ ಪ್ರತಿಪಾದಿಸಿದ್ದಾನೆ. ಪ್ರಪಂಚದಾದ್ಯಂತ ಪರೋಪಕಾರದ ಸೇವೆಗೆ ಕ್ರೈಸ್ತಮತದ ಪ್ರಚಾರಕರಿಗೆ ಈ ಧಾರ್ಮಿಕ ಗ್ರಂಥದ ಆದೇಶ ಪ್ರಧಾನ ಪ್ರೇರಣೆಯಾಗಿದೆ. ನಮ್ಮ ಪ್ರಾಚೀನ ಭಾರತೀಯ ಪ್ರಮಾಣಗ್ರಂಥಗಳಲ್ಲಿ ಇದೇ ಆದರ್ಶಕ್ಕೆ ಪ್ರಾಶಸ್ತ್ಯ ನೀಡಲಾಗಿದೆಯೇ ಎಂದು ನನ್ನ ಸ್ನೇಹಿತರು ತಿಳಿಯಬಯಸಿದರು. ಸಂತ ಮ್ಯಾಥ್ಯೂಸ್‌ನ ಗ್ರಂಥದ ೨೫ನೆಯ ಅಧ್ಯಾಯ, ೩೪ ರಿಂದ ೪೦ ರಲ್ಲಿ ಕಂಡುಬರುವ ವಾಕ್ಯವೃಂದಗಳು ಇಂತಿವೆ :

ವಾಕ್ಯವೃಂದ ೩೪ : ಬಳಿಕ ದೊರೆ ತನ್ನ ಬಲಭಾಗದಲ್ಲಿರುವವರಿಗೆ ತಿಳಿಸುತ್ತಾನೆ, ನನ್ನ ತಂದೆಯ ಅನುಗ್ರಹಕ್ಕೆ ಪಾತ್ರರಾದ ನೀವು ಬನ್ನಿರಿ. ಪ್ರಪಂಚದ ಅಡಿಪಾಯದಿಂದ ನಿಮಗಾಗಿ ಸಿದ್ಧಪಡಿಸಿರುವ ರಾಜ್ಯವನ್ನು ಉತ್ತರಾಧಿಕಾರದಿಂದ ಪಡೆಯಿರಿ.

ವಾಕ್ಯವೃಂದ ೩೫ : ನಾನು ಹಸಿದವನಾಗಿದ್ದಾಗ ನೀನು ನನಗೆ ಮಾಂಸವನ್ನು ನೀಡಿದೆ; ನಾನು ಬಾಯರಿದವನಾಗಿದ್ದೆ ಮತ್ತು ನೀನು ಕುಡಿಯಲು ನೀರನ್ನು ಕೊಟ್ಟೆ; ನಾನು ಅಪರಿಚಿತನಾಗಿದ್ದೆ, ನೀನು ನನ್ನನ್ನು ಬರಮಾಡಿಕೊಂಡೆ.

ವಾಕ್ಯವೃಂದ ೩೬ : ನಾನು ಬತ್ತಲೆಯಾಗಿದ್ದೆ, ನೀನು ನನಗೆ ಬಟ್ಟೆಯನ್ನು ಒದಗಿಸಿದೆ; ನಾನು ರೋಗಿಯಾಗಿದ್ದೆ, ನೀನು ನನ್ನನ್ನು ಭೇಟಿಮಾಡಿದೆ; ನಾನು ಸೆರೆಮನೆಯಲ್ಲಿದ್ದೆ, ನೀನು ನನ್ನ ಬಳಿಗೆ ಬಂದೆ.

ವಾಕ್ಯವೃಂದ ೩೭: ಬಳಿಕ ಧರ್ಮಶೀಲನಾದವನು ಆತನ ಉಕ್ತಿಗೆ ಉತ್ತರಿಸಿದ, ಪ್ರಭು, ಹಸಿದವನಾದ ನಿನ್ನನ್ನು ನಾವು ನೋಡಿ ಆಹಾರ ನೀಡಿದುದೆಂದು? ಬಾಯಾರಿದವನಾದ ನಿನಗೆ ನೀರನ್ನು ಕುಡಿಯಲು ನೀಡಿದುದೆಂದು?

ವಾಕ್ಯವೃಂದ ೩೮ : ಅಪರಿಚಿತನಾದ ನಿನ್ನನ್ನು ನಾವು ನೋಡಿದುದೆಂದು, ನಿನ್ನನ್ನು ನಮ್ಮಲ್ಲಿಗೆ ಕರೆದುಕೊಂಡುದುದೆಂದು ? ಅಥವಾ ಬತ್ತಲೆಯಲ್ಲಿದ್ದಾಗ ವಸ್ತ್ರವನ್ನು ನಿನಗೆ ನೀಡಿದುದೆಂದು?

ವಾಕ್ಯವೃಂದ ೩೯ : ನಾವು ರೋಗಿಯಾದ ನಿನ್ನನ್ನು ನೋಡಿದುದೆಂದು ಅಥವಾ ಸೆರಮನೆಯಲ್ಲಿದ್ದಾಗ ನಿನ್ನ ಬಳಿಗೆ ಬಂದುದೆಂದು ?

ವಾಕ್ಯವೃಂದ ೪೦ : ಮತ್ತು ಪ್ರಭುವು ಉತ್ತರ ನೀಡಿ ಅವರನ್ನುದ್ದೇಶಿಸಿ ನುಡಿದ, ಸತ್ಯವಾಗಿ ನಿಮಗೆ ಹೇಳುತ್ತೇನೆ, ನನ್ನ ಅತ್ಯಂತ ಕನಿಷ್ಠರಾದ ಈ ಸೋದರರಲ್ಲಿ ಒಬ್ಬನಿಗಾದರೂ ಈಗ ಹೇಳಿದಷ್ಟರಮಟ್ಟಿಗೆ ನೀವು ಸೇವೆ ಮಾಡಿರುವುದಾದರೆ ನೀವು ನನಗೆ ಸೇವೆ ಮಾಡಿದಂತೆಯೇ ಸರಿ.

* * * *

೧೯. ಮೂರು ಮೂಲಭೂತ ಅಭಿಪ್ರಾಯಗಳು

ಈ ಬೈಬಲಿನ ವಾಕ್ಯವೃಂದದಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿರುವ ಮೂರು ಮೂಲಭೂತ ಅಭಿಪ್ರಾಯಗಳಿವೆ. ಮೊದಲನೆಯದಾಗಿ, ವ್ಯಕ್ತಿಯೊಬ್ಬನು ಕಡುಬಡವನೊಬ್ಬನಿಗೆ ವಸತಿ, ಆಹಾರ ಮತ್ತು ವಸ್ತ್ರವನ್ನು ನೀಡಿದರೆ ಮತ್ತು ಸೆರೆಮನೆಯಲ್ಲಿರುವ ಮತ್ತೊಬ್ಬನಿಗೆ ನೆರವು ನೀಡಿದರೆ, ಪರಮಾತ್ಮನು ಈ ಎಲ್ಲ ಸೇವೆಗಳನ್ನೂ ತನಗಾಗಿಯೇ ಮಾಡಿದುದಾಗಿ ಪ್ರಶಂಸಿಸುತ್ತಾನೆ. ಎರಡನೆಯದಾಗಿ, ಪರಮಾತ್ಮನು ಅಂತಹ ವ್ಯಕ್ತಿಯನ್ನು ತನ್ನ ನಿಜವಾದ ಭಕ್ತನೆಂದು ಪರಿಗಣಿಸುತ್ತಾನೆ. ಹೀಗೆ ಪ್ರೀತಿ ಮತ್ತು ವಾತ್ಸಲ್ಯಗಳ ಪರಿಣಾಮವಾಗಿರುವ ಸಹಮಾನವರಿಗೆ ಸಲ್ಲಿಸುವ ಸೇವೆ ಪರಮಾತ್ಮನಿಗೆ ಸಲ್ಲಿಸುವ ಸೇವೆ ಮತ್ತು ಆತನಿಗೆ ತೋರುವ ಭಕ್ತಿಯೇ ಆಗುತ್ತದೆ. ಮೂರನೆಯದಾಗಿ, ಸಹಮಾನವರನ್ನು ಕುರಿತ ವ್ಯಕ್ತಿಯೊಬ್ಬನ ಪ್ರೀತಿ ಪರಮಾತ್ಮನ ಪ್ರೀತಿಗೆ ಸರಿಸಮಾನವಾದುದು. ತನ್ನ ಹೇಳಿಕೆಯೊಂದರಲ್ಲಿ ಸಂತ ಜಾನ್ ಅಭಿಪ್ರಾಯ ವ್ಯಕ್ತಪಡಿಸಿರುವುದು ಹೀಗೆ : 'ತಾನು ಕಂಡಿರುವ ತನ್ನ ಸೋದರರನ್ನು ಪ್ರೀತಿಸದವನು, ತಾನು ಕಾಣದಿರುವ ಪರಮಾತ್ಮನನ್ನು ಹೇಗೆ ಪ್ರೀತಿಸಿಯಾನು?' ಇದೇ ಅಭಿಪ್ರಾಯ 'ಅಬೂ ಬೆನ್ ಆಡಮ್' ಕವಿತೆಯಲ್ಲಿಯೂ ಸುಂದರವಾಗಿ ಅಭಿವ್ಯಕ್ತಗೊಂಡಿದೆ. ಈ ಕವಿತೆಯಲ್ಲಿ ತನ್ನ ಸಹಮಾನವರನ್ನು ಪ್ರೀತಿಸಿದ ಬೆನ್ ಆಡಮ್‌ನನ್ನು ಪರಮಾತ್ಮನನ್ನು ಪ್ರೀತಿಸಿದವರಲ್ಲಿ ಅಗ್ರಗಣ್ಯನೆಂದು ದೇವದೂತನು ಸಾರಿದನೆಂದು ಹೇಳಲಾಗಿದೆ. ಲೀ ಹಂಟ್‌ನ ಈ ಕವಿತೆ ಹೀಗೆ ಸಾಗುತ್ತದೆ :–

ಅಬು ಬೆನ್ ಆಡಂ (ಆತನ ಸಂತತಿ ವರ್ಧಿಸಲಿ)
ನೆಮ್ಮದಿಯ ಗಾಢಕನಸಿನಿಂದ ಒಂದು ರಾತ್ರಿ ಎಚ್ಚರಗೊಂಡ
ತನ್ನ ಕೋಣೆಯೊಳಗಣ ಚಂದ್ರಿಕೆಯಲ್ಲಿ, ಅರಳುತ್ತಿರುವ
ನೈದಿಲೆಯಂತೆ, ಅದನು ಶ್ರೀಮಂತಗೊಳಿಸುತ್ತ
ಸುವರ್ಣವರ್ಣದ ಪುಸ್ತಕದಲ್ಲಿ ಬರೆಯುತ್ತಲಿದ್ದ ಅಪ್ಸರೆಯೋರ್ವಳ ಕಂಡ.
ಮಿತಿಮೀರಿದ ನೆಮ್ಮದಿ ಅಬು ಬೆನ್ ಆಡಮ್‌ನನ್ನು ಹುರಿದುಂಬಿಸಿತ್ತು
ತನ್ನ ಕೋಣೆಯ ಗಂಭೀರವ್ಯಕ್ತಿಗೆ ನುಡಿದನಾತ
'ನೀ ಬರೆಯುತ್ತಲಿರುವುದೇನನ್ನು?' ಸ್ವಾಪ್ನ ವ್ಯಕ್ತಿ ಎತ್ತಿತು ತನ್ನ ಶಿರವ
ಮಧುರಾನುಗ್ರಹದ ಪೂರ್ಣ ನೋಟದೊಂದಿಗೆ

ಉತ್ತರಿಸಿತು : 'ದೇವರ ಪ್ರೀತಿಸುವವರ ಹೆಸರುಗಳ.'
'ನನ್ನದೂ ಅದರಲ್ಲೊಂದೇನು?' ನುಡಿದ ಅಬು. 'ಹಾಗಿಲ್ಲ'
ಉತ್ತರಿಸಿದಳು ಅಪ್ಸರೆ : ಅಬು ನುಡಿದ ಬಲು ಮೆಲ್ಲನೆ
ಆದರೆ, ನುಡಿದ ಗೆಲುವಿನಿಂದಲೇ 'ಹಾಗಿದ್ದಲ್ಲಿ ಪ್ರಾರ್ಥಿಸುವೆ ನಿನ್ನ
ಬರೆ ನನ್ನ ಹೆಸರ ಸಹಮಾನವರ ಪ್ರೀತಿಸುವನೆಂದು.'
ಬರೆದು ಅಪ್ಸರೆ ಆದಳು ಕಣ್ಮರೆ. ಮರುರಾತ್ರಿ ಬಂದಿತದು ಮತ್ತೆ
ಎಚ್ಚರಗೊಳಿಪ ಜ್ಯೋತಿಯೊಡಗೂಡಿ
ತೋರಿಸಿತು ಹೆಸರುಗಳ ಭಗವಂತನ ಪ್ರೇಮಾನುಗ್ರಹಕ್ಕೆ ಪಾತ್ರರಾದವರ
ನೋಡದೋ ! ಎಲ್ಲ ಹೆಸರುಗಳ ಮುಂಚೂಣಿಯಲ್ಲಿ ಇದ್ದ ಬೆನ್ ಆಡಮ್॥

ಮತ್ತೆ ಸ್ಯಾಮುಯಲ್ ಟೇಯ್ಲರ್ ಕೋಲ್‌ರಿಜ್ ತನ್ನ 'ದಿ ಏನ್ಷಿಯಂಟ್ ಮ್ಯಾರಿನರ್'ನಲ್ಲಿ ಹೀಗೆ ಹೇಳುತ್ತಾನೆ :–

ಶುಭವಾಗಲಿ, ಶುಭವಾಗಲಿ, ಆದರೆ ವಿವಾಹದ ಅತಿಥಿಯೆ
ನಿನಗೆ ಇದ ಹೇಳುವೆನು
ಚೆನ್ನಾಗಿ ಪ್ರೀತಿಸುವನಾವನೋ ಆತನೇ ಚೆನ್ನಾಗಿ ಪ್ರಾರ್ಥಿಸಬಲ್ಲ
ಮಾನವರ, ಪಕ್ಷಿ, ಪ್ರಾಣಿಯ
ಯಾರೂ ಉತ್ತಮವಾಗಿ ಪ್ರೀತಿಸಬಲ್ಲನೋ ಆತನೆ ಉತ್ತಮವಾಗಿ ಪ್ರಾರ್ಥಿಸಬಲ್ಲ
ಶ್ರೇಷ್ಠದಂತೆಯೇ ಕನಿಷ್ಠವಸ್ತುಗಳನೆಲ್ಲವನ್ನೂ
ನಮ್ಮ ಪ್ರೀತಿಸುವ ಪ್ರಿಯ ದೇವರನ್ನೂ
ಸೃಜಿಸಿದ ಆತ ಪ್ರೀತಿಸುವ ನಮ್ಮನೆಲ್ಲ.

* * * *

೧೯. ಕ್ರಿಶ್ಚಿಯನ್ ಮಾನವತಾವಾದಕ್ಕೆ ಸ್ಫೂರ್ತಿ

ಬೈಬಲ್ ಬೋಧಿಸುವ ಈ ಪ್ರೇಮ ಮತ್ತು ಸೇವೆಯ ಮಹಾ ಆದರ್ಶವೇ ಪ್ರಪಂಚದಾದ್ಯಂತ ಕ್ರೈಸ್ತ ಮತದ ಧರ್ಮಪ್ರಚಾರಕ ಮಂಡಳಿಗಳಿಂದ ನಡೆಸಲಾಗುತ್ತಿರುವ ಸುವ್ಯವಸ್ಥಿತವಾದ, ಶ್ರೇಷ್ಠ ಲೋಕೋಪಕಾರ ಕಾರ್ಯಗಳಿಗೆ ಸ್ಫೂರ್ತಿಯಾಗಿದೆ. ರೋಗಿಗಳ ಆರೈಕೆ ಮತ್ತು ಚಿಕಿತ್ಸೆಗಾಗಿ ಆಸ್ಪತ್ರೆಗಳ ಸ್ಥಾಪನೆ, ಬಡವರು ಮತ್ತು ನಿರ್ಗತಿಕರಿಗಾಗಿ ಉತ್ತಮವಾದ ವಿದ್ಯಾಸಂಸ್ಥೆಗಳು ಮತ್ತು ಅನಾಥಾಲಯಗಳು ಮತ್ತು ಇತರ ಬಗೆಯ ಸಾಮಾಜಿಕಕಾರ್ಯಗಳ ರೀತಿಯಲ್ಲಿ ಈ ಲೋಕೋಪಕಾರ ಜರುಗುತ್ತಿದೆ. ಸೇವೆಯ ಈ ಸಾಹಸಮಯ ಹುಮ್ಮಸ್ಸಿನಿಂದ ಪ್ರಚೋದಿತರಾದ ಧರ್ಮಪ್ರಚಾರಕರು ದೂರದ ನಾಡುಗಳಿಗೂ ಭೇಟಿ ನೀಡುತ್ತಾರೆ. ಮತ್ತು ಪ್ರಪಂಚದ ಎಲ್ಲ ಭಾಗಗಳಲ್ಲಿರುವ ಬಡವರ ನಡುವೆ ಕೆಲಸ ಮಾಡುತ್ತಾರೆ. ನಿಸ್ಸಂದೇಹವಾಗಿ ಕ್ರೈಸ್ತಧರ್ಮದ ಧರ್ಮಪ್ರಚಾರಕ ಮಂಡಳಿಗಳಿಗೆ ಮತ್ತೊಂದು ಉದ್ದೇಶವೂ ಇದೆಯೆಂಬುದನ್ನು ವ್ಯಕ್ತಿಯೊಬ್ಬನು ಎಂದಿಗೂ ಮರೆಯಬಾರದು. ಅದೇನೆಂದರೆ ಕ್ರಿಶ್ಚಿಯನ್ನರಲ್ಲದವರ ನಡುವೆ ಕ್ರಿಸ್ತನ ಧರ್ಮವನ್ನು ಹರಡುವುದು. ಅವರು ಮಾಡುವ ಲೋಕೋಪಕಾರದ ಕಾರ್ಯ ಬಹುಮಟ್ಟಿಗೆ ಈ ಉದ್ದೇಶದಿಂದಲೇ ಸ್ಫೂರ್ತಿಯನ್ನು ಪಡೆದಿದೆ.

ಈ ಉದ್ದೇಶಕ್ಕೆ ಅವಲಂಬನೆಯನ್ನಿರಿಸಿರುವುದು ಬೈಬಲಿನಲ್ಲಿ ಅಡಕವಾಗಿರುವ ಸಂತ ಮ್ಯಾಥ್ಯೂಸನ ಗ್ರಂಥ ಅಧ್ಯಾಯ ೨೮–೧೯ ಮತ್ತು ೨೦ನೆಯ ವಾಕ್ಯವೃಂದ ಧರ್ಮಗ್ರಂಥದ ಆದೇಶದ ಆಧಾರದ ಮೇಲೆ.

ವಾಕ್ಯವೃಂದ ೧೯ : 'ಆದ್ದರಿಂದ ನೀವು ತೆರಳಿ. ತಂದೆಯ, ಮಗನ ಮತ್ತು ಪವಿತ್ರಾತ್ಮದ ಹೆಸರಿನಲ್ಲಿ ಜ್ಞಾನಸ್ನಾನ ಮಾಡಿಸಿ ಎಲ್ಲ ದೇಶಗಳಿಗೂ ಬೋಧಿಸಿರಿ.

ವಾಕ್ಯವೃಂದ ೨೦ : ಏನೆಲ್ಲವನ್ನೂ ನಾನು ನಿಮಗೆ ಅಪ್ಪಣೆಮಾಡಿರುವೆನೋ ಅದೆಲ್ಲವನ್ನೂ ಆಚರಿಸುವಂತೆ ಅವರಿಗೆ ಬೋಧಿಸಿ; ಮತ್ತು ನೋಡಿರಿ, ನಾನು ಯಾವಾಗಲೂ ನಿಮ್ಮೊಂದಿಗಿದ್ದೇನೆ, ಪ್ರಪಂಚದ ಕೊನೆಯವರೆವಿಗೂ, ಆಮೆನ್.'

'ವೇದಾಂತ ಮತ್ತು ಅದರ ನೈತಿಕ ಮಗ್ಗಲುಗಳು' *(Vedanta and its Ethical Aspects)* ಎಂಬ ತಮ್ಮ ವಿದ್ವತ್ಪೂರ್ಣವಾದ ಗ್ರಂಥದ ೨೮೦–೨೮೧ ನೆಯ ಪುಟದಲ್ಲಿ ಪ್ರೊ॥ ಕೆ. ಸುಂದರಂ ಐಯ್ಯರ್‌ರವರು ಸೂಚಿಸುವುದೇನೆಂದರೆ ನಮ್ಮ ಬೈಬಲ್ ಗ್ರಂಥದಲ್ಲಿ ನಾವು ಓದುವ ಸಂತ ಮ್ಯಾಥ್ಯೂಸ್‌ನ ಸುವಾರ್ತೆ

ಕೊನೆಯ ೧೨ ಪದ್ಯಗಳು) ನಿಸ್ಸಂಶಯವಾಗಿಯೂ ಯಥಾರ್ಥ ಗ್ರಂಥಪಾಠವಲ್ಲ. ಏಕೆಂದರೆ ಈ ಪದ್ಯಗಳು ಅತ್ಯಂತ ಹಳೆಯ ಹಸ್ತಪ್ರತಿಗಳಲ್ಲಿ ಕಾಣಬರುವುದಿಲ್ಲ. ಆತ ಇದನ್ನು ಡಾ॥ ವಿಲಿಯಂ ವ್ರೆಡೆಯವರ ಅಭಿಪ್ರಾಯವೆಂದು ತಿಳಿಸಿದ್ದಾನೆ. ಇದು ಅವರ ಕೃತಿಯಾದ 'ಹೊಸ ಒಡಂಬಡಿಕೆಯ ಉಗಮ' *(The Origin of the New Testament* ಪುಟ ೫೪) ದಲ್ಲಿ ಕಂಡುಬರುತ್ತದೆ. ಅದೇನೇ ಇರಲಿ, ಇತ್ತೀಚಿನ ಕ್ರೈಸ್ತ ಧರ್ಮದ ಇಗರ್ಜಿ, ಏಸುದೂತರ ಯುಗದಲ್ಲಿ ವಿಶ್ವವ್ಯಾಪಿ ಚರ್ಚ್‌ನ ಸ್ಥಾಪನೆಯ ಅಭಿಪ್ರಾಯದಿಂದ ಪ್ರಭಾವಿತವಾಗಿತ್ತು. ಧರ್ಮದಲ್ಲಿ ನಂಬಿಕೆಯಿಲ್ಲದಿರುವವರೂ ಸಹ ಉದಾತ್ತವಾದ ಹಾಗೂ ಲೋಕೋಪಕಾರದ ಆದರ್ಶಗಳಿಂದ ಪ್ರಭಾವಿತರಾಗಿ ಲೋಕೋಪಕಾರದ ಸೇವೆಗೆ ವಿಶೇಷ ಮಹತ್ತ್ವವನ್ನು ನೀಡುವರೆಂಬುದನ್ನು ಗಮನಿಸಬೇಕು. ಇದು ಮಾನವತಾವಾದವೆಂದು ಪ್ರಸಿದ್ಧವಾಗಿದೆ. ಮಾನವತಾವಾದವು ವಾದಿಸುವುದೇನೆಂದರೆ ಈ ಪ್ರಪಂಚವು ನಮ್ಮ ಪ್ರಮುಖ ಆಸಕ್ತಿಯ ವಿಷಯ ಮತ್ತು ನಮ್ಮ ಒಂದೇ ಆದರ್ಶವೆಂದರೆ ಮಾನವತೆಯ ಪರಿಪೂರ್ಣತೆಯೇ. ಬೈಬಲ್‌ನಲ್ಲಿ ಸಂತ ಮ್ಯಾಥ್ಯೂಸ್‌ನ ಕೃತಿ ಅಧ್ಯಾಯ ೨೫ ವಾಕ್ಯವೃಂದ ೪೦: ಏಸುಕ್ರಿಸ್ತನ ಹೇಳಿಕೆಗಳಲ್ಲಿ ಪ್ರೇಮದ ಧರ್ಮವು ಪ್ರತಿಪಾದಿತವಾಗಿದೆ. ಅದೇನೆಂದರೆ ಲೋಕೋಪಕಾರದ ಸೇವೆಯನ್ನು ಮಾಡುವುದು ಪ್ರತಿಯೊಬ್ಬನ ಕರ್ತವ್ಯ ಮತ್ತು ಅಂಥ ಸೇವೆ ಧರ್ಮದ ಮೂಲಭೂತವಾದ ಭಾಗವೇ ಆಗಿದೆಯೆಂದೂ ಅಲ್ಲಿ ಪ್ರತಿಪಾದಿತವಾಗಿದೆ. ವ್ಯಕ್ತಿಯೊಬ್ಬನು ಸಹಮಾನವನಲ್ಲಿ ಹೊಂದಿರುವ ಪ್ರೀತಿ ಅತಿಶ್ರೇಷ್ಠವಾದ ಮಾನವತಾವಾದದ ಆದರ್ಶ ಮತ್ತು ಧಾರ್ಮಿಕ ಗುರಿಯೂ ಆಗಿದೆ. ವ್ಯಕ್ತಿಯೊಬ್ಬನು ಸಹಮಾನವನಲ್ಲಿ ಸಲ್ಲಿಸುವ ಸೇವೆ ಮೂಲಭೂತವಾಗಿ ಭಗವಂತನಿಗೆ ಸಲ್ಲಿಸುವ ಸೇವೇಯೇ ಆಗಿದೆ. ಈ ಮುಂದಿನ ಪುಟಗಳಲ್ಲಿ ನನ್ನ ಪ್ರಯತ್ನವೇನೆಂದರೆ ನಮ್ಮ ಪ್ರಾಚೀನ ಭಾರತೀಯ ಶಾಸ್ತ್ರ ಗ್ರಂಥಗಳು ಧಾರ್ಮಿಕ ಕರ್ತವ್ಯಗಳ ಒಂದು ಭಾಗವಾಗಿ, ವ್ಯಕ್ತಿಯೊಬ್ಬನ ಸಹಮಾನವರನ್ನು ಕುರಿತ ಸೇವೆ, ಪರೋಪಕಾರ ಮತ್ತು ಪ್ರೇಮದ ಈ ಆದರ್ಶಗಳನ್ನು ಪ್ರತಿಪಾದಿಸುವುದಲ್ಲದೇ ಪ್ರೇಮ ಮತ್ತು ಸೇವೆಯ ಮಾರ್ಗ ದೈವತ್ತ್ವದ ಸಾಕ್ಷಾತ್ಕಾರದ ಮಾರ್ಗವೂ ಆಗಿದೆಯೆಂಬುದನ್ನು ನಿಸ್ಸಂದಿಗ್ಧವಾದ ಮಾತುಗಳಿಂದ ಸಾರುವುದರಲ್ಲಿ ಹಿಂದುಳಿದಿಲ್ಲವೆಂದು ಸೂಚಿಸುವುದೇ ಆಗಿದೆ.

* * * *

೨೧. ಭಾರತೀಯ ಶಾಸ್ತ್ರಗ್ರಂಥಗಳಲ್ಲಿ ಮಾನವತಾವಾದ ಶ್ರೀಮದ್ಭಾಗವತಂ

ಈ ಸಂದರ್ಭದಲ್ಲಿ, ಮೊದಲನೆಯದಾಗಿ ನಾನು ನಮ್ಮ ಶ್ರೇಷ್ಠ ಧಾರ್ಮಿಕ ಗ್ರಂಥವಾದ ಶ್ರೀಮದ್ ಭಾಗವತವನ್ನು ಈ ದೃಷ್ಟಿಕೋನದಿಂದ ಅಧ್ಯಯನ ಮಾಡಲು ಕೈಗೆತ್ತಿಕೊಳ್ಳುತ್ತೇನೆ. ಈ ಕೃತಿಯ ಲೇಖಕರು ಚಿರಂತನ ಕೀರ್ತಿವಂತರಾದ, ಮಹಾತ್ಮರಾದ ವೇದವ್ಯಾಸರೆಂಬುದಾಗಿ ಪ್ರಸಿದ್ಧವಾಗಿದೆ. ಇದೊಂದು ಸುಪ್ರಸಿದ್ಧವಾದ ಮತ್ತು ಜನಪ್ರಿಯವಾದ ಪುರಾಣವಾಗಿದೆ ಮತ್ತು ಇಂದಿಗೂ ವ್ಯಾಪಕವಾಗಿ ಓದಲಾಗುತ್ತಿದೆ ಮತ್ತು ದೊಡ್ಡ ಸಂಖ್ಯೆಯ ಶ್ರೋತೃಗಳಿಗೆ ಇದನ್ನು ವಿದ್ವಾಂಸರು ವ್ಯಾಖ್ಯಾನಿಸುತ್ತಿದ್ದಾರೆ. ನಮ್ಮ ನಾಡಿನಲ್ಲಿ ಶತಮಾನಗಳುದ್ದಕ್ಕೂ ಜನರ ಮನಸ್ಸುಗಳ ಮೇಲೆ ಪ್ರಚಂಡವಾದ ಪ್ರಭಾವವನ್ನು ಈ ಗ್ರಂಥ ಬೀರಿದೆ ಮತ್ತು ಭಾರತೀಯ ಸಂಸ್ಕೃತಿಯನ್ನು ರೂಪಿಸುವಲ್ಲಿ ಹಿರಿದಾದ ಪಾಲನ್ನು ಹೊಂದಿದೆ. ಈ ಧರ್ಮಗ್ರಂಥವನ್ನು ಓದಿ ಮತ್ತು ಅದರ ಸ್ಫೂರ್ತಿದಾಯಕ ಚಿಂತನೆಯಿಂದ ಸಂಪೂರ್ಣ ಆರ್ದ್ರಗೊಂಡವರಾದ ಚೈತನ್ಯ ಮಹಾಪ್ರಭುಗಳಂತಹ ಮಹಾತ್ಮರು ಶ್ರೇಷ್ಠ ಸಂತರಾಗಿ ಮತ್ತು ಧಾರ್ಮಿಕ ನಾಯಕರಾಗಿ ಪರಿವರ್ತನೆಗೊಂಡಿದ್ದಾರೆ. ಭಾರತದ ಎಲ್ಲ ಭಾಗಗಳಲ್ಲಿಯೂ ಅನೇಕ ಜನರ ಮನಸ್ಸು ಮತ್ತು ಹೃದಯಗಳನ್ನು ಬೆಳಗಿರುವ ಆಧ್ಯಾತ್ಮಿಕಜ್ಞಾನವನ್ನು ಈ ಪುರಾಣದಲ್ಲಿ ಕಾಣುತ್ತೇವೆ. ಈ ಶ್ರೇಷ್ಠ ಧರ್ಮಗ್ರಂಥದ ೯ನೆಯ ಸ್ಕಂಧದಲ್ಲಿ ರಂತಿದೇವನ ಸುಂದರವಾದ ಉಪಕಥೆಯನ್ನು ಮತ್ತು ಯಾತನೆಪಡುತ್ತಿರುವ ಮಾನವಕುಲಕ್ಕೆ ಪ್ರೇಮ ಮತ್ತು ಸೇವೆಯ ದಿವ್ಯವಾದ ಆದರ್ಶವನ್ನು ಕುರಿತಂತೆ ಆತನ ಶ್ರೇಷ್ಠವಾದ ಅಭಿಪ್ರಾಯ ಘೋಷಣೆಯನ್ನು ಕಾಣುತ್ತೇವೆ.

* * * *

೨೨. ದೊರೆ ರಂತಿದೇವನ ಕಥೆ

ತನ್ನ ರಾಜ್ಯದಲ್ಲಿ ವಿನಾಶಕಾರಿಯಾದ ಬರಗಾಲದಲ್ಲಿ ಅವಧಿಯಲ್ಲಿ ದೊರೆ ರಂತಿದೇವ ತನ್ನ ಸಮಸ್ತ ಐಶ್ವರ್ಯವನ್ನು ಹಸಿದವರಿಗೆ ಮತ್ತು ವಿಪತ್ತಿಗೊಳಗಾದವರಿಗೆ ಆಹಾರವೊದಗಿಸಲು ಖರ್ಚು ಮಾಡಿದ. ತನ್ನ ಜನರ ಯಾತನೆಗಳಿಂದ ತೀವ್ರವಾಗಿ ನೊಂದ ರಾಜನು ಪ್ರಾಯಶ್ಚಿತ್ತರೂಪವಾಗಿ ನಲವತ್ತೆಂಟು ದಿನಗಳವರೆಗೆ ಉಪವಾಸವನ್ನು ಕೈಕೊಂಡ ಮತ್ತು ಆ ಅವಧಿಯಲ್ಲಿ ಆಹಾರವನ್ನಾಗಲಿ ಅಥವಾ ನೀರನ್ನಾಗಲಿ ಆತ ತೆಗೆದುಕೊಳ್ಳಲಿಲ್ಲ. ನಲವತ್ತೊಂಬತ್ತನೆಯ ದಿನ, ಹೆಚ್ಚು ಕಡಿಮೆ ಎಲ್ಲ ಹಸಿದರವನ್ನು ಮತ್ತು ವಿಪತ್ತಿಗೊಳಗಾದವರೆಲ್ಲರನ್ನೂ ಚೆನ್ನಾಗಿ ನೋಡಿಕೊಳ್ಳಲಾಗಿದೆಯೆಂದು ತೃಪ್ತಿಯುಂಟಾದ ಮೇಲೆ ಆತ ತನ್ನ ಉಪವಾಸವನ್ನು ಕೊನೆಗಾಣಿಸಲು ತೀರ್ಮಾನಿಸಿದ. ಒಂದು ತುತ್ತು ಆಹಾರ ಮತ್ತು ಒಂದು ಬಟ್ಟಲು ನೀರನ್ನು ತೆಗೆದುಕೊಳ್ಳುವ ಮೂಲಕ ಹಾಗೆ ಮಾಡಬೇಕೆಂದಿರುವಾಗಲೇ ಪುಲ್ಕಾಸನೆಂದು ಪುರಾಣದಲ್ಲಿ ಕರೆಯಲಾಗಿರುವ ಅಂತ್ಯಜನೊಬ್ಬನು ತನ್ನ ಬಾಯಾರಿಕೆಯನ್ನು ತೀರಿಸಿಕೊಳ್ಳಲು ನೀರನ್ನು ಬೇಡಿದ ಕರುಣಾಜನಕ ರೋದನವನ್ನು ಆಲಿಸಿದ. ರಾಜನು ಆಗ ತನ್ನ ಮಂತ್ರಿಗಳು ಮತ್ತು ಸಲಹೆಗಾರರ ಮಧ್ಯದಲ್ಲಿದ್ದ. ತನ್ನೆದುರಿಗಿದ್ದ ನೀರನ್ನು ಕುಡಿಯುವುದನ್ನು ನಿಲ್ಲಿಸಿದ ಆತ ನೀರಿನ ಬಟ್ಟಲನ್ನು ಪುಲ್ಕಾಸನಿಗೆ ನೀಡುವಂತೆ ಅಪ್ಪಣೆಮಾಡಿದ. ರಾಜನು ಕೈಕೊಂಡ ಈ ಆತ್ಮಘಾತಕ ಕಾರ್ಯವನ್ನು ಆತನ ಸುತ್ತಲಿದ್ದ ಜನರು ಆಕ್ಷೇಪಿಸಿದರು. ಹೆಚ್ಚು ಕಡಿಮೆ ನಲವತ್ತೆಂಟು ದಿನಗಳ ಸುದೀರ್ಘ ಉಪವಾಸದ ಬಳಿಕ ಒಬ್ಬ ಪುಲಸ್ಕನಿಗಾಗಿ ತನ್ನ ಜೀವವನ್ನು ತೊರೆಯುವ ಅಪಾಯವನ್ನು ಕೈಗೊಳ್ಳುವುದು ಆತನ ಮಟ್ಟಿಗೆ ಹೇಳುವುದಾದರೆ ಅತಿರೇಕದ ವರ್ತನೆಯೆಂದು ಅವರು ಸೂಚಿಸಿದರು. ತಕ್ಷಣವೇ ರಾಜನು ಆಹಾರದ ತುತ್ತನ್ನು ತೆಗೆದುಕೊಳ್ಳಲಾರಂಭಿಸಿದನು. ಆ ಆಹಾರಕ್ಕೂ ಅತಿಥಿಯೊಬ್ಬನು ಬಾಗಿಲ ಬಳಿ ಬಂದನು. ಈ ಹಂತದಲ್ಲಿ ರಂತಿದೇವ, ವ್ಯಾಸರು ಉಚಿತವಾದ ಮಾತುಗಳಲ್ಲಿ ದಾಖಲಿಸಿರುವ ಪ್ರಸಿದ್ಧವಾದ ಘೋಷಣೆಯನ್ನು ಮಾಡಿದ, "ನಾನು ಪರಮಾತ್ಮನಿಂದ ಎಂಟು ಶಕ್ತಿಗಳು ಅಥವಾ 'ಸಿದ್ಧಿ'ಗಳಿಂದೊಡಗೂಡಿದ ಪರಮಾನಂದವನ್ನು ಬೇಡುವುದಿಲ್ಲ. 'ಅಪುನರ್ಭವ' ಅಥವಾ ಜನನಗಳು ಮತ್ತು ಮರಣಗಳ ಚಕ್ರದ ನಿಲುಗಡೆಯನ್ನೂ ನಾನು ಲೆಕ್ಕಿಸುವುದಿಲ್ಲ. ನನ್ನ ಒಂದೇ ಅಭಿಲಾಷೆಯೆಂದರೆ ಎಲ್ಲ ಜೀವಿಗಳಲ್ಲಿಯೂ ನಾನು ಜೊತೆಗಿರಬೇಕು, ಅವರೊಂದಿಗೆ

ಯಾತನೆಯನ್ನನುಭವಿಸಬೇಕು ಮತ್ತು ಅವರನ್ನು ಸಂಕಟದಿಂದ ಮುಕ್ತಗೊಳಿಸಲು ಅವರ ಸೇವೆ ಮಾಡಬೇಕು."

ಮುಂದಿನ ಪದ್ಯದಲ್ಲಿ ಆತ ಮುಂದುವರಿದು ಹೀಗೆ ಹೇಳುತ್ತಾನೆ : 'ಹಸಿವು, ಬಾಯಾರಿಕೆ, ದಣಿವು, ಅಂಗಾಂಗಗಳಲ್ಲಿ ಶಕ್ತಿ ಕುಂದುವಿಕೆ, ಮಾನಸಿಕ ವ್ಯಥೆ, ಕ್ಷೀಣತೆ, ದುಃಖ, ನಿರಾಶೆ, ಭ್ರಮೆ– ದುರ್ದೆಸೆಗೀಡಾದ ನನ್ನ ಆತ್ಮದ ಈ ಎಲ್ಲ ಅಹಿತಕರ ಲಕ್ಷಣಗಳು ತೀವ್ರವಾದ ಬಾಯಾರಿಕೆಯಿಂದ ಸಂಕಟಪಡುತ್ತಿದ್ದ ವ್ಯಕ್ತಿಗೆ ನಾನು ನೀರನ್ನು ನೀಡಿದ್ದರಿಂದ ಕಣ್ಮರೆಯಾಗಿವೆ.'

ನ ಕಾಮಯೇಽಹಂ ಗತಿಮೀಶ್ವರಾಣಾಂ ಅಷ್ಟರ್ಧಿಯುಕ್ತಾಂ ಅಪುನರ್ಭವಂ ವಾ ।
ಆರ್ತಿಂ ಪ್ರಪದ್ಯೇಽಖಿಲದೇಹಭಾಜಾಂ ಅಂತಸ್ಥಿತೋ ಯೇನ ಭವಂತ್ಯದುಃಖಾಃ ॥
ಕ್ಷುತ್ತೃಟ್ ಶ್ರಮಃ ಗಾತ್ರಪರಿಶ್ರಮಶ್ಚ ದೈನ್ಯಂ ಕ್ಲಮಃ ಶೋಕವಿಷಾದಮೋಹಾಃ ।
ಸರ್ವೇ ನಿವೃತ್ತಾಃ ಕೃಪಣಸ್ಯ ಜಂತೋಃ ಜಿಜೀವಿಷೋಃ ಜೀವಜಲಾರ್ಪಣಾನ್ಮೇ ॥

(ಭಾಗವತ : ೯–೨೧, ೧೨–೧೩)

ಮೂರು ಲೋಕಗಳನ್ನು ಆಳುವ ತ್ರಿಮೂರ್ತಿಗಳು ಆತನ ಮುಂದೆ ಪ್ರತ್ಯಕ್ಷರಾದರು ಮತ್ತು ಆತನ ವೀರೋಚಿತ ತ್ಯಾಗವನ್ನೂ ಹಾಗೂ ಯಾತನೆಪಡುತ್ತಿರುವ ಸಹಮಾನವರಿಗೆ ಆತನ ಅನಂತವಾದ ದಯೆಯನ್ನೂ ಕೊಂಡಾಡಿದರು. ಈ ಉಪಕಥೆಯಿಂದ ಪ್ರಕಟಗೊಂಡಿರುವ ಮಾನವತಾವಾದದ ಆದರ್ಶಕ್ಕಿಂತಲೂ ಶ್ರೇಷ್ಠವಾದುದು ಮತ್ತು ಉನ್ನತವಾದುದು ಬೇರಾವುದೂ ಇರಲು ಸಾಧ್ಯವಿಲ್ಲ. ರಂತಿದೇವ ತನ್ನ ಸಹಮಾನವರ ಸಂಕಟವನ್ನು ಪರಿಹರಿಸಬಯಸಿದುದಷ್ಟೇ ಅಲ್ಲ, ಆತ ಅವರೊಂದಿಗೆ ತನ್ನನ್ನು ತಾನು ತಾದಾತ್ಮ್ಯಗೊಳಿಸಿಕೊಳ್ಳಲು ಮತ್ತು ಅವರ ಒಂದು ಭಾಗವೇ ಆಗಲು, ಅವರ ಯಾತನೆಯನ್ನು ಅನುಭವಿಸಲು ಮತ್ತು ತನ್ಮೂಲಕ ಅವರ ಸಂಕಟಮಯ ದುಃಸ್ಥಿತಿಯನ್ನು ಹಂಚಿಕೊಳ್ಳಲು ಬಯಸಿದ. ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಶ್ರೀಮದ್ಭಾಗವತದ ಈ ಶ್ರೇಷ್ಠವಾದ ಬೋಧನೆಯನ್ನು ತಮ್ಮ ಬಾಳಿನ ಸ್ಫೂರ್ತಿದಾಯಕ ಧ್ಯೇಯವಾಕ್ಯವನ್ನಾಗಿ ಅಳವಡಿಸಿಕೊಂಡರು. ತಮ್ಮ ಅನುಯಾಯಿಗಳ ಸ್ಫೂರ್ತಿ ಮತ್ತು ಮಾರ್ಗದರ್ಶನಕ್ಕಾಗಿ ಈ ಪದ್ಯವನ್ನು ತಾವು ಸ್ಥಾಪಿಸಿದ್ದ ಸಬರಮತಿಯ ಆಶ್ರಮದ ಮುಂಭಾಗದಲ್ಲಿ ಕೆತ್ತಿಸಿದರು. ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಬೃಹತ್ ರಾಷ್ಟ್ರೀಯ ಚಳವಳಿಯ ಮೂಲಭೂತ ಆಧಾರ ವಿದೇಶಿ ಆಳ್ವಿಕೆಯಿಂದ ತಮ್ಮ ದೇಶವಾಸಿಗಳ ಸಾತಂತ್ರ್ಯಕ್ಕಾಗಿ ಯಾತನೆ ಮತ್ತು ತ್ಯಾಗವೇ ಆಗಿತ್ತು. ರಂತಿದೇವನ ತ್ಯಾಗಗಳ ಮಾರ್ದನಿಯನ್ನು ನಾವು ಶ್ರೇಷ್ಠ ಆಂಗ್ಲಕುಲೀನ ಸರ್ ಫಿಲಿಪ್ ಸಿಡ್ನಿಯವರ ಬಗ್ಗೆ ಹೇಳಲಾಗಿರುವ ಕಥೆಯಲ್ಲಿ ಕೇಳುತ್ತೇವೆ. ಗಾಯಗೊಂಡು ಯುದ್ಧರಂಗದಲ್ಲಿ ಬಿದ್ದಿದ್ದ ಅವರು, ಬಹಳವಾದ ರಕ್ತಸ್ರಾವದಿಂದಲಾಗಿ ತೀವ್ರವಾದ ಬಾಯಾರಿಕೆಗೊಳಗಾದರು. ತಮ್ಮ

ಬಾಯಾರಿಕೆಯನ್ನು ತೀರಿಸಿಕೊಳ್ಳಲು ಒಂದು ಬಟ್ಟಲು ನೀರನ್ನು ಕೇಳಿದರು. ಆದರೆ, ತಮ್ಮ ಪಕ್ಕದಲ್ಲಿಯೇ ಅದೇ ಬಗೆಯ ದುಃಖದಾಯಕ ದುರವಸ್ಥೆಯಲ್ಲಿದ್ದ ಮತ್ತೊಬ್ಬ ಸೈನಿಕನನ್ನು ಗಮನಿಸಿದ ಸರ್.ಫಿಲಿಪ್ ತಾವೇ ಆ ನೀರನ್ನು ಕುಡಿಯದೆ, 'ನಿನ್ನ ಅಗತ್ಯ ನನಗಿಂತಲೂ ಹೆಚ್ಚಿನದು' ಎಂದು ನುಡಿಯುತ್ತ ಬಟ್ಟಲನ್ನು ಸೈನಿಕನಿಗೆ ನೀಡಿದರು.

ಈ ಕಥೆಯಲ್ಲಿ ಮೂರು ಮೂಲಭೂತ ಸತ್ಯಗಳು

ರಂತಿದೇವನ ಈ ಮಹಾಹೇಳಿಕೆ ಮಾನವ ಕುಲದ ಮಾರ್ಗದರ್ಶನಕ್ಕಾಗಿ ಮೂರು ಮೂಲಭೂತ ಸತ್ಯಗಳನ್ನು ಪ್ರಸ್ತುತಪಡಿಸುತ್ತಿದೆ :

(೧) ನೈತಿಕ ಶುದ್ಧೀಕರಣ ಮತ್ತು ನಮ್ಮ ಸೋದರರ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಎರಡೂ ಉದ್ದೇಶಕ್ಕಾಗಿ ಇತರರ ಯಾತನೆಯನ್ನು ಪರಿಹರಿಸುವ ಪರಮೋಚ್ಚ ಕರ್ತವ್ಯ.

(೨) ನೈತಿಕ ಶುದ್ಧೀಕರಣ ಮತ್ತು ದುಃಖದ ಹೊರೆಯನ್ನು ಇಳಿಸುವ ಈ ಎರಡೂ ಉದ್ದೇಶಗಳಿಗಾಗಿ ಇತರರ ಯಾತನೆಯಲ್ಲಿ ಭಾಗಿಯಾಗುವ ಸಿದ್ಧಾಂತ.

(೩) ಇತರರ ಯಾತನೆಯನ್ನು ಪರಿಹರಿಸುವ ಈ ಕರ್ತವ್ಯ ತನ್ನದೇ ಆತ್ಮೋದ್ಧಾರ ಅಥವಾ ಮೋಕ್ಷ ಅಥವಾ ಸಿದ್ಧಿಗಳು ಅಥವಾ ಪವಾಡಸದೃಶ ಶಕ್ತಿಗಳನ್ನು ಪಡೆಯುವುದಕ್ಕಿಂತಲೂ ಶ್ರೇಷ್ಠವಾದುದು.

ರಂತಿದೇವನ ಈ ಉದಾತ್ತ ಘೋಷಣೆ, ಮಾನವರ ಪಾಪಗಳಿಗಾಗಿ ಶಿಲುಬೆಯ ಮೇಲೆ ಪ್ರಭು ಏಸುಕ್ರಿಸ್ತನ ಯಾತನೆಗಳನ್ನು ಗಮನಿಸಿರುವ ಕ್ರೈಸ್ತ ಧರ್ಮದ ದೇವತಾಶಾಸ್ತ್ರಜ್ಞರು ತಿಳಿಸುವ ಪ್ರಾತಿನಿಧಿಕವಾದ ಮತ್ತು ತಾನೇ ವಿಧಿಸಿಕೊಂಡ ಶಿಕ್ಷೆಯ ಅಂಶವನ್ನು ಧ್ವನಿಸುವಂತಿದೆ. ಕ್ರೈಸ್ತ ಧರ್ಮದ ಧರ್ಮಶ್ರದ್ಧೆ ಆ ಯಾತನೆಗಳಲ್ಲಿ ಮಾನವರ ಪಾಪಮಯತೆಯನ್ನು ಕುರಿತಂತೆ ಪರಮಾತ್ಮನ ಕಡುದುಃಖದ ರಹಸ್ಯವನ್ನು ಕಾಣುತ್ತಿದೆ. ಆದರೂ ಕ್ರೈಸ್ತಧರ್ಮದ ಕೆಲವರು ಚಿಂತಕರು ಕ್ರಿಸ್ತನ ಯಾತನೆಗಳಲ್ಲಿ ಕೆಡುಕಿಗೆ ಕೆಡುಕನ್ನು ಹಿಂದಿರುಗಿಸದೆ ತನ್ನನ್ನು ತಾನೇ ಭಗವಂತನಿಗೆ ವಶಪಡಿಸಿಕೊಳ್ಳುವ ಪ್ರೇಮದ ಪರಮೋಚ್ಚ ಉದಾಹರಣೆಯನ್ನು ಕಾಣುವಂತಿದೆ.

ದಧೀಚಿ ಮಹರ್ಷಿಯ ಕಥೆ

ಬಡವರು ಮತ್ತು ಯಾನತೆಗೊಳಗಾಗಿರುವವರ ಸಲುವಾಗಿ ಸೇವೆ ಮತ್ತು ತ್ಯಾಗದ ಶ್ರೇಷ್ಠ ಆದರ್ಶಗಳನ್ನು ಅತ್ಯಂತ ಸ್ಪಷ್ಟವಾಗಿ ನಿರೂಪಿಸುವ ಮತ್ತೂ ಎರಡು ಉಪಕಥೆಗಳು ಶ್ರೀಮದ್ಭಾಗವತದಲ್ಲಿವೆ. ಒಂದು, ತಪಸ್ಸಿನಲ್ಲಿ ಗಾಢವಾಗಿ ಮಗ್ನನಾಗಿದ್ದ

ಮಹರ್ಷಿ ದಧೀಚಿಯ ಕಥೆ. ಆಗಿನ ಕಾಲಾವಧಿಯಲ್ಲಿ ದೇವಲೋಕವು ದಾಳಿ ಮಾಡುತ್ತಲಿದ್ದ ರಾಕ್ಷಸರ ವಿರುದ್ಧವಾದ ಮಹಾ ಹೋರಾಟದ ತೊಂದರೆಯಲ್ಲಿ ಸಿಲುಕಿತ್ತು. ಈ ದಾಳಿಯ ಅಲೆಯನ್ನು ತಡೆಯುವ ಕೆಲಸ ದೇವಲೋಕದ ದೊರೆ ಇಂದ್ರನದಾಗಿತ್ತು. ಇಂದ್ರನು ಅನೇಕ ಯುದ್ಧಗಳನ್ನು ಕೈಗೊಂಡರೂ ದಾಳಿಯನ್ನು ತಡೆಯುವುದರಲ್ಲಿ ಸಫಲನಾಗಲಿಲ್ಲ. ಮಹಾಮುನಿ ದಧೀಚಿಯ ಬೆನ್ನುಮೂಳೆ ಯಿಂದ ತಯಾರಿಸಿದ ಬಿಲ್ಲೊಂದನ್ನು ಆತ ಅನುಗೊಳಿಸಿದ್ದೇ ಆದರೆ ಶತ್ರುಗಳೊಂಡನೆ ಸಫಲವಾಗಿ ಹೋರಾಡಲು ಅಗತ್ಯವಾದ ಶಕ್ತಿಗಳನ್ನು ಪಡೆಯಬಹುದೆಂದೂ ಮತ್ತು ದೇವಲೋಕವನ್ನು ರಾಕ್ಷಸರಿಂದ ಕಾಪಾಡಬಹುದೆಂದೂ ಋಷಿಗಳು ಆತನಿಗೆ ಸಲಹೆ ನೀಡಿದರು. ಅಂತಹ ಬೇಡಿಕೆಯೊಂದಿಗೆ ಮಹರ್ಷಿಯ ಬಳಿಗೆ ತೆರಳಲು ಪ್ರತಿಯೊಬ್ಬರೂ ಭಯಗೊಂಡಿರಲಾಗಿ, ಇಂದ್ರ ಆತನಲ್ಲಿಗೆ ಹೋಗುವ ಮತ್ತು ಆ ವಿಷಯದಲ್ಲಿ ಆತನ ಸಹಾಯವನ್ನು ಕೋರುವ ಧೈರ್ಯವಹಿಸಿದನು. ತನ್ನದೇ ಸಂಕಟಕರ ಪರಿಸ್ಥಿತಿಯನ್ನು ಮತ್ತು ದೇವತೆಗಳ ಅಪಾಯಕರವಾದ ಸ್ಥಿತಿಯನ್ನೂ ತಿಳಿಯಪಡಿಸಿ, ತನ್ನ ಕಡೆಯಿಂದ ಇಂತಹ ಅಸಾಧಾರಣವಾದ ಬೇಡಿಕೆಗೆ ಕಾರಣವನ್ನೂ ಮುಂದಿರಿಸಿ ಆತನನ್ನು ಬೇಡಿಕೊಂಡನು. ವೇದವ್ಯಾಸರು ಅತ್ಯಂತ ವಿವೇಚನೆಯಿಂದ ದೇವತೆಗಳ ಬಾಯಿಂದ ಪ್ರಶ್ನೆ ಮಾಡಿಸುತ್ತಾರೆ. 'ಕರುಣೆತುಂಬಿದ ವ್ಯಕ್ತಿಗಳು ಬಿಟ್ಟುಕೊಡದಿರುವ ವಸ್ತುವಾವುದಾದರೂ ಇದೆಯೇನು? ಖಂಡಿತವಾಗಿಯೂ ಪ್ರಪಂಚ ಸ್ವಾರ್ಥಪರವಾದುದು ಮತ್ತು ಅದು ಇತರರ ಸಂಕಟವನ್ನು ಅರ್ಥಮಾಡಿಕೊಳ್ಳುವುದಿಲ್ಲ'.

ಕಿಂ ನು ದುಸ್ತ್ಯಜಂ ಬ್ರಹ್ಮನ್ ಪುಂಸಾಂ ಭೂತಾನುಕಂಪಿನಾಂ ।
ಭವದ್ವಿಧಾನಾಂ ಮಹತಾಂ ಪುಣ್ಯಶ್ಲೋಕೇಡ್ಯಕರ್ಮಣಾಮ್ ॥
ನೂನಂ ಸ್ವಾರ್ಥಪರೋಲೋಕಃ ನ ವೇದ ಪರಸಂಕಟಮ್ ॥

(*ಶ್ರೀಮದ್ಭಾವಗತ* ೬-೧೦, ೪೪೪)

ದಧೀಚಿ ತಕ್ಷಣವೇ ದೇವತೆಗಳ ಈ ಮಾತುಗಳಿಗೆ ಪ್ರತಿಕ್ರಿಯೆ ನೀಡಿದನು. ಆತ ನುಡಿದ 'ಕರುಣೆಯಿಂದ ಪ್ರಚೋದಿತನಾದ ಮತ್ತು ಈ ನಶ್ವರ ಶರೀರವನ್ನು ಹೊಂದಿದವನಾದ ವ್ಯಕ್ತಿಯೊಬ್ಬನು ಧರ್ಮ ಅಥವಾ ಕೀರ್ತಿಯನ್ನು ಬಯಸದಿದ್ದರೆ ಆತ ಮರಣದಂತಹ ನಿರ್ಜೀವ ವಸ್ತುಗಳಿಂದಲೂ ಕರುಣೆಗೆ ಪಾತ್ರನಾಗಬೇಕಾಗುತ್ತದೆ.'

ಯೋಽಧ್ರುವೇಣಾತ್ಮನಾ ನಾಥ ನ ಧರ್ಮಂ ನ ಯಶಃ ಪುಮಾನ್ ।
ಈ ಹೇತ ಭೂತದಯಯಾ ಸ ಶೋಚ್ಯಃ ಸ್ಥಾವರೈರಪಿ ॥

(*ಶ್ರೀಮದ್ಭಾಗವತ,* ೬-೧೦-೮)

ಆ ಬಳಿಕ ದಧೀಚಿಯು ದೇವೇಂದ್ರನ ಪ್ರಾರ್ಥನೆಗೆ ಮೌನದಿಂದಲೇ ಸಮ್ಮತಿ ನೀಡಿದನು. ಪ್ರಬಲವಾದ ವಜ್ರಾಯುಧವೆಂಬ ಬಿಲ್ಲನ್ನು ತಯಾರಿಸಲು ತನ್ನ

ಬೆನ್ನುಮೂಳೆಯನ್ನು ಬಳಸಿಕೊಳ್ಳಲು ಸಾಧ್ಯವಾಗುವಂತೆ ಆತ ತನ್ನ ಯೋಗಶಕ್ತಿಗಳಿಂದ ಪ್ರಾಣತೊರೆದನು. ನಮ್ಮ ಪುರಾಣಗಳಲ್ಲಿ ದಧೀಚಿಯನ್ನು ನಮ್ಮ ಪೂರ್ವಿಕರಲ್ಲಿ ಒಬ್ಬನೆಂದು ಪರಿಗಣಿಸಲಾಗಿದೆ ಮತ್ತು ಈ ಶ್ರೇಷ್ಠವಾದ ದೇಶದಲ್ಲಿ, ಯಾತನೆಗೊಳಗಾಗಿರುವವರಿಗೆ ಅವರ ಸಂಕಟದಿಂದ ಮುಕ್ತಗೊಳಿಸುವುದಕ್ಕಾಗಿ ತ್ಯಾಗ ಮಾಡಿದ ಸುಪ್ರಸಿದ್ಧ ನಿದರ್ಶನವಾಗಿ ಸಹ ಬೆಳಗುತ್ತಿದ್ದಾನೆ. ಈ ಪ್ರಪಂಚದಲ್ಲಿ ಉದಾತ್ತ ಮನುಸ್ಕರಾದವರಿಗೆ ಯಾವುದೇ ತ್ಯಾಗ ತೀರ ಮಹತ್ತಾದುದೇನೂ ಅಲ್ಲ. ವಾಸ್ತವವಾಗಿ ದಧೀಚಿಯನ್ನು ಈ ಮಹಾದೇಶವನ್ನು ಅಲಂಕರಿಸಿರುವ ಸಂತರ ಉಜ್ವಲವಾದ ಗುಂಪಿನಲ್ಲಿ ಪ್ರಾರಂಭ ಬಿಂದುವೆಂದು ಪರಿಗಣಿಸಬಹುದು. ಈ ಪ್ರಸಿದ್ಧವಾದ ಗೌರವ ಪಂಕ್ತಿದ ಧೀಚಿಯಿಂದ ಮಹಾತ್ಮಾ ಗಾಂಧಿಯವರವರೆಗೆ ಹರಿದುಬಂದಿದೆ ಮತ್ತು ಅದು ಮುಕ್ತಾಯಗೊಂಡಿಲ್ಲವೆಂಬ ಭರವಸೆಯನ್ನು ತಳೆಯೋಣ.

ಮಹಾಬಲಿಯ ಕಥೆ

ಇದೇ ಕೃತಿಯಲ್ಲಿ ಪ್ರಸಿದ್ಧವಾದ ಚಕ್ರವರ್ತಿ ಮಹಾಬಲಿಯ ರೋಮಾಂಚಕಾರಿಯಾದ ಕಥೆಯನ್ನು ನಾವು ಗಮನಿಸುತ್ತೇವೆ. ಈ ಚಕ್ರವರ್ತಿ ಒಂದು ಮಹಾ ಯಜ್ಞವನ್ನಾಚರಿಸಿದ. ಆ ಯಜ್ಞದಲ್ಲಿ ಆತ ತನ್ನ ಬಳಿಗೆ ಬಂದವರೆಲ್ಲರೂ ತನ್ನಿಂದ ಏನನ್ನೇ ಬಯಸಿದರೂ ಅದನ್ನು ಉದಾರವಾಗಿ ದಾನ ಮಾಡುವುದಾಗಿ ಶಪಥ ಮಾಡಿದ. ಭಗವಂತನಾದ ಮಹಾವಿಷ್ಣು ಕುಬ್ಜರೂಪದ ಬ್ರಹ್ಮಚಾರಿಯ ವೇಷದಲ್ಲಿ ಆತನನ್ನು ಸಮೀಪಿಸಿದ ಮತ್ತು ತನ್ನದೇ ಆದ ಪುಟ್ಟ ಹೆಜ್ಜೆಗಳಿಂದ ಅಳೆಯಬೇಕಾಗಿದ್ದ ಭೂಮಿಯ ಮೂರು ಅಡಿಗಳನ್ನು ದಾನವಾಗಿ ಬೇಡಿದ. ಚಕ್ರವರ್ತಿ ಬಲಿಯ ಗುರು ಶುಕ್ರಾಚಾರ್ಯ ಬ್ರಹ್ಮಚಾರಿ ಯಾರೆಂಬುದನ್ನೂ ಮತ್ತು ಯಾವ ಉದ್ದೇಶಕ್ಕಾಗಿ ಆತನು ಅಂಥ ದಾನವನ್ನು ಕೇಳುತ್ತಿರುವನೆಂಬುದನ್ನೂ ಕಂಡುಹಿಡಿದ. ಆತ ರಾಜನು ಉದ್ದೇಶಿಸಿದ್ದ ಔದಾರ್ಯದ ಕಾರ್ಯವನ್ನು ತಪ್ಪಿಸಲು ಪ್ರಯತ್ನಮಾಡಿದ. ಬ್ರಹ್ಮಚಾರಿಯು ರಾಜನ ಸ್ಥಳ, ಅಧಿಕಾರ ಮತ್ತು ಐಶ್ವರ್ಯವನ್ನು ವಶಪಡಿಸಿಕೊಂಡು ಅವುಗಳನ್ನು ಇಂದ್ರನಿಗೆ ಒಪ್ಪಿಸುವನೆಂದು ಆಚಾರ್ಯನು ಸೂಚಿಸಿದ. ಆದರೆ, ರಾಜ ತನ್ನ ಶಪಥಕ್ಕೆ ನಿಷ್ಠನಾಗಿ ಉಳಿದ ಮತ್ತು ಈ ಮುಂದಿನ ಅರ್ಥಗರ್ಭಿತವಾದ ಮಾತುಗಳಿಂದ ದಾನದ ಅತ್ಯುಚ್ಚ ಆದರ್ಶವನ್ನು ಮುಂದಿರಿಸಿದ: 'ಧರ್ಮಿಷ್ಠ ವ್ಯಕ್ತಿಗಳಾದ ದಧೀಚಿ ಮತ್ತು ಶಿಬಿಯಂತಹವರು ತೊರೆಯಲು ಕಷ್ಟವಾದ ತಮ್ಮದೇ ಜೀವನಗಳನ್ನು ಒತ್ತೆಯಿಟ್ಟಾದರೂ ಇತರ ಜೀವಿಗಳಿಗೆ ಒಳ್ಳೆಯದನ್ನು ಮಾಡುತ್ತಾರೆ. ಹಾಗಿರುವಾಗ ಭೂಮಿ ಮತ್ತು ಅಂತಹ ಇತರ ವಸ್ತುಗಳ ಬಗ್ಗೆ ಆತಂಕವೇಕಿರಬೇಕು? ಬೆನ್ನನ್ನು ತಿರುಗಿಸದೇ ಯುದ್ಧರಂಗದಲ್ಲಿ ಹೋರಾಡುವ

ಮನುಷ್ಯರು ತಮ್ಮ ಪ್ರಾಣಗಳನ್ನು ತೊರೆಯುವುದನ್ನು ಕಾಣುವುದು ಸರ್ವೇಸಾಮಾನ್ಯ ಸಂಗತಿ. ಆದರೆ ಯೋಗ್ಯನಾದ ವ್ಯಕ್ತಿಗೆ ದಾನವನ್ನು ಕೊಡುವಂತಹವರನ್ನು ಕಾಣುವುದು ವಿರಳ:

> ಶ್ರೇಯಃ ಕುರ್ವಂತಿ ಭೂತಾನಾಂ ಸಾಧವೋ ದುಸ್ತ್ಯಜಾಸುಭಿಃ
> ದಧ್ಯಙ್ ಶಿಬಿಪ್ರಭೃತಯಃ ಕೋ ವಿಕಲ್ಪೋ ಧರಾದಿಷು ॥

(*ಶ್ರೀಮದ್ಭಾಗವತಂ* ೮.೨೦.೭)

ಈ ಮಾತಿನ ಅರ್ಥವೇನೆಂದರೆ, ಪೂರ್ವಾಲೋಚನೆಯಿಲ್ಲದೆಯೇ ಅಥವಾ ವೀರೋಚಿತವಾದ ಕೋಪದ ಆವೇಶದಲ್ಲಿ ವ್ಯಕ್ತಿಯೊಬ್ಬನು ಯುದ್ಧರಂಗದಲ್ಲಿ ಶತ್ರುವಿನೊಡನೆ ಹೋರಾಡುತ್ತ ತನ್ನ ಪ್ರಾಣಗಳನ್ನು ಒಪ್ಪಿಸಬಹುದು. ಆದರೆ ಪ್ರಶಾಂತವಾದ ಘಳಿಗೆಯಲ್ಲಿ ಸಾಮಾನ್ಯವಾದ ಜೀವನದಲ್ಲಿ ಆತ ಸಹಾಯ ಮತ್ತು ನೆರವಿಗಾಗಿ ತನ್ನ ಬಳಿಗೆ ಬಂದ ಯೋಗ್ಯನಾದ ವ್ಯಕ್ತಿಗೆ ತನ್ನ ಐಶ್ವರ್ಯವನ್ನು ಬಿಟ್ಟುಕೊಡುವುದಿಲ್ಲ. ಹೀಗೆ ಹೇಳುತ್ತ, ಬಲಿಚಕ್ರವರ್ತಿ ತನ್ನ ಗುರುವಿನ ಆಕ್ಷೇಪಣೆಯ ಹೊರತಾಗಿಯೂ ತನ್ನ ಶಪಥಕ್ಕೆ ಬದ್ಧನಾಗಿ ನಿಂತ, ತನ್ನ ಸಾಮ್ರಾಜ್ಯವನ್ನು ಕಳೆದುಕೊಂಡ, ದುಃಖಕ್ಕೊಳಗಾದ. ಇಲ್ಲಿ ಮತ್ತೊಮ್ಮೆ ನಾವು ದಾನದ ಗೌರವಯುತ ಆದರ್ಶವನ್ನು ಅನ್ವೇಷಿಸಿದ ಮತ್ತು ಅದಕ್ಕಾಗಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿದ ವ್ಯಕ್ತಿಯೊಬ್ಬನ ಉದಾಹರಣೆಯನ್ನು ಕಾಣುತ್ತೇವೆ. ಈ ಹಿಂದೆ ಉಲ್ಲೇಖಿಸಿರುವ ಬಲಿಚಕ್ರವರ್ತಿಯ ಐತಿಹಾಸಿಕ ಹೇಳಿಕೆಯಲ್ಲಿ ದೊರೆಯು ದಧೀಚಿ ಮತ್ತು ಶಿಬಿಯ ಉದಾಹರಣೆಯನ್ನು ನೀಡಿದ್ದಾನೆ.

ಶಿಬಿ ಚಕ್ರವರ್ತಿಯ ಕಥೆ

ಶಿಬಿ ಚಕ್ರವರ್ತಿಯ ಕಥೆ ಸಹ ಒಂದು ಉಜ್ವಲವಾದ ಮತ್ತು ರೋಮಾಂಚಕಾರಿಯಾದ ಕಥೆ. ಮಹಾಭಾರತದ ಅರಣ್ಯ ಪರ್ವದ ೧೩೦ ಮತ್ತು ೧೩೧ನೆಯ ಅಧ್ಯಾಯಗಳಲ್ಲಿ ಅದು ಕಂಡುಬರುತ್ತದೆ. ಶಿಬಿಯು ಉನ್ನತವಾದ ಶೀಲವನ್ನು ಪರೀಕ್ಷಿಸಲು ಇಂದ್ರ ಗಿಡುಗನ ರೂಪವನ್ನು ತಳೆದು ಪಾರಿವಾಳವೊಂದನ್ನು ಕೊಲ್ಲಲು ಬೆನ್ನಟ್ಟಿದ. ಘೋರವಾದ ಸಂಕಟದಲ್ಲಿ ಸಿಲುಕಿದ ಪಾರಿವಾಳ ರಾಜನ ಬಳಿಗೆ ಬಂದು ಆತನ ರಕ್ಷಣೆಯನ್ನು ಬೇಡಿತು. ತೀವ್ರವಾದ ಕರುಣೆಯಿಂದ ಕರಗಿಹೋದ ಶಿಬಿ ತಕ್ಷಣವೇ ನೆರವಿನ ಶಪಥಮಾಡಿದ. ಪಾರಿವಾಳವನ್ನು ಬೆನ್ನಟ್ಟಿದ ಗಿಡುಗ ಶಿಬಿಯ ಬಳಿಗೆ ಬಂದು ತಾನು ತನ್ನ ಸಹಜ ಆಹಾರವಾದ ಪಾರಿವಾಳವನ್ನು ಬೆನ್ನಟ್ಟುತ್ತಿರುವುದಾಗಿ ರಾಜನೊಂದಿಗೆ ಆಕ್ಷೇಪಣೆಯೆತ್ತಿತು. ಅದು ಪಾರಿವಾಳವನ್ನು ತನಗೆ ಹಿಂದಕ್ಕೆ ಕೊಡುವಂತೆ ಚಕ್ರವರ್ತಿಯನ್ನು ನಿರ್ಬಂಧಪಡಿಸಿತು. ಆದರೆ, ಚಕ್ರವರ್ತಿಯು ತಾನಾಗಲೇ ಅದರ ಪ್ರಾಣವನ್ನು ಕಾಪಾಡುವುದಾಗಿ ಶಪಥ ಮಾಡಿರುವುದಾಗಿಯೂ, ಆದ್ದರಿಂದಲೇ ಈ ಬೇಡಿಕೆಗೆ ಒಪ್ಪಿಗೆ ನೀಡಲು ತಾನು

ಅಸಮರ್ಥನಾಗಿರುವುದಾಗಿಯೂ ಹೇಳಿದ. ಆ ಕೂಡಲೇ ಗಿಡುಗವು ತನ್ನ ಹಸಿವನ್ನು ನೀಗಿಸುವುದಕ್ಕಾಗಿ ಪಾರಿವಾಳದ ತೂಕಕ್ಕೆ ಸರಿದೂಗುವಷ್ಟು ತನ್ನದೇ ಮಾಂಸವನ್ನು ಕೊಡುವಂತೆ ರಾಜನನ್ನು ಕೇಳಿತು. ಶಿಬಿಯು ಮನಃಪೂರ್ವಕವಾಗಿ ಹಾಗೆ ಮಾಡಲೊಪ್ಪಿ ತನ್ನ ತೊಡೆಯ ಭಾಗವೊಂದನ್ನು ಕತ್ತರಿಸಲಾರಂಭಿಸಿ ಪಾರಿವಾಳದ ಎದುರುಗಡೆ ತಕ್ಕಡಿಯಲ್ಲಿ ತೂಕಮಾಡತೊಡಗಿದನು. ಆದರೆ ಪಾರಿವಾಳದ ತೂಕವು ಹೆಚ್ಚಾಗಿತ್ತು. ಆ ಕೂಡಲೇ ಚಕ್ರವರ್ತಿಯು ತನ್ನ ದೇಹದಲ್ಲಿನ ಇತರ ಭಾಗಗಳ ಮಾಂಸವನ್ನು ಕತ್ತರಿಸಲು ಮುಂದಾಗಿ ತಕ್ಕಡಿಯಲ್ಲಿ ಅವುಗಳನ್ನು ತೂಗಿದನು. ಆದರೂ ಪಾರಿವಾಳವು ತೂಕದಲ್ಲಿ ಹೆಚ್ಚಾಗಿರುವುದು ಕಂಡುಬಂದಿತು. ಅಂತಿಮವಾಗಿ ರಾಜನು ತನ್ನ ಇಡೀ ದೇಹದ ಮಾಂಸವನ್ನು ಗಿಡುಗನಿಗೆ ಸಮರ್ಪಿಸುತ್ತ ತಕ್ಕಡಿಯ ತಟ್ಟೆಯಲ್ಲಿ ತಾನೇ ಕುಳಿತನು. ಅಂತಿಮ ಘಟ್ಟವನ್ನು ತಲುಪಿದಾಗ ಗಿಡುಗವು ತನ್ನ ಇಂದ್ರನ ನಿಜರೂಪವನ್ನು ತಳೆದು ಪಾರಿವಾಳಕ್ಕಾಗಿ ಆತನು ಮಾಡಿದ ವೀರೋಚಿತವಾದ ತ್ಯಾಗಕ್ಕಾಗಿ ರಾಜನನ್ನು ಕೊಂಡಾಡಿ 'ಪ್ರಪಂಚವಿರುವವರೆಗೆ ನಿನ್ನ ಕೀರ್ತಿ ಉಳಿದಿರುತ್ತದೆ' ಎಂದು ನುಡಿಯಿತು.

ಚಕ್ರವರ್ತಿ ಶಿಬಿಯ ಕಥೆ ಅನೇಕ ರೀತಿಗಳಲ್ಲಿ ಅನನ್ಯವಾದುದು. ವ್ಯಕ್ತಿಯೊಬ್ಬನು ಪಕ್ಷಿಗಳು ಮತ್ತು ಪ್ರಾಣಿಗಳೂ ಸೇರಿದಂತೆ ಸಕಲ ಜೀವಿಗಳ ಬಗೆಗೂ ತಳೆಯಬೇಕಾದ ಅಪಾರವಾದ ಪ್ರೀತಿಯು ನಿರೂಪಿತವಾಗಿರುವುದನ್ನು ಮಾತ್ರವೇ ಅಲ್ಲದೆ, ಯಾರೇ ರಕ್ಷಣೆಯನ್ನು ಬಯಸಿದರೂ ತನ್ನದೇ ಜೀವದ ಅಪಾಯವನ್ನೂ ಲೆಕ್ಕಿಸದೆ ರಕ್ಷಣೆ ನೀಡುವುದು ಪರಮೋಚ್ಚ ಕರ್ತವ್ಯವೆಂಬುದನ್ನು ನಾವು ಕಾಣುತ್ತೇವೆ.

ಈ ಕರ್ತವ್ಯ, ಕಥೆಯಲ್ಲಿ ಬರುವ ಪಕ್ಷಿಯಂತೆ ತನ್ನದೇ ಜಾತಿಯಿಂದ ಭಿನ್ನವಾಗಿರುವ ಜೀವಿಗಳಿಗೂ ಸಂಬಂಧಿಸುತ್ತದೆ. ಇಂದ್ರನು ನುಡಿದಿರುವಂತೆ ನ್ಯಾಯವಾಗಿಯೇ ಚಕ್ರವರ್ತಿ ಶಿಬಿಯ ಕೀರ್ತಿ ನಮ್ಮ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಮಾತ್ರವೇ ಅಲ್ಲ, ಆದರೆ ತಮಿಳು ಸಾಹಿತ್ಯದಲ್ಲಿಯೂ ಮತ್ತು ನಮ್ಮ ಇತರ ಪ್ರಾಂತೀಯ ಭಾಷೆಗಳ ಸಾಹಿತ್ಯದಲ್ಲಿಯೂ ಪವಿತ್ರವಾದುದೆಂದು ಪರಿಗಣಿತವಾಗಿದೆ. 'ಪುರನಾನೂರು' ಎಂಬ ಪ್ರಸಿದ್ಧವಾಗಿರುವ ತಮಿಳಿನ ಪ್ರಾಚೀನ ಮೇರುಕೃತಿಯಲ್ಲಿ ದೊರೆ ಶಿಬಿ ಮತ್ತು ಪಾರಿವಾಳಕ್ಕಾಗಿ ಆತನು ಕೈಕೊಂಡ ವೀರೋಚಿತ ತ್ಯಾಗದ ಉಲ್ಲೇಖವನ್ನು ನಾವು ಕಾಣುತ್ತೇವೆ.

ಪುರವಿನ್ ಅಲ್ಲಲ್ ಸೊಲ್ಲಿಯ ಕರೆಯಡಿ
ಯಾನ್ಯೆವಾಲ್ ಮರುಪ್ಪುಯರಿಂದ
ವೆನ್ ಕಡೈಕ್ಕೋಲ್ ಸಿರ್‍ಯೆತ್ತುಲಾ
ಅಂಬುಕ್ಕೋನ್ ಮರುಕ ॥

ಅಲ್ಲಿ, ಒಬ್ಬ ವಿಶಿಷ್ಟ ದೊರೆಯ ಬಗ್ಗೆ ಹೇಳಿರುವುದೇನೆಂದರೆ ಆತ ಪಕ್ಷಿಯ ಸಂಕಟವನ್ನು ಪರಿಹರಿಸಿದ ಮಹಾಯೋಧನ ಸಂತತಿಯವನಾಗಿದ್ದ ಎಂದು.

ಪುಲ್ಲುರೈ ಪುಂಕನ್ ತೀರ್ತವೆಲ್ವೇಲ್
ಸಿನಂ ಕೊಲುತ್ತಾನ್ಯೆ ಸೆನ್ಬಿಯನ್ ಮರುಕ ॥

(ಪುರನಾನೂರು ೩೭, ೫–೬)

ವಾಸ್ತವವಾಗಿ 'ಸೆನ್ಬಿಯನ್' ಎಂಬ ಪದದ ಅರ್ಥ ಚೋಳ ಮತ್ತು ಇದು 'ಶಿಬಿ' ಎಂಬ ಪದದ ಬದಲಾದ ರೂಪ. ತನ್ಮೂಲಕ ಇದು ಚೋಳ ಮಹಾತ್ಮಾ ಶಿಬಿಯ ಸಂತತಿಯವನು ಎಂಬ ಅರ್ಥವನ್ನು ನೀಡುತ್ತಿದೆ. ಇದೇ ಗ್ರಂಥದ ಮತ್ತೊಂದು ಪದ್ಯದಲ್ಲಿ ರಾಜನು ಪಕ್ಷಿಯ ಸಂಕಟವನ್ನು ಪರಿಹರಿಸುವ ಉದ್ದೇಶದಿಂದ ತನ್ನ ಇಡೀ ದೇಹವನ್ನೇ ತೂಗುವುದಕ್ಕಾಗಿ ತಕ್ಕಡಿಯಲ್ಲಿರಿಸಿದ ವ್ಯಕ್ತಿಯ ಸಂತತಿಯವನು ಎಂದು ಹೇಳಲಾಗಿದೆ. 'ಗಿಡುಗನ ಬಿಗಿಯಾದ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಒಂದು ಸಣ್ಣ ಪಕ್ಷಿಯನ್ನು ಕಾಪಾಡಲು ತಕ್ಕಡಿಯಲ್ಲಿ ತನ್ನನ್ನೇ ಇರಿಸಿಕೊಳ್ಳುವುದರ ಮೂಲಕ ಮೇರೆ ಮೀರಿದ ತ್ಯಾಗದ ಕಾರ್ಯವನ್ನೆಸಗಿದ' ದೊರೆಯ ಕಲಿತನದ ಬಗೆಗೂ ಉಲ್ಲೇಖವನ್ನು ಮಾಡಲಾಗಿದೆ.

ಅವಿರ್ಸಡ್ಯೆ ಮುನಿವರುಂ ಮರುಲ ಕೂಡುಂಜರ್‍ಯೆ ಕೂರ್ ಉಕಿರ್
ಪರುಂದಿನ್ ಎರು ಕುರಿತ್ತು ಓರಿಇ ತನ್ನೆಹಂ ಪುಕ್ಕ ।
ಕುರುನಡ್ಯೆ ಪುರವಿನ್ ತಬಿದಿ ಅಂಜಿ ಚೀರ್‍ಯೆಪುಕ್ಕ
ವರ್‍ಯೆಯೂ ಈಗ್ಯೆ ಉರವೋನ್ ಮರುಕ ॥

ತಮಿಳಿನ ಅತ್ಯಂತ ಪ್ರಸಿದ್ಧವಾದ ಮೇರುಕೃತಿಗಳಲ್ಲೊಂದಾದ 'ಸಿಲಪ್ಪದಿಕಾರಂ'ನಲ್ಲಿ ಶಿಬಿ ಚಕ್ರವರ್ತಿಯ ಕಲಿತನವನ್ನು ಮತ್ತೊಮ್ಮೆ ಈ ಮುಂದಿನಂತೆ ಉಲ್ಲೇಖಿಸಲಾಗಿದೆ:

ಎಲ್ಲರ್ ಸಿರಪ್ಪಿನ್ ಇಮ್ಯೆಯವರ್ ವಿಯಪ್ಪ
ಪುಲ್ಲರು ಪುಂಕನ್ ತೀರ್ತೋನ್ ॥

(೧) 'ದೇವತೆಗಳೂ ಅಚ್ಚರಿಗೊಳ್ಳುವಂತೆ ಪಕ್ಷಿಯ ಸಂಕಟವನ್ನು ಪರಿಹರಿಸಿದವನು'.

(೨) 'ತನ್ನ ಮಾಂಸವನ್ನು ಕತ್ತರಿಸಿದವನು ಮತ್ತು ತನ್ನ ಮಾಂಸದ ಭಾಗ ಪಕ್ಷಿಯ ತೂಕಕ್ಕಿಂತಲೂ ಕಡಿಮೆ ತೂಕದ್ದಾಗಿರುವುದನ್ನು ಗಮನಿಸಿದಾಗ, ಅಂತಿಮವಾಗಿ, ತಾನೇ ತಕ್ಕಡಿಯನ್ನು ಪ್ರವೇಶಿಸಿದವನು'.

ಪುರುವುನಿರ್‍ಯೆ ಪುಕ್ಕು ಪೊಣ್ಣುಲಗಂ ಯೇತ್ತ ಕುರ್‍ಯೆವಿಲ್
ಉಡಂಬು ಅರಿಂದ ಕೊಟ್ರವನ್ ॥

ಮತ್ತೊಂದು ಪ್ರಸಿದ್ಧವಾದ ತಮಿಳು ಮೇರುಕೃತಿ 'ಕಳಿಂಗತ್ತು ಪರಣಿ'ಯಲ್ಲಿ ಶಿಬಿ ಚಕ್ರವರ್ತಿಯ ಉಲ್ಲೇಖವನ್ನು ಈ ಮುಂದೆ ಹೇಳಿರುವಂತೆ ಮಾಡಲಾಗಿದೆ:

'ತಕ್ಕಡಿಯಲ್ಲಿ ತೂಗುವ ಉದ್ದೇಶದಿಂದ ತನ್ನ ಮಾಂಸವನ್ನೇ ಕತ್ತರಿಸಿದವನು ಮತ್ತು ಪಕ್ಷಿಗೆ ಬದಲಾಗಿ ತನ್ನನ್ನೇ ತೂಗಿಸಿಕೊಳ್ಳಲು ತಕ್ಕಡಿಯನ್ನು ಪ್ರವೇಶಿಸಿದವನು.'

ಉಡಲ್ ಕಲಕ್ಕರ್ ಅರಿಂದು ಸೈ ಇಟ್ಟುಂ ಒರುವನ್ ।
ಒರುತಲೈ ಪುರುವೊಡು ಒಕ್ಕು ಸಿರೈಪ್ಪುಕ್ಕು ಪುಗಳುಂ ॥

ಮೇಲ್ಕಾಣಿಸಿದ ಪದ್ಯ ಕುಲೋತ್ತುಂಗಚೋಳದೊರೆಯ ಪೂರ್ವಿಕರ ವರ್ಣನೆಯ ಸಂದರ್ಭದಲ್ಲಿ ಕಾಣಬರುತ್ತದೆ.

ರಾಜರಾಜ, ಕುಲೋತ್ತುಂಗ ಮತ್ತು ವಿಕ್ರಮ ಎಂಬ ಮೂವರು ಚೋಳ ದೊರೆಗಳನ್ನು ಕುರಿತ ಪ್ರಸಿದ್ಧ ತಮಿಳು ಮೇರುಕೃತಿ 'ಮೂವರ್‌ಉಳ' ದಲ್ಲಿಯೂ ಶಿಬಿ ಚಕ್ರವರ್ತಿಯ ಮಹಾತ್ಯಾಗದ ಉಲ್ಲೇಖವನ್ನು ಕಾಣುತ್ತೇವೆ.

'ಕಂಬ ರಾಮಾಯಣ'ದ ಬಾಲಕಾಂಡದಲ್ಲಿ ರೋಮಪಾದನು ಋಷ್ಯಶೃಂಗರನ್ನು ಅಯೋಧ್ಯೆಗೆ ಹೋಗುವಂತೆ ಪ್ರಾರ್ಥಿಸಿದ ಸಂದರ್ಭದಲ್ಲಿ ಮತ್ತೊಮ್ಮೆ ಶಿಬಿ ಚಕ್ರವರ್ತಿಯ ಉಲ್ಲೇಖವನ್ನು ಮಾಡಲಾಗಿದೆ. ದಶರಥ ಮಹಾರಾಜನ ಮಹತ್ತ್ವವನ್ನು ವರ್ಣಿಸುತ್ತ ರೋಮಪಾದನು ಋಷ್ಯಶೃಂಗರಿಗೆ ಆತ (ಮಹಾರಾಜ ದಶರಥ) ಪಕ್ಷಿಯೊಂದರ ಕಾರಣಕ್ಕಾಗಿ ತನ್ನನ್ನೇ ತಕ್ಕಡಿಯಲ್ಲಿ ತೂಗಿಕೊಂಡವನಾದ ಮತ್ತು ತನ್ನ ಕೀರ್ತಿಯಿಂದ ಇಡೀ ವಂಶಕ್ಕೆ ಮನ್ನಣೆಯನ್ನು ತಂದುಕೊಟ್ಟವನಾದ ಉದಾತ್ತ ವ್ಯಕ್ತಿಯ ವಂಶದಲ್ಲಿ ಜನಿಸಿದನವನೆಂದು ತಿಳಿಸುತ್ತಾನೆ.

ಪುರವೊಂಡ್ರಿನ್ ಪೋರುಟ್ಟಾಹ ತುಲೈಪ್ಪುಕ್ಕು ।
ಪೆರುಂತಕ್ಕೈ ತನ್ ಪುಗಳಿರ್ ಪೊತ್ತ ॥

(ಕಂಬ ರಾಮಾಯಣಂ ಬಾಲಕಾಂಡಂ ತಿರು ಅವತಾರ ಪಟಲಂ ೨೫೭)

ಅದೇ ಗ್ರಂಥದ ಯುದ್ಧಕಾಂಡದ 'ಕುಂಭಕರ್ಣ ವಧೈಪ್ಪಡಲಂ'ನ ೧೫೫೯ನೆಯ ಪದ್ಯದಲ್ಲಿ ಕುಂಭಕರ್ಣ ತನ್ನ ಮರಣಶಯ್ಯೆಯಿಂದ, ಆತನಲ್ಲಿ ಆಶ್ರಯವನ್ನು ಕೋರಿರುವ ವಿಭೀಷಣನಿಗೆ ರಕ್ಷಣೆಯನ್ನು ನೀಡುವಂತೆ ರಾಮನನ್ನು ಪ್ರಾರ್ಥಿಸುತ್ತಾನೆ. ಕುಂಭಕರ್ಣ ರಾಮನಿಗೆ ಹೀಗೆ ಹೇಳುತ್ತಾನೆ, 'ತನ್ನಲ್ಲಿ ಆಶ್ರಯವನ್ನು ಕೋರಿದ ಪಕ್ಷಿಯ ಕಾರಣಕ್ಕಾಗಿ ತನ್ನನ್ನೇ ತಕ್ಕಡಿಯಲ್ಲಿ ತೂಗಿಕೊಂಡ ವ್ಯಕ್ತಿಯ ವಂಶದಲ್ಲಿ ನೀನು ಜನಿಸಿದ್ದೀಯೆ'.

ಪುಕ್ಕುಡೈಂದ ಪುರವೊಂಡ್ರಿನ್ ಪೊರುಟ್ಟಾಹ ತುಲೈಪುಕ್ಕ
ಮೈಕ್ಕಡಂಕಾರ್ ಮದಯಾನ್ಯೆ ವಾಲ್ವೇಂದನ್ ವಳಿ ವನ್‌ದೀರ್
ಇಕ್ಕಡನ್ ಕಲುಡೈ ಈರ್ ನೀರೆಮ್ ವಿಳೈತೀರ್ತುಂ ಮುಡೈಯ
ಕೈಕಡಂದಾ ಉಯಿರ್ಕ್ಕಾಕ್ಕ ಕಡಪೀರಲಿನ್ ॥

ಮತ್ತೊಮ್ಮೆ ಯುದ್ಧಕಾಂಡ 'ವಿಭೀಷಣ ಅಲೈಕಡಪ್ಪಡಲಮ್'ನ ೪೧೩ನೆಯ ಪದ್ಯದಲ್ಲಿ ರಾಮನು ವಿಭೀಷಣನಿಗೆ ಆತ ಶತ್ರುವಾಗಿರಲಿ ಅಥವಾ ಮಿತ್ರನಾಗಿರಲಿ

ತಾನು ರಕ್ಷಣೆಯನ್ನು ನೀಡುವುದಾಗಿ ಘೋಷಿಸುತ್ತಾನೆ. 'ನಮ್ಮ ಜನ್ಮದಾರಭ್ಯ ಆಶ್ರಯವನ್ನು ಬಯಸಿದ ಒಂದು ಜೀವಿಗಾಗಿ ತಕ್ಕಡಿಯನ್ನು ಪ್ರವೇಶಿಸಿದವನ ಮಹತ್ತ್ವವನ್ನು ನಾವೆಂದಾದರೂ ಮರೆತಿರುವೆವೇನು ? ರಕ್ಷಣೆಯನ್ನು ಒದಗಿಸುವ ಕಾರ್ಯದಲ್ಲಿ ಅದರ ಪರಿಣಾಮವಾಗಿ ನಾನು ಮರಣಹೊಂದಿದರೂ ಮರಣದ ಆ ದಿನವನ್ನು ಬಾಳಿನ ಚಿರಂಜೀವಿತ್ವದ ದಿನವೆಂದು ಭಾವಿಸುತ್ತೇನೆ' ಎಂದು ಆತ ನುಡಿಯುತ್ತಾನೆ.:

ಪಿರಂದ ನಾಟ್ಟೊಡಂಗಿಯಾರುಂ ತುಲೈಪುಕ್ಕ ಪೆರಿಯೋನ್ ಪೆಟ್ರ ।
ಮರಂದ ನಾಲುಂಡೋ ಎನ್ನೈ ಚರಣೇನ್ರು ॥

* * * *

೨೩. ಕಪಿಲ ದೇವಹೂತಿಯರ ನಡುವಣ ಸಂವಾದ

ಶ್ರೀಮದ್ಭಾಗವತದ ಮೂರನೆಯ ಸ್ಕಂಧದಲ್ಲಿ ಕಪಿಲ ಮತ್ತು ಆತನ ತಾಯಿ ದೇವಹೂತಿಯ ನಡುವಣ ಸಂವಾದದಲ್ಲಿ ಈ ಪ್ರೇಮದ ಧಾರ್ಮಿಕತೆ ವಿಶದವಾಗಿ ಪ್ರತಿಪಾದಿತವಾಗಿದೆ. ಈ ಸಂವಾದದಲ್ಲಿ ಒಳ್ಳೆಯ ವ್ಯಕ್ತಿಯೊಬ್ಬನು ವಾಸ್ತವವಾಗಿ ಅನುಸರಿಲೇಬೇಕಾಗಿರುವ ಧರ್ಮಗಳನ್ನು ಕಪಿಲನು ತಿಳಿಸುತ್ತಾನೆ. ಆತ (ಭಗವಾನ್ ವಿಷ್ಣುವಿನ ಅವತಾರವೆಂದು ಆತನನ್ನು ವರ್ಣಿಸಲಾಗಿದೆ) ಭಗವದ್ಭಕ್ತಿಯ ಮೇಲೆ ವಿಶೇಷವಾದ ಮಹತ್ತ್ವವನ್ನು ನೀಡಿದ್ದಾನೆ. ಆತನ ಅಭಿಪ್ರಾಯದಲ್ಲಿ ಭಗದ್ಭಕ್ತಿಯೆಂಬುದು ದೇವಸ್ಥಾಗಳಲ್ಲಿ ವಿಗ್ರಹಕ್ಕೆ ಪೂಜೆಯನ್ನು ಸಲ್ಲಿಸುವಷ್ಟಕ್ಕೆ ಸೀಮಿತವಾಗಿಬಾರದೆಂದೂ ಆದರೆ ಪ್ರತಿಯೊಬ್ಬ ಮಾನವ ಜೀವಿಯಲ್ಲಿಯೂ, ಅಷ್ಟೇ ಅಲ್ಲ, ಪ್ರಪಂಚದಲ್ಲಿನ ಎಲ್ಲ ಜೀವಿಗಳಲ್ಲಿಯೂ ನೆಲೆಸಿರುವ ಭಗವಂತನನ್ನು ಪೂಜಿಸುವುದಕ್ಕೆ ವಿಸ್ತಾರಗೊಳ್ಳಬೇಕು. ಎಲ್ಲ ಜೀವಿಗಳಲ್ಲಿಯೂ ಈಶ್ವರನಾಗಿ ನೆಲೆಸಿರುವ 'ಆತ' ನನ್ನು ತೊರೆದು, ಯಾವ ವ್ಯಕ್ತಿ ದೇವಸ್ಥಾನದಲ್ಲಿ ಭಗವಂತನ ವಿಗ್ರಹವನ್ನು ಪೂಜಿಸುವನೋ ಆತ ಬೂದಿಯಲ್ಲಿ ಹೋಮ ಮಾಡಿದ ವ್ಯಕ್ತಿಯಂತೆಯೇ ಸರಿ.

ಅಹಂ ಸರ್ವೇಷು ಭೂತೇಷು ಭೂತಾತ್ಮಾವಸ್ಥಿತಸ್ಸದಾ
ತಮವಿಜ್ಞಾಯ ಮಾಂ ಮರ್ತ್ಯಃ ಕುರುತೇರ್ಚಾವಿಡಂಬನಮ್ ।
ಯೋಮಾಂ ಸರ್ವೇಷು ಭೂತೇಷು ಸಂತಮಾತ್ಮಾನಮೀಶ್ವರಂ
ಹಿತ್ವಾರ್ಚಾಂ ಭಜತೇ ಮೌಢ್ಯಾತ್ ಭಸ್ಮನ್ಯೇವ ಜುಹೋತಿ ಸಃ ॥
(*ಶ್ರೀಮದ್ಭಾಗವತ* ೩.೨೯; ೨೧ ಮತ್ತು ೨೨)

ಯಾರು ತನ್ನ ಮತ್ತು ಇತರರ ನಡುವೆ ಭೇದಭಾವವನ್ನು ತೋರುವರೋ ಅಂಹತವರಿಗೆ ಭಗವಂತನು ಮೃತ್ಯುವಿನ ರೂಪದಲ್ಲಿ ಉತ್ಕಟವಾದ ಭಯವನ್ನುಂಟುಮಾಡುತ್ತಾನೆ.

ಆತ್ಮನಶ್ಚ ಪರಶ್ಚಾಪಿ ಯಃ ಕರೋತ್ಯಂತರೋದರಂ
ತಸ್ಯ ಭಿನ್ನದೃಶೋಮೃತ್ಯುಃ ವಿದಧೇಭಯಮುಲ್ಬಣಂ ।

ಅಥ ಮಾಂ ಸರ್ವಭೂತೇಷು ಭೂತಾತ್ಮಾನಂ ಕೃತಾಲಯಂ
ಅರ್ಹಯೇದ್ದಾನಮಾನಾಭ್ಯಾಂ ಮೈತ್ರ್ಯಾಭಿನ್ನೇನ ಚಕ್ಷುಷಾ ॥
(*ಶ್ರೀಮದ್ಭಾಗವತ* : ೩.೨೯; ೨೬ ಮತ್ತು ೨೭)

ಆದ್ದರಿಂದಲೇ ಕಪಿಲ, ಪ್ರತಿಯೋರ್ವನೂ, ಪ್ರತಿಯೊಂದು ಮಾನವ ಜೀವಿಯಲ್ಲಿಯೂ ತನ್ನ ನೆಲೆಯನ್ನು ಪಡೆದಿರುವ ಭಗವಂತನನ್ನು ದಾನ ನೀಡುವುದು, ಗೌರವವನ್ನು ತೋರುವುದು ಮತ್ತು ಸಹಮಾನವರನ್ನು ಪ್ರೀತಿಸುವುದರ ಮೂಲಕ ಪೂಜಿಸಬೇಕೆಂದು ನುಡಿಯುತ್ತ ತನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಾನೆ.

ಈ ಪ್ರಸಿದ್ಧವಾದ ಸಂವಾದದಲ್ಲಿ ತನ್ನ ಸೋದರರ ಬಗ್ಗೆ ವ್ಯಕ್ತಿಯೋರ್ವನ ವರ್ತನೆಯನ್ನು ನಿರ್ದೇಶಿಸುವ ಎರಡು ಮೂಲಾಧಾರವಾದ ನಿಯಮಗಳು ಪ್ರಸ್ತುತಗೊಂಡಿವೆ.

(೧) ಪ್ರತಿಯೋರ್ವ ಜೀವಿಯೂ ಭಗವಂತನು ನೆಲೆಸಿರುವ ದೇವಾಲಯದಂತೆ.
(೨) ಮತ್ತೊಬ್ಬ ಜೀವಿಗೆ ಸಲ್ಲಿಸಿದ ಯಾವುದೇ ಸಹಾಯ ವಾಸ್ತವವಾಗಿಯೂ ಪ್ರತಿಯೊಂದು ಜೀವಿಯಲ್ಲಿಯೂ ನೆಲೆಸಿರುವ ಭಗವಂತನಿಗೆ ಸಲ್ಲಿಸಿದ ಪೂಜೆ.

ವ್ಯಕ್ತಿಯೋರ್ವನು ತನ್ನ ಭಕ್ತಿಯನ್ನು ದೇವಾಲಯದಲ್ಲಿರುವ ಭಗವಂತನ ಪ್ರತಿಮೆಗೇ ಸೀಮಿತಗೊಳಿಸಿದರೆ ಮತ್ತು ಇತರ ಜೀವಿಗಳಲ್ಲಿ ಆತನನ್ನೇ ಪೂಜಿಸದಿದ್ದರೆ ಆತನ ಭಕ್ತಿ ಸಂಪೂರ್ಣವಾಗಿ ವ್ಯರ್ಥವಾದಂತೆಯೇ ಸರಿ.

ಶ್ರೀಮದ್ಭಾಗವತದ ಮೂರನೆಯ ಸ್ಕಂಧದ ಒಂಬತ್ತನೆಯ ಅಧ್ಯಾಯದಲ್ಲಿ ಮತ್ತೊಮ್ಮೆ ಬ್ರಹ್ಮನು ಭಗವಂತನನ್ನು ಹೊಗಳುತ್ತಾನೆ ಮತ್ತು ಭಗವದ್ಭಕ್ತಿಯ ಕರ್ತವ್ಯವನ್ನು ಸಮರ್ಥಿಸುತ್ತಾನೆ. ಭಗವಂತನು ಯಾರಲ್ಲಿ ನೆಲೆಸಿರುವನೋ ಅಂತಹ ಎಲ್ಲ ಮಾನವಜೀವಿಗಳಿಗೂ ಕರುಣೆಯನ್ನು ತೋರುವಂತಹ ಭಕ್ತಿಯನ್ನು ಬ್ರಹ್ಮ ಒತ್ತಿಹೇಳುತ್ತಾನೆ. ಭಗವಂತ ಕೇವಲ ಧಾರ್ಮಿಕ ಕಾರ್ಯಗಳು ಅಥವಾ ಯಜ್ಞಗಳು ಅಥವಾ ತಪಸ್ಸಿನ ಆಚರಣೆ ಅಥವಾ ಹರಕೆಗಳನ್ನು ತೀರಿಸುವುದರಿಂದ ಸಂತುಷ್ಟನಾಗುವುದಿಲ್ಲವೆಂದು ಆತ ಹೇಳುತ್ತಾನೆ. ಆದರೆ ಮಾನವ ಜೀವಿಗಳಿಗೆ ಕರುಣೆ ಮತ್ತು ಸೇವೆಯಿಂದ ಆತ ಸಂತುಷ್ಟನಾಗುತ್ತಾನೆ. ಈ ಶ್ಲೋಕದಲ್ಲಿ ವ್ಯಕ್ತಿಯೊಬ್ಬನು ಸಹಮಾನವರಿಗೆ ಸಲ್ಲಿಸುವ ಸೇವೆ ಶಾಸ್ತ್ರಗಳಲ್ಲಿ ವಿವರಿಸಲಾಗಿರುವ ನಾನಾ ಬಗೆಯ ಭಗವಂತನ ಪೂಜೆಗಿಂತಲೂ ಅತ್ಯುನ್ನತವಾದುದೆಂದೂ ಪರಿಗಣಿಸಲಾಗಿದೆ.

ನಾತಿಪ್ರಸೀದತಿ ತಥೋಪಚಿತೋಪಚಾರೈಃ
ಆರಾಧಿತಃ ಸುರಗಣೈಃ ಹೃದಿಬದ್ಧಕಾಮೈಃ ।

ಯತ್ಸರ್ವಭೂತದಯಯಾ ಅಸದಲಭ್ಯಯೈಕೋ
ನಾನಾಜನೇಷ್ವವಹಿತಃ ಸುಹೃದಂತರಾತ್ಮಾ ॥
(*ಶ್ರೀಮದ್ಭಾಗವತ* : ೩.೯.೧೨)

* * * *

೨೪. ವೇದಗಳಲ್ಲಿ : ಋಗ್ವೇದ

ನಮ್ಮ ಪ್ರಾಚೀನ ಶಾಸ್ತ್ರಗ್ರಂಥಗಳಲ್ಲಿ ಸರ್ವೋತ್ಕೃಷ್ಟ ಪ್ರಾಮುಖ್ಯತೆಯುಳ್ಳ ಮತ್ತು ಅತ್ಯುಚ್ಚ ಪ್ರಮಾಣವೆಂದು ಪರಿಗಣಿತವಾಗಿರುವ ವೇದಗಳತ್ತ ನಾವು ಗಮನಹರಿಸೋಣ. ನಾಲ್ಕು ವೇದಗಳಲ್ಲಿ ಋಗ್ವೇದವು ಅತ್ಯಂತ ಪ್ರಾಚೀನವಾದುದೆಂದು ಪರಿಗಣಿತವಾಗಿದೆ. ಅದರಲ್ಲಿ ಬಡವರು ಮತ್ತು ನಿರ್ಗತಿಕರಿಗೆ ದಾನ, ಆಹಾರ ನೀಡುವುದು ಮತ್ತು ವಸತಿಯನ್ನು ಒದಗಿಸುವ ಕರ್ತವ್ಯವನ್ನು ನಮಗೆ ವಿಧಿಸುವ ಸೂಕ್ತಗಳ ಗುಂಪೊಂದನ್ನು ನಾವು ಕಾಣುತ್ತೇವೆ. ಈ ಸೂಕ್ತಗಳು ಋಗ್ವೇದದ ಹತ್ತನೆಯ ಮಂಡಲದಲ್ಲಿ ದೊರೆಯುತ್ತವೆ. ಬಹುವೇಳೆ ಅವುಗಳನ್ನು ಸಂಕ್ಷಿಪ್ತವಾಗಿ 'ಅನ್ನಸೂಕ್ತ'ಗಳೆಂದು ಸೂಚಿಸಲಾಗಿದೆ. ಈ ಸೂಕ್ತಗಳಲ್ಲಿ ಮೊದಲನೆಯದನ್ನು ಈ ಮುಂದಿನಂತೆ ಅನುವಾದ ಮಾಡಬಹುದು.

'ಹಸಿದವರು ಮತ್ತು ಅರೆಹೊಟ್ಟೆಯವರಿಗೆ ಮಾತ್ರವೇ ವಿಧಿ ಖಂಡಿತವಾಗಿಯೂ ಮರಣವನ್ನು ವಿಧಿಸಿಲ್ಲ. ಏಕೆಂದರೆ ತಿನ್ನಲು ಸಾಕಷ್ಟಿರುವವರಿಗೂ ಸಾವು ಅನೇಕ ಬಗೆಯಲ್ಲಿ ಒದಗುತ್ತದೆ. ನಿಶ್ಚಯವಾಗಿಯೂ ಅಗತ್ಯವಿರುವವರಿಗೆ ಸಹಾಯ ಮಾಡುವವನ ಸಂಪತ್ತು ಮುಗಿದುಹೋಗುವುದಿಲ್ಲ. ಬಡವರಿಗೆ ಯಾರು ಸಹಾಯವನ್ನು ಒದಗಿಸುವುದಿಲ್ಲವೋ ಅಂತಹವರಿಗೆ ಕಷ್ಟದ ಸಮಯದಲ್ಲಿ ಸಾಂತ್ವನ ಹೇಳಲು ಯಾರೂ ಇರುವುದಿಲ್ಲ.'

ನ ವಾ ಉ ದೇವಾಃ ಕ್ಷುಧಮಿದ್ವಧಂ ದದುಃ ಉತಾಶಿತಮುಪಗಚ್ಛಂತಿ ಮೃತ್ಯವಃ ।
ಉತೋರಯಿಃ ಪ್ರಣತೋ ನೋಪ ದಸ್ಯತ್ಯುತಾ ಪೃಣನ್ಮರ್ಡಿತಾರಂ ನ ವಿಂದತೇ ॥

ಮೂರನೆಯ ಮಂತ್ರ ಮುಂದಿನಂತೆ ಸಾಗುತ್ತದೆ :–

'ಬಡವರಿಗೆ ಮತ್ತು ಹಸಿವಿನಿಂದ ಪೀಡಿತನಾಗಿ ಅಲೆದಾಡುತ್ತಿರುವ ಕೃಶನಾದ ಭಿಕ್ಷುಕನಿಗೆ ಯಾರು ಆಹಾರವನ್ನು ಒದಗಿಸುವನೋ ಆತ ತನ್ನ ಆಹಾರವನ್ನು ಸಂತೋಷದಿಂದ ತಿನ್ನುತ್ತಾನೆ. ಅಂತಹ ಪರೋಪಕಾರದ ಕಾರ್ಯಗಳ ಪರಿಣಾಮವಾಗಿ ಆತ ಅಪಾರವಾದ ಸಂಪತ್ತುಳ್ಳವನಾಗುತ್ತಾನೆ ಮತ್ತು ಆತನ ದಾನ ಅಗತ್ಯ ಸಮಯಗಳಲ್ಲಿ ಆತನಿಗೆ ಸ್ನೇಹಿತರನ್ನು ಒದಗಿಸುತ್ತದೆ.'

ಸ ಇದ್ಭೋಜೋ ಯೋ ಗೃಹವೇ ದದಾತ್ಯನ್ನಕಾಮಾಯ ಚರತೇ ಕೃಶಾಯ ।
ಅರಮಸ್ಮೈ ಭವತಿ ಯಾಮಹೂತಾ ಉತಾಪರೀಷು ಕೃಣುತೇ ಸಖಾಯಮ್ ॥

ಆರನೆಯ ಮಂತ್ರ ಅದರ ಧ್ವನಿ ಖಂಡನಾತ್ಮಕವಾಗಿದೆ, ಅದು ಹೀಗೆ ಸಾಗುತ್ತದೆ:

'ಅತಿಥಿಗೆ ಆಹಾರವನ್ನು ಒದಗಿಸದೆ ಮತ್ತು ಸಂಕಟದಲ್ಲಿರುವ ಸ್ನೇಹಿತನಿಗೆ ಸಹಾಯ ಮಾಡದೆ ಯಾರು ಒಬ್ಬನೇ ಉಣ್ಣುವನೋ ಆತ ಉಣ್ಣುವುದು ಪಾಪವನ್ನೇ. ಸತ್ಯವನ್ನು ಹೇಳಬೇಕೆಂದರೆ ಭಗವಂತ ಅವನಿಗೆ ವ್ಯರ್ಥವಾಗಿ ಆಹಾರವನ್ನು ದಯಪಾಲಿಸಿದ್ದಾನೆ.'

ಮೋಘಮನ್ನಂ ವಿಂದತೇ ಅಪ್ರಚೇತಾಃ ಸತ್ಯಂ ಬ್ರವೀಮಿ ವಧ ಇತ್ಸ ತಸ್ಯ ।
ನಾರ್ಯಮಣಂ ಪುಷ್ಯತಿ ನೋ ಸಖಾಯಂ ಕೇವಲಾಘೋಭವತಿ ಕೇವಲಾದೀ ॥

ಏಳನೆಯ ಮಂತ್ರ ಈ ಮುಂದಿನಂತೆ ಘೋಷಿಸುತ್ತಿದೆ :

'ಪ್ರತಿಯೋರ್ವ ವ್ಯಕ್ತಿಯೂ ಬಡವರಿಗೆ ಸಹಾಯಮಾಡುವುದು ಮತ್ತು ನ್ಯಾಯಬದ್ಧವಾದ ಕಾರ್ಯಗಳನ್ನು ಆಚರಿಸುವುದನ್ನು ಕರ್ತವ್ಯವೆಂದು ಪರಿಗಣಿಸಬೇಕು ಮತ್ತು ಹೀಗೆ ಜೀವನದ ಪಯಣದ ಮೂಲಕ ಸಾಗಬೇಕು. ನೊಗವನ್ನು ಹೊರುವ ರೈತ ಇತರರಿಗಾಗಿ ಆಹಾರವನ್ನು ಉತ್ಪಾದಿಸುತ್ತಾನೆ. ತನ್ನ ಪಾಂಡಿತ್ಯವನ್ನು ಇತರರಿಗೆ ಕೊಡುಗೆಯನ್ನಾಗಿ ನೀಡುವ ವಿದ್ವಾಂಸನು ಅಧ್ಯಾಪನವನ್ನು ಕೈಗೊಳ್ಳದಿರುವವನಿಗಿಂತ ಶ್ರೇಷ್ಠನಾದವನು. ಅಗತ್ಯವಿರುವವನಿಗೆ ಸಹಾಯ ಮಾಡಲು ಸಿದ್ಧನಾಗಿರುವ ದಾನಪ್ರವೃತ್ತಿಯುಳ್ಳ ವ್ಯಕ್ತಿ ಇತರರಿಗೆ ಸಹಾಯ ಮಾಡದಿರುವ ವ್ಯಕ್ತಿಗಿಂತ ಶ್ರೇಷ್ಠನಾದವನು.'

ಕೃಷನ್ನಿತ್ಫಾಲ ಆಶಿತಂ ಕೃಣೋತಿ ಯನ್ನಧ್ವಾನಮಪವೃಂಕ್ತೇ ಚರಿತ್ರೈಃ ।
ವದನ್ಬ್ರಹ್ಮಾಽವದತೋ ವನೀಯಾನ್ ಪೃಣನ್ನಾಪಿರಪೃಣಂತಮಭಿಷ್ಯಾತ್ ॥

ಎಂಟನೆಯ ಮಂತ್ರ ಹೆಚ್ಚಿನ ಪ್ರಾಮುಖ್ಯತೆಯುಳ್ಳದ್ದು. ಅದು ಬಡವರಿಗೆ ಸಹಾಯವನ್ನು ಮಾಡಬೇಕಾಗಿರುವ ನಿಜವಾದ ಮನೋಭಾವವನ್ನು ವ್ಯಕ್ತಿಯೊಬ್ಬನ ಮೇಲೆ ವಿಧಿಸುತ್ತದೆ. ತಮ್ಮ ಶ್ರೀಮಂತಿಕೆಯ ದೆಸೆಯಿಂದ ಎತ್ತರದ ಮಟ್ಟದಲ್ಲಿರುವ ವ್ಯಕ್ತಿಗಳು ಅಲ್ಪ ಐಶ್ವರ್ಯದಿಂದ ಕೆಳಮಟ್ಟದಲ್ಲಿರುವವರಿಗೆ ಅಹಂಕಾರದ ಮನೋಭಾವದಿಂದ ದಾನಮಾಡುವ ಪ್ರವೃತ್ತಿಯನ್ನು ಸೂಚಿಸುತ್ತಾರೆ. ಮತ್ತೊಂದು ಕಡೆಯಿಂದ ನೋಡಿದರೆ, ಒಂಬತ್ತನೆಯ ಮಂತ್ರದಲ್ಲಿ ಸೂಚಿತವಾಗಿರುವಂತೆ ಪ್ರಾಪಂಚಿಕ ಸಂಪತ್ತಿನ ವಿಷಯದ ಅಸಮಾನತೆ ಸಮುದಾಯದ ಎಲ್ಲ ವರ್ಗಗಳ ನಡುವೆ ಇರಲೇಬೇಕಾದ ಸೋದರತ್ವದ ಮನೋಭಾವ ಮತ್ತು ದಾನಕ್ಕೆ ಬಾಧೆಯನ್ನುಂಟುಮಾಡಬಾರದು. ಈ ಅಸಮಾನತೆಗಳು ಅನಿವಾರ್ಯವಾದುವು ಮತ್ತು ಸಹಜವಾದುವು.

ವ್ಯಕ್ತಿಯೊಬ್ಬನ ಎರಡು ಕೈಗಳು ಅವು ಎಲ್ಲ ಅಂಶಗಳಲ್ಲಿಯೂ ಒಂದರಂತೆ ಮತ್ತೊಂದಿದ್ದರೂ ಒಂದೇ ಬಗೆಯ ಕಾರ್ಯವನ್ನು ಮಾಡುವುದಿಲ್ಲ. ಒಬ್ಬಳೇ ತಾಯಿಗೆ ಜನಿಸಿದ ಎರಡು ಕರುಗಳು ಅವು ಬೆಳೆದಾಗ ಸಮಾನ ಪ್ರಮಾಣದ

ಹಾಲನ್ನು ಕರೆಯುವುದಿಲ್ಲ. ವ್ಯಕ್ತಿಗಳಿಬ್ಬರು ಅವಳಿಗಳಾಗಿರಬಹುದು, ಆದರೆ ಅವರ ಗ್ರಹಣಶಕ್ತಿ ಮತ್ತು ಸಾಮರ್ಥ್ಯಗಳು ಭಿನ್ನವಾಗಿರಬಹುದು. ಒಂದೇ ಕುಟುಂಬದಲ್ಲಿರುವ ಸೋದರರೂ ಒಂದೇ ಮಟ್ಟದಲ್ಲಿ ಬುದ್ಧಿವಂತರಲ್ಲದಿರಬಹುದು.

ಸಮೌ ಚಿದ್ಧಸ್ತೌ ನ ಸಮಂ ವಿವಿಷ್ಟಃ ಸಂ ಮಾತರಾಚಿನ್ನಸಮಂದುಹಾತೇ ।
ಯಮಯೋಶ್ಚಿನ್ನ ಸಮಾವೀರ್ಯಾಣಿ ಜ್ಞಾತೀ ಚಿತ್ಸಂತೌ ನ ಸಮಂ ಪೃಣೀತಃ ॥

ಆದ್ದರಿಂದ ಹೆಚ್ಚು ಶ್ರೀಮಂತನಾಗಿರುವ ವ್ಯಕ್ತಿ ಅಷ್ಟೇನೂ ಶ್ರೀಮಂತನಲ್ಲದ ವ್ಯಕ್ತಿಯನ್ನು ತಿರಸ್ಕಾರದಿಂದ ಕಾಣುವುದು ಅನುಚಿತವಾದುದು. ಯಾವುದೇ ದಾನವನ್ನು ಆಡಂಬರ ಅಥವಾ ಆಶ್ರಯದಾತನೆಂಬ ಅಹಂಭಾವ ಅಥವಾ ದುರಭಿಮಾನದಿಂದ ಮಾಡಿದರೆ ಅದು ಹೆಸರಿಗೆ ತಕ್ಕುದೆನಿಸುವುದಿಲ್ಲ. ದಾನ ನಮ್ರತೆಯ ನಿಜವಾದ ಮನೋಭಾವದಿಂದ ಪ್ರೇರಿತವಾಗಿರಬೇಕು. ಈ ಮೊದಲೇ ಮೇಲೆ ಉಲ್ಲೇಖಿತವಾಗಿರುವ ಆರನೆಯ ಮಂತ್ರದಲ್ಲಿ ವ್ಯಕ್ತವಾಗಿರುವ ಭಾವನೆಗಳನ್ನೇ ಅಂದರೆ ಯಾರು ಒಬ್ಬನೇ ಉಣ್ಣುವನೋ ಆತ ಉಣ್ಣುವುದು ಪಾಪವನ್ನೇ ಎಂಬುದನ್ನು ಕೃಷ್ಣಪರಮಾತ್ಮ ಭಗವದ್ಗೀತೆಯಲ್ಲಿ ಪ್ರತಿಧ್ವನಿಸಿರುವುದು ಗಮನಾರ್ಹವಾಗಿದೆ.

ಯಜ್ಞಶಿಷ್ಟಾಶಿನಸ್ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।
ಭುಂಜತೇ ತೇ ತ್ವಘಂ ಪಾಪಂ ಯೇ ಪಚಂತ್ಯಾತ್ಮಕಾರಣಾತ್॥

(*ಭಗವದ್ಗೀತಾ ೩–೧೧*)

ಋಗ್ವೇದದ ಅನ್ನಸೂಕ್ತದ ಮಂತ್ರಗಳು ಇತರರಿಗೆ ಸೇವೆಯನ್ನು ಸಲ್ಲಿಸುವ ಕರ್ತವ್ಯವನ್ನು ವಿಧಿಸುತ್ತವೆ. ಈ ಸೇವೆ ನಾನಾ ವಿಧವಾದುದು. ಅಗತ್ಯವಿರುವ ಇತರರೊಂದಿಗೆ ಆಹಾರವನ್ನು ಹಂಚಿಕೊಳ್ಳುವುದು ಅದರಲ್ಲಿ ಒಂದು. ಸಂಕಟದಲ್ಲಿರುವ ಇತರರಿಗೆ ಸಹಾಯ ಮಾಡುವುದು, ಜ್ಞಾನವನ್ನು ಇತರರಿಗೆ ಹರಡುವುದು, ಸಮುದಾಯಕ್ಕಾಗಿ ಆಹಾರವನ್ನು ಉತ್ಪಾದಿಸುವುದು ಇವು ಸೇವೆಯ ಇತರ ವಿಧಗಳು. ಸೇವೆಯನ್ನು ಮಾಡಬೇಕಾಗಿರುವಾಗ ಇರಬೇಕಾದ ಮನೋಭಾವವನ್ನು ಕುರಿತು ಮಾತನಾಡುತ್ತ, ಅದನ್ನು ಆಡಂಬರದಿಂದಲ್ಲದೆ ಅಥವಾ ಆಶ್ರಯದಾತನೆಂಬ ಅಹಂಭಾವವಿಲ್ಲದೆ ಸಮುದಾಯದ ಸದಸ್ಯರ ನಡುವೆ ಅಸಮಾನತೆಗಳ ಅಸ್ತಿತ್ವದ ಅನಿವಾರ್ಯತೆಗೆ ಸಲ್ಲಬೇಕಾದ ಗೌರವದೊಡನೆ ಮಾಡಬೇಕೆಂದು ಅದು ವಿಧಿಸುತ್ತದೆ. ಅದೃಷ್ಟವಶದಿಂದ ಅನುಕೂಲಸ್ಥಿತಿಯಲ್ಲಿರುವ ವ್ಯಕ್ತಿ ತನ್ನ ಶ್ರೀಮಂತಿಕೆಯ ಬಗ್ಗೆ ಉಬ್ಬಿಹೋಗಬಾರದು, ಆದರೆ ತನ್ನ ಉತ್ತಮ ಸ್ಥಿತಿ, ಲೌಕಿಕ ಸಂಪತ್ತುಗಳಿಗೆ ಸಂಬಂಧಪಟ್ಟಂತೆ ಕೆಳಮಟ್ಟದಲ್ಲಿರುವ ತನ್ನ ಸೋದರರಿಗಾಗಿ ಬಳಸಬೇಕಾಗಿರುವ ಒಂದು ಆಕಸ್ಮಿಕ ವಿಷಯ ಮಾತ್ರ ಎಂದು ಭಾವಿಸುವ ನಮ್ರತೆಯನ್ನು ಹೊಂದಿರಬೇಕು. ಋಗ್ವೇದದ ೮ನೆಯ ಅಷ್ಟಕದ ಏಳನೆಯ ಅಧ್ಯಾಯದಲ್ಲಿರುವ ಒಂದು ಪ್ರಸಿದ್ಧವಾದ ವಾಕ್ಯ, ಮಾನವಕುಲಕ್ಕೆ ಸೇವೆಯ ಶ್ರೇಷ್ಠತೆಯ ಬಗ್ಗೆ ಋಗ್ವೇದದ ಘೋಷಣೆಯನ್ನು

ಸಂಗ್ರಹವಾಗಿ ಹೀಗೆ ತಿಳಿಸುತ್ತದೆ: 'ಬದುಕಿರುವವನೆಂದು ಹೇಳಲಾಗಿರುವವನು ಯಾರು? ಯಾರು ಇತರರಿಗೆ ಸಹಾಯ ಮಾಡುವುದಕ್ಕಾಗಿ ಬದುಕುವನೋ ಬದುಕುವವನು ಅವನೇ.'

ಯೇನ ಕೇನ ಪ್ರಕಾರೇಣ ಕೋ ಹಿ ನಾಮ ನು ಜೀವತಿ ।
ಪರೇಷಾಮುಪಕಾರಾರ್ಥಂ ಯಜ್ಜೀವತಿ ಸ ಸಜೀವತಿ ॥

* * * *

೨೫. ಸಾಮವೇದದಲ್ಲಿ

ಋಗ್ವೇದದಷ್ಟೇ ಸಮಾನ ಪ್ರಾಮಾಣ್ಯ ಮತ್ತು ಪ್ರಾಮುಖ್ಯತೆಯನ್ನುಳ್ಳ ಸಾಮವೇದದಲ್ಲಿ 'ಸೇತುಸಾಮ' ಎಂದು ಸಾಮಾನ್ಯವಾಗಿ ತಿಳಿಯಲಾಗಿರುವ ಪ್ರಸಿದ್ಧವಾದ ಒಂದು ಚಿಕ್ಕ ಭಾಗ ದೊರೆಯುತ್ತದೆ. ಅದು ದಾನದ ಶ್ರೇಷ್ಠ ಆದರ್ಶವನ್ನು ನಮ್ಮ ಮೇಲೆ ವಿಧಿಸುತ್ತದೆ. ವಾಸ್ತವವಾಗಿ ಈ ಚಿಕ್ಕಭಾಗದಲ್ಲಿ, ದೈವತ್ವದ ಸಾಕ್ಷಾತ್ಕಾರಕ್ಕಾಗಿ ವ್ಯಕ್ತಿಯೊಬ್ಬನು ಆಧ್ಯಾತ್ಮಿಕ ಯಾತ್ರೆಯಲ್ಲಿ ದಾಟಬೇಕಾದ ನಾಲ್ಕು ಸೇತುಗಳು ಅಥವಾ ಅಡಚಣೆಗಳನ್ನು ಉಲ್ಲೇಖಿಸಲಾಗಿದೆ. ಕೋಪ, ಶ್ರದ್ಧೆಯ ಕೊರತೆ, ಸುಳ್ಳು ಮತ್ತು ದಾನ ಮಾಡದಿರುವಿಕೆ ಇವೇ ನಾಲ್ಕು ಅಡಚಣೆಗಳು. ಈ ನಾಲ್ಕು ಅಡಚಣೆಗಳನ್ನು ದಾಟಿದರೆ ಬಳಿಕ ಯಾತ್ರಿ ಅಮರತ್ವ, ಸ್ವರ್ಗ ಮತ್ತು ಜ್ಯೋತಿಯನ್ನು ಪಡೆಯುತ್ತಾನೆ. ಈ ನಾಲ್ಕು ಅಡಚಣೆಗಳನ್ನು ಗೆಲ್ಲುವ ಮಾರ್ಗಗಳನ್ನೂ ಸೂಚಿಸಲಾಗಿದೆ. ಕೋಪವನ್ನು ಗೆಲ್ಲುವ ಮಾರ್ಗ ಮನಸ್ಸಿನ ನೆಮ್ಮದಿ ಮತ್ತು ದ್ವೇಷರಾಹಿತ್ಯ, ಶ್ರದ್ಧೆಯ ಕೊರತೆಯನ್ನು ಶ್ರದ್ಧೆಯಿಂದಲೇ ಗೆಲ್ಲಬೇಕು. ಸತ್ಯ ಸುಳ್ಳನ್ನು ಜಯಿಸುತ್ತದೆ ಮತ್ತು ದಾನ, ದಾನಮಾಡದಿರುವಿಕೆಯನ್ನು ದೂರಗೊಳಿಸುತ್ತವೆ.

ಸೇತೂನ್‌ಸ್ತರ ದುಸ್ತರಾನ್ । ದಾನೇನಾದಾನಂ ಅಹಮಸ್ಮಿ ಪ್ರಥಮಜಾ ಋತಾಽಸ್ಯ। ಸೇತೂನ್‌ಸ್ತರ ದುಸ್ತರಾನ್ ಅಕ್ರೋಧೇನ ಕ್ರೋಧಂ ಅಕ್ರೋಧೇನ ಕ್ರೋಧಮ್। ಪೂರ್ವಂ ದೇವೇಭ್ಯೋ ಅಮೃತಸ್ಯ ನಾ ಭಾ ಈ । ಸೇತೂನ್‌ಸ್ತರ ದುಸ್ತರಾನ್। ಶ್ರದ್ಧಯಾಶ್ರಾದ್ಧಾಮ್। ಯೋಮಾದದಾತಿ ಸ ಇ ದೇವಮಾವಾತ್ । ಸೇತೂನ್ ಸ್ತರ ದುಸ್ತರಾನ್ ಸತ್ಯೇನಾನೃತಮ್। ಅಹಮನ್ನ ಮನ್ನಮದಂತಮಾತದ್‌ಮಿ । ಏಷಾಗತಿಃ । ಏತದಮೃತಮ್ । ಸ್ವರ್ಗಚ್ಛ । ಜ್ಯೋತಿರ್ಗಚ್ಛ । ಸೇತೂನ್‌ಸ್ತೀರ್ತ್ವಾ ಚತುರಾಃ ॥

ಮುಂದೆ, ಭಗವಾನ್ ಬುದ್ಧ 'ಧಮ್ಮಪದ'ದಲ್ಲಿ ಇವೇ ಭಾವನೆಗಳನ್ನು ಪ್ರತಿಧ್ವನಿಸಿದ್ದಾನೆ.

ಅಕ್ರೋಧೇನ ಜಿನೇ ಕೋದಂ ಅಸಾಧೂನ್ ಸಾಧುನಾ ಜಿನೇ । ಜಿನೇ ಕದರ್ಯಂ ದಾನೇನ ಸಚ್ಚೇನಾಲೀಕವಾದಿನಮ್ ॥

ಮುಂದೆ ಈ ಚಿಕ್ಕಭಾಗವನ್ನು ಶಂಕರಾಚಾರ್ಯರ 'ಶತಶ್ಲೋಕಿ'ಯ (ನೂರು ಶ್ಲೋಕಗಳು) ಶ್ಲೋಕವೊಂದರಲ್ಲಿ ಅಳವಡಿಸಿಕೊಳ್ಳಲಾಗಿದೆ.

ದಾನಂ ಬ್ರಹ್ಮಾರ್ಪಣಂ ಯತ್ಕ್ರಿಯತ ಇಹನೃಭಿಃ ಸ್ಯಾತ್ಕ್ಷಮಾ ಕ್ರೋಧಸಂಜ್ಞಾ
ಶ್ರದ್ಧಾಸ್ತಿಕ್ಯಂ ಚ ಸತ್ಯಂ ಸದಿತಿ ಪರಮತಃ ಸೇತುಸಂಜ್ಞಂ ಚತುಷ್ಕಮ್ ।
ತತ್ಸ್ವಾತ್ಸಂಧಾಯ ಜಂತೋರಿತಿ ಚತುರ ಇಮಾನ್ ದಾನಪೂರ್ವೈಃ ಚತುರ್ಭಿಃ
ತೀರ್ತ್ವಾ ಶ್ರೇಯೋಽಮೃತಂ ಚ ಶ್ರಯತ ಇಹನರಃ ಸ್ವರ್ಗತಿಂ ಜ್ಯೋತಿರಾಪ್ತಿಮ್ ॥

ಸ್ವಾರ್ಥಪರತೆ ಅಥವಾ ಬೇರೆ ಮಾತುಗಳಲ್ಲಿ ಹೇಳುವುದಾದರೆ ಗಳಿಕೆಯ ಪ್ರವೃತ್ತಿ ಮನುಷ್ಯನಲ್ಲಿ ಸಹಜವಾದುದು ಮತ್ತು ದಾನವ ಅಭ್ಯಾಸದಿಂದ ಈ ಪ್ರವೃತ್ತಿಯನ್ನು ಸಂಪೂರ್ಣವಾಗಿ ತೊಡೆದುಹಾಕಬೇಕು. ದಾನ ಮನುಷ್ಯನ ಉದಾತ್ತ ಸ್ವಭಾವದ ಒಂದು ಭಾಗವಾಗಿ ರೂಪುಗೊಳ್ಳಬೇಕು. ಮಾನವ ಜೀವಿಯಲ್ಲಿ ಗಳಿಕೆಯ ಪ್ರವೃತ್ತಿ ಹುಟ್ಟಿನಿಂದ ಬಂದದ್ದೆಂಬ ನಿಜವಾದ ಕಷ್ಟವನ್ನು ಸಾಮವೇದ ಅತ್ಯಂತ ಸರಿಯಾಗಿಯೇ ಗ್ರಹಿಸಿದೆ. ಆದರೆ ಈ ಪ್ರವೃತ್ತಿಯನ್ನು ತೊಡೆದುಹಾಕುವ ಒಂದೇ ಮಾರ್ಗವೆಂದರೆ ಎಲ್ಲ ಸಂದರ್ಭಗಳಲ್ಲಿಯೂ ದಾನದ ಉನ್ನತ ಕಾರ್ಯಗಳನ್ನು ಆಚರಿಸುವುದು ಮತ್ತು ತನ್ಮೂಲಕ ವ್ಯಕ್ತಿಯೊಬ್ಬನನ್ನು ಎಲ್ಲ ರೀತಿಯಿಂದಲೂ ನಿಸ್ವಾರ್ಥಿಯನ್ನಾಗಿಯೂ ಮತ್ತು ಮಾನವ ಜನಾಂಗದ ಸೇವೆಗೆ ಸಮರ್ಪಿತನನ್ನಾಗಿಯೂ ಮಾಡಬಹುದಾದ ಆಧ್ಯಾತ್ಮಿಕ ಪ್ರವೃತ್ತಿಯನ್ನು ಗಳಿಸುವುದು. ವೇದಗಳಲ್ಲಿ ಅಡಕವಾಗಿರುವ ಎಲ್ಲ ಪ್ರಾರ್ಥನೆಗಳೂ ಎಲ್ಲ ಮಾನವ ಜೀವಿಗಳ ಕ್ಷೇಮ ಮತ್ತು ಏಳಿಗೆಗಾಗಿ ಭಗವಂತನ ಅನುಗ್ರಹವನ್ನು ಪಡೆಯುವ ಉದ್ದೇಶವನ್ನೇ ಹೊಂದಿವೆಯೆಂದು ಸಾಮಾನ್ಯವಾಗಿ ಹೇಳಬಹುದು. ಯಾವ ಪ್ರಾರ್ಥನೆಯೂ ಪ್ರಾರ್ಥಿಸುವ ಮತ್ತು ವೇದಗಳನ್ನು ಪಠಿಸುವ ಯಾವನೇ ಒಬ್ಬ ವ್ಯಕ್ತಿಯ ಕ್ಷೇಮವನ್ನು ಸೂಚಿಸುವುದಿಲ್ಲ. ಇಲ್ಲಿ ಯಾವಾಗಲೂ ಬಹುವಚನವನ್ನು ಬಳಸಲಾಗಿದೆ. ಉದಾಹರಣೆಗೆ 'ಶನ್ನೋಽಸ್ತು ದ್ವಿಪದೇ ಶಂ ಚತುಷ್ಪದೇ' ಎಂಬ ಪ್ರಾರ್ಥನೆಯಲ್ಲಿ ಭಗವಂತನಿಗೆ ಪ್ರಾರ್ಥನೆಯನ್ನು ಸಲ್ಲಿಸುವ ವ್ಯಕ್ತಿ ಕೇವಲ ತನ್ನ ಕ್ಷೇಮ ಮತ್ತು ಸಂತೋಷಕ್ಕಾಗಿ ಭಗವಂತನ ಅನುಗ್ರಹವನ್ನು ಕೋರುವುದಿಲ್ಲ. ಆದರೆ ಎಲ್ಲ ಮಾನವ ಜೀವಿಗಳು ಮತ್ತು ಎಲ್ಲ ಪ್ರಾಣಿಗಳ ಕ್ಷೇಮ ಮತ್ತು ಸಂತೋಷಕ್ಕಾಗಿ ಅನುಗ್ರಹವನ್ನು ಕೋರುತ್ತಾನೆ. 'ದ್ವಿಪದಃ' ಎಂದರೆ ಎರಡು ಕಾಲುಗಳನ್ನುಳ್ಳ ಜೀವಿಗಳು ಮತ್ತು 'ಚತುಷ್ಪಾತ್' ಎಂದರೆ ನಾಲ್ಕು ಕಾಲುಗಳನ್ನುಳ್ಳ ಜೀವಿಗಳು ಎಂದರ್ಥ. ವೇದಗಳು ಮನುಷ್ಯನೊಬ್ಬನು ಮನಸ್ಸಿನಲ್ಲಿ ಇರಿಸಿಕೊಂಡಿರುವ ನಾನಾ ಬಗೆಯ ಬಯಕೆಯ ವಸ್ತುಗಳಿಗಾಗಿ ಯಜ್ಞಗಳನ್ನಾಚರಿಸುವಂತೆ ವಿಧಿಸುತ್ತದೆ. ಸ್ವರ್ಗದಲ್ಲಿ ಸ್ಥಾನದಂತಹ ಬಯಸಿದ ವಸ್ತುಗಳ ಪ್ರಾಪ್ತಿಗಾಗಿ ಯಜ್ಞಗಳನ್ನು ಆಚರಿಸಲಾಗುವುದೆಂದು ಸಾಮಾನ್ಯವಾಗಿ ಹೇಳಲಾಗಿದೆ. ಆದರೆ, ಭಗವಂತನ ಅನುಗ್ರಹವನ್ನು ಪ್ರಾರ್ಥಿಸುವ ಯಜ್ಞ ಮತ್ತು ಯಜ್ಞದಲ್ಲಿ ಪಠಿಸಲಾಗುವ ಮಂತ್ರಗಳ ಮುಖ್ಯ ಉದ್ದೇಶಗಳಲ್ಲೊಂದು ವ್ಯವಸಾಯದ ಚಟುವಟಿಕೆಗಳು ಮತ್ತು ಆಹಾರ

ಧಾನ್ಯಗಳ ಉತ್ಪಾದನೆಗೆ ಅಗತ್ಯವಾದ ಸುವೃಷ್ಟಿಗಾಗಿ ಎಂಬುದನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಲಾಗಿದೆ. ವೇದಗಳಲ್ಲಿಯೂ ಇದನ್ನು ಸೂಚಿಸಲಾಗಿದೆ.

'ದ್ರಪ್ಸಃ ಚಸ್ಕಂದ ಪೃಥಿವೀಮನು ದ್ಯಾಮಿಮಂ ಚ ಯೋನಿಮಮುಂ ಯಶ್ಚ ಪೂರ್ವಃ।
ತೃತೀಯ ಯೋನಿಮನುಸಂಚರಂತಂ ದ್ರಪ್ಸಂ ಜುಹೋಮ್ಯನು ಸಪ್ತಹೋತ್ರಾಃ ॥

(ತೈ. ಸಂ. ಕಾಂ. ೪)

ಭಗವದ್ಗೀತೆಯ ಅಧ್ಯಾಯ ೩, ೧೪ನೆಯ ಶ್ಲೋಕದಲ್ಲಿ ಯಜ್ಞಗಳಿಂದಲೇ ಮಳೆಯು ಫಲಿಸುವುದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ।
ಯಜ್ಞಾದ್ಭವತಿ ಪರ್ಜನ್ಯಃ ಯಜ್ಞಃ ಕರ್ಮಸಮುದ್ಭವಃ ॥

(ಭಗವದ್ಗೀತಾ ೩-೧೪)

ಮನು ತನ್ನ ಸ್ಮೃತಿಯಲ್ಲಿ (ಸ್ಮೃತಿಗಳಲ್ಲೆಲ್ಲ ಅತ್ಯಂತ ಪ್ರಮಾಣಭೂತವೆಂದು ಪರಿಗಣಿಸಲಾಗಿದೆ) ಅಗ್ನಿಗೆ ಸಮರ್ಪಿಸಿದ ಆಹುತಿಗಳು ಸೂರ್ಯನನ್ನು ತಲುಪುವುವೆಂದೂ ಮತ್ತು ಸೂರ್ಯನಿಂದ ಮಳೆಯ ಮೋಡಗಳು ಉತ್ಪನ್ನವಾಗುವುವೆಂದೂ ತಿಳಿಸುತ್ತಾನೆ. ಈ ಪದ್ಯದ ಮೇಲಣ ಸಾಯಣನ ಭಾಷ್ಯದಲ್ಲಿ, ಸೂರ್ಯನನ್ನು ತಲುಪುವಲ್ಲಿ ಮತ್ತು ಅದರಿಂದ ಸೂರ್ಯನ ಕಿರಣಗಳ ಮೂಲಕವಾಗಿ ಮಳೆಯನ್ನು ಬರಿಸುವುದರಲ್ಲಾಗಲಿ ಹೋಮದ ಸಫಲತೆಯನ್ನು ಸೂಚಿಸುತ್ತಿರುವುದೆಂದು ಮನುವಿನ ಶ್ಲೋಕವನ್ನು ಉಲ್ಲೇಖಿಸಲಾಗಿದೆ. ಮೋಡಗಳು ಪ್ರಪಂಚದ ಮೇಲೆ ಮಳೆಗರೆಯುತ್ತವೆ. ಅನುಕ್ರಮವಾಗಿ ಎಲ್ಲ ಜೀವಿಗಳಿಗೂ ಪೋಷಣೆಯೊದಗಿಸುವ ಆಹಾರೋತ್ಪಾದನೆಗೆ ಮಳೆ ನೆರವಾಗುತ್ತದೆ.

ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ ।
ಆದಿತ್ಯಾಜ್ಜಾಯತೇ ವೃಷ್ಟಿಃ ವೃಷ್ಟೇರನ್ನಂ ತತಃ ಪ್ರಜಾಃ ॥

(ಮನುಸ್ಮೃತಿ)

ಆದ್ದರಿಂದಲೇ ಮಾನವಕುಲದ ಒಳಿತಗಾಗಿ ವೇದಗಳು ಯಜ್ಞಗಳ ಆಚರಣೆಯನ್ನು ವಿಧಿಸುತ್ತವೆಯೆಂದು ಹೇಳಲಾಗಿದೆ. ಆದ್ದರಿಂದ ಯಜ್ಞ ಮಾನವಕುಲದ ಸೇವಾಕಾರ್ಯವಾಗಿದೆ. ಅದರೆ ಪ್ರಮಾಣವನ್ನು ಅಂಗೀಕರಿಸುವವರಿಗೆ ವೇದಗಳು ಜೀವನದಲ್ಲಿ ಐದು ಬಗೆಯ ಕರ್ತವ್ಯಗಳ ಆಚರಣೆಯನ್ನು ವಿಧಿಸುತ್ತವೆ. ಇದನ್ನು 'ಮಹಾಯಜ್ಞ'ವೆಂದು ಕರೆಯಲಾಗಿದೆ. ಈ ಕರ್ತವ್ಯಗಳಾವುವೆಂದರೆ (೧) ದೇವಯಜ್ಞ, (೨) ಪಿತೃಯಜ್ಞ, (೩) ಭೂತಯಜ್ಞ, (೪) ಮನುಷ್ಯಯಜ್ಞ, ಮತ್ತು (೫) ಬ್ರಹ್ಮಯಜ್ಞ .

ದೇವಯಜ್ಞವೆಂಬುದು ದೇವತೆಗಳನ್ನು ಒಲಿಸಿಕೊಳ್ಳಲು ಮಾಡುವ ಮತಕ್ರಿಯಾವಿಧಿಗಳು. ಪಿತೃಯಜ್ಞವೆಂಬುದು ಪಿತೃಗಳನ್ನು ಅಥವಾ ಪಿತೃದೇವತೆಗಳನ್ನು ಒಲಿಸಿಕೊಳ್ಳುವುದಕ್ಕಾಗಿರುವ ಆಚರಣೆಗಳು. ಭೂತಯಜ್ಞವೆಂದರೆ ಎಲ್ಲ ಪ್ರಾಣಿಗಳಿಗೆ ಆಹಾರ ಮತ್ತು ನೆರವನ್ನು ನೀಡುವುದು. ಮನುಷ್ಯಯಜ್ಞವೆಂದರೆ ಮನುಷ್ಯರಿಗೆ ಆಹಾರ ಮತ್ತು ಒತ್ತಾಸೆ ನೀಡುವುದು. ಬ್ರಹ್ಮಯಜ್ಞವೆಂದರೆ ಎಲ್ಲ ಧಾರ್ಮಿಕ ಗ್ರಂಥಗಳ ಅಧ್ಯಯನ ಮತ್ತು ಪಠನದಿಂದ ಆಧ್ಯಾತ್ಮಿಕತೆಯನ್ನು ಸಾಧಿಸುವುದು. ವೇದಗಳಲ್ಲಿ ಇವುಗಳನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಕೆಲವೊಮ್ಮೆ ಬ್ರಹ್ಮಯಜ್ಞವನ್ನು ಋಷಿಯಜ್ಞವೆಂದೂ ತಿಳಿಸಲಾಗಿದೆ. ಎಂದರೆ ವೈದಿಕ ಮಂತ್ರಗಳಿಗೆ ಕಾರಣೀಭೂತರಾಗಿರುವ ಋಷಿಗಳಿಗೆ ನಾವು ಸಲ್ಲಿಸಬೇಕಾದ ಕರ್ತವ್ಯ. ಅನೇಕ ವೇಳೆ ವೇದಗಳ ಈ ಚಿಕ್ಕಭಾಗದ ಮೇಲಣ ವ್ಯಾಖ್ಯಾನಗಳಲ್ಲಿ 'ಯಜ್ಞ' ಎಂಬುದಕ್ಕೆ ಈ ಸೀಮಿತವಾದ ಅರ್ಥವನ್ನು ನೀಡಲಾಗಿದ್ದರೂ, ಇಲ್ಲಿ ಅದನ್ನು ಬಳಸಲಾಗಿರುವ ಅರ್ಥಕ್ಕೇ ಅದನ್ನು ಮಿತಿಗೊಳಿಸಬೇಕಾದ ಅವಶ್ಯಕತೆಯಿಲ್ಲ. ವ್ಯಕ್ತಿಯೊಬ್ಬನ ಸಹಮಾನವರಿಗೆ ಮಾಡಲಾಗುವ, ತನ್ಮೂಲಕ ಮತ್ತೊಬ್ಬ ವ್ಯಕ್ತಿಗೆ ಯಾತನೆ ಮತ್ತು ನೋವನ್ನು ಹೋಗಲಾಡಿಸುವ ಮತ್ತು ಸಹಾಯವನ್ನು ನೀಡುವ ಯಾವುದೇ ಉಪಕಾರಬುದ್ಧಿಯ ಕಾರ್ಯವು 'ಯಜ್ಞ'ವೆಂಬ ಪದದ ವ್ಯಾಪ್ತಿಯೊಳಗೆ ಬರುತ್ತದೆ. 'ಯಜ್ಞಕ್ಕೆ ಈ ವ್ಯಾಪಕವಾದ ಅರ್ಥವನ್ನು ಸ್ವಯಂ ಭಗವಂತನೇ ಭಗವದ್ಗೀತೆಯ ನಾಲ್ಕನೆಯ ಅಧ್ಯಾಯದಲ್ಲಿ ನೀಡಿದ್ದಾನೆ. ಅಲ್ಲಿ ಅನೇಕ ಯಜ್ಞಗಳನ್ನು ತಿಳಿಸಲಾಗಿದೆ. ಮತ್ತು ಅವುಗಳೆಂದರೆ ದ್ರವ್ಯಯಜ್ಞ, ತಪೋಯಜ್ಞ, ಯೋಗಯಜ್ಞ, ಸ್ವಾಧ್ಯಾಯಯಜ್ಞ, ಜ್ಞಾನಯಜ್ಞ ಇತ್ಯಾದಿ. ಆದ್ದರಿಂದ ಮನುಷ್ಯಯಜ್ಞಕ್ಕೆ ಯಾವುದೇ ಸಂಬಂಧವಿರುವ ಸಂದರ್ಭದಲ್ಲಿ 'ಯಜ್ಞ'ವೆಂಬ ಪದವನ್ನು ಬಳಸಿದಾಗ ಅದನ್ನು ಎಲ್ಲ ಜೀವಿಗಳಿಗೂ ಸಲ್ಲಿಸಿದ ಸಹಾಯ ಮತ್ತು ಸೇವೆ ಎಂಬ ಅರ್ಥವನ್ನು ಹೊಂದಿದೆ ಎಂದೇ ತಿಳಿದುಕೊಳ್ಳಬೇಕು. ಇದೇ ರೀತಿಯಲ್ಲಿ ಭೂತಯಜ್ಞದ ಯಾವುದೇ ಸಂಬಂಧದ ಸಂದರ್ಭದಲ್ಲಿಯೂ 'ಯಜ್ಞ' ಪದಕ್ಕೆ ಅದೇ ಅರ್ಥವನ್ನು ನೀಡಬೇಕು. ಮನು ಪ್ರತಿಯೊಬ್ಬ ಹಿಂದುವಿಗೂ ಈ ಐದು ವಿಧವಾದ ಕರ್ತವ್ಯವನ್ನು ವಿಧಿಸುತ್ತಾನೆ. ಆತ ತನ್ನ ಸ್ಮೃತಿಯ ೩ನೆಯ ಅಧ್ಯಾಯದ ೭೦ರಿಂದ ೭೧ನೆಯ ಶ್ಲೋಕಗಳಲ್ಲಿ ಅನುಕ್ರಮವಾಗಿ 'ಯಜ್ಞ'ವೆಂಬ ಪದಕ್ಕೆ ಸೀಮಿತ ಅರ್ಥ, ಜೊತೆಗೆ ವ್ಯಾಪಕ ಅರ್ಥವೆರಡನ್ನೂ ನೀಡುತ್ತಾನೆ.

ಪಂಚ ವಾ ಏತೇ ಮಹಾಯಜ್ಞಾಃ ಸತತಿ ಪ್ರತಾಯಂತೇ ಸತತಿ ಸಂತಿಷ್ಠಂತೇ ।
ದೇವಯಜ್ಞಃ ಪಿತೃಯಜ್ಞೋ ಮನುಷ್ಯಯಜ್ಞೋ ಬ್ರಹ್ಮಯಜ್ಞ ಇತಿ ॥

(ತೈ. ಆರಣ್ಯಕಮ್)

ಅಧ್ಯಾಪನಂ ಬ್ರಹ್ಮಯಜ್ಞಃ ಪಿತೃಯಜ್ಞಸ್ತು ತರ್ಪಣಮ್ ।
ಹೋಮೋ ದೈವೋ ಬಲಿಃ ಭೌತೋ ನೃಯಜ್ಞೋಽ ತಿಥಿ ಪೂಜನಮ್ ॥ ೭೦ ॥
ದೇವತಾತಿಥಿಭೃತ್ಯಾನಾಂ ಪಿತೄಣಾಮಾತ್ಮನಶ್ಚ ಯಃ ।
ನ ನಿರ್ವಪತಿ ಪಂಚಾನಾಂ ಉಚ್ಛ್ವಸನ್ ನ ಸ ಜೀವತಿ ॥ ೭೨ ॥

(ಮನುಸ್ಮೃತಿ)

೭೨ನೆಯ ಶ್ಲೋಕದಲ್ಲಿ ನೀಡಲಾಗಿರುವ ವ್ಯಾಪಕ ಅರ್ಥವನ್ನು ಶ್ರೇಷ್ಠ ತಮಿಳು ಸಂತರು ಮತ್ತು ಅಮರಕೃತಿಯಾದ 'ಕುರಳ್'ನ ಲೇಖಕರು ಹೀಗೆ ಸಮರ್ಥಿಸಿದ್ದಾರೆ.

'ಪೂರ್ವಜರು, ದೇವತೆಗಳು, ಅತಿಥಿಗಳು, ಬಂಧುಗಳು ಮತ್ತು ತನ್ನದೇ ಆತ್ಮಕ್ಕೆ ಗೃಹಸ್ಥನೊಬ್ಬನು ಈಡೇರಿಸಬೇಕಾದ ಅವಶ್ಯ ಕರ್ತವ್ಯದ ಪರಮೋಚ್ಚ ಸದ್ಗುಣವು ಇದೇ ಆಗಿದೆ.'

ತೆನ್ ಪುಲತ್ತಾರ್ ದೈವಂ ವಿರಂದು ಒಕಲ್‌ತಾನ್ ।
ಎನ್ರಾಂ ಕೈಪುಲತ್ತಾನೋಂಬಲ್ ತಲೈ ॥

ಈ ಉಲ್ಲೇಖಗಳಿಂದ ಸ್ಪಷ್ಟವಾಗುವುದೇನೆಂದರೆ ವೇದಗಳು ಅತ್ಯಂತ ನಿರ್ದಿಷ್ಟವಾಗಿ ದಾನ, ಪ್ರೀತಿ ಮತ್ತು ಸೇವೆಯ ಕರ್ತವ್ಯಗಳನ್ನು ಧಾರ್ಮಿಕ ಕರ್ತವ್ಯಗಳೆಂದು ದೃಢಪಡಿಸಿವೆ.

* * * *

೨೬. ಉಪನಿಷತ್ತುಗಳಲ್ಲಿ

ಆಧ್ಯಾತ್ಮಿಕ ಜ್ಞಾನಕ್ಕೆ ಮುಖ್ಯವಾಗಿ ಮೀಸಲಾಗಿರುವ ಉಪನಿಷತ್ತು ವೇದಗಳ ಪ್ರಮುಖವಾದ ಒಂದು ಭಾಗ. ಉಪನಿಷತ್ತಿನಲ್ಲಿಯೂ ಸಹ, ಆಧ್ಯಾತ್ಮಿಕ ಜ್ಞಾನವನ್ನು ಪಡೆಯಲು ಆಧ್ಯಾತ್ಮಿಕ ಶಿಸ್ತಿನ ಒಂದು ಭಾಗವಾಗಿ ದಾನ ಮತ್ತು ಅನುಕಂಪೆಯ ಅವಶ್ಯಕತೆಯನ್ನು ಉಚಿತ ರೀತಿಯಲ್ಲಿ ಸಮರ್ಥಿಸಲಾಗಿದೆ. ಬೃಹದಾರಣ್ಯಕ ಉಪನಿಷತ್ತಿನ (ಅತ್ಯಂತ ಪ್ರಮುಖವಾದ ಉಪನಿಷತ್ತುಗಳಲ್ಲಿ ಒಂದು) ಅಧ್ಯಾಯ ೫, ಎರಡನೆಯ ಭಾಗದಲ್ಲಿ, ಜೀವಕೋಟಿಗೆ ಪ್ರಭುವಾದ ಪ್ರಜಾಪತಿಯು ಮಾನವಕುಲಕ್ಕೆ ಸಂದೇಶವನ್ನು ನೀಡಿರುವನೆಂದು ಹೇಳಲಾಗಿರುವ ಪ್ರಸಿದ್ಧವಾದ ಭಾಗವೊಂದಿದೆ. ಈ ಸಂದೇಶವನ್ನು ನೀಡಿರುವ ಸಂದರ್ಭವನ್ನು ಕಥೆಯೊಂದರ ರೂಪದಲ್ಲಿ ವಿವರಿಸಲಾಗಿದೆ. ಅನುಕ್ರಮವಾಗಿ ದಾನಶೀಲತೆ, ಭೂತದಯೆ ಮತ್ತು ಆತ್ಮನಿಗ್ರಹ ಎಂಬ ಅರ್ಥವನ್ನುಳ್ಳ ದಾನ, ದಯಾ ಮತ್ತು ದಮ ಎಂಬ ಮೂರು ಪದಗಳಲ್ಲಿ ಸಂದೇಶವನ್ನು ನೀಡಲಾಗಿದೆ.

ಒಮ್ಮೆ ದೇವತೆಗಳು, ಅಸುರರು ಮತ್ತು ಮನುಷ್ಯರು ಸೃಷ್ಟಿಗೊಂಡಿರುವ ಜೀವಿಗಳಿಗೆಲ್ಲ ಪ್ರಭುವಾದ ಪ್ರಜಾಪತಿಯ ಬಳಿಗೆ ವಿದ್ಯೆಗೋಸ್ಕರವಾಗಿ ತೆರಳಿದರು. ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ ದೇವತೆಗಳು 'ದಯಮಾಡಿ ನಮಗೆ ಬೋಧನೆ ಮಾಡಿ' ಎಂದು ನುಡಿದರು. ಪ್ರಜಾಪತಿ 'ದ' ಎಂಬ ಅಕ್ಷರವನ್ನು ನುಡಿದನು, 'ನಿಮಗೆ ಅರ್ಥವಾಯಿತೇ?' ಎಂದು ಅವರನ್ನು ಪ್ರಶ್ನೆಮಾಡಿದನು. 'ಹೌದು, ನಾವು ಅರ್ಥಮಾಡಿಕೊಂಡಿದ್ದೇವೆ' ಎಂದು ಅವರು ಉತ್ತರ ನೀಡಿದರು. ಇದೇ ರೀತಿಯಲ್ಲಿ ಮನುಷ್ಯರು 'ದಯಮಾಡಿ ನಮಗೆ ಬೋಧನೆ ಮಾಡಿ' ಎಂದು ಪ್ರಜಾಪತಿಯನ್ನು ಕೇಳಿದರು. ಪ್ರಜಾಪತಿ 'ದ' ಎಂಬ ಅದೇ ಅಕ್ಷರವನ್ನು ನುಡಿದನು. ಅವರೂ ಸಹ ತಾವು ಅರ್ಥಮಾಡಿಕೊಂಡಿರುವುದಾಗಿ ನುಡಿದರು. ಹೀಗೆಯೇ ಅಸುರರಿಗೂ 'ದ' ಎಂಬ ಅಕ್ಷರವನ್ನೇ ನುಡಿದನು. ಈ ವಿಷಯವನ್ನೇ ಅಶರೀರವಾಣಿಯೊಂದು ಮೋಡಗಳ ಮೂಲಕ 'ದ.ದ.ದ' ಎಂದು ಪುನರುಚ್ಚರಿಸಿತು.

ಉಪನಿಷತ್ತು ಮತ್ತೂ ಸೇರಿಸುವುದೇನೆಂದರೆ ಪ್ರತಿಬಾರಿ ನಾವು ಗುಡುಗಿನ ಮೊಳಗಿನ ಧ್ವನಿಯನ್ನು ಕೇಳಿದಾಗ ಅಶರೀರವಾಣೀ 'ದ' ಎಂಬ ಧ್ವನಿಯಿಂದ ಪ್ರಾರಂಭವಾಗುತ್ತಿರುವ ಮೂರು ಪದಗಳನ್ನು ಉಚ್ಚರಿಸುತ್ತಿದೆಯೆಂದು ನಾವು

ನೆನಪಿಸಿಕೊಳ್ಳಬೇಕು. ಇದು ಮಾನವಕುಲಕ್ಕೆ ಸಂದೇಶದ ಪ್ರಾಮುಖ್ಯತೆಯನ್ನು ಒತ್ತಿಹೇಳುವುದಕ್ಕಾಗಿ ಮಾತ್ರ. ಇದೇ ಬಗೆಯ ಸಂದೇಶವೊಂದನ್ನು ಸನತ್ಸುಜಾತನು ಧೃತರಾಷ್ಟ್ರನಿಗೆ ನೀಡಿದ್ದಾನೆ. ಭಾಗವತನೆಂದು ತನ್ನನ್ನು ಕರೆದುಕೊಳ್ಳುವ ಗ್ರೀಸ್ ದೇಶದಲ್ಲೊಬ್ಬ ನಿಲ್ಲಿಸಿರುವ ಹಿಲಿಯೋಡೋರಸ್ ದುಂಡುಕಂಬ 'ಧನ, ಧರ್ಮ ಮತ್ತು ಅಪ್ರಮಾದ' ಎಂಬ ಮೂರು ಪದಗಳ ಸಂದೇಶವನ್ನೊಳಗೊಂಡಿದೆ.

ಇತರ ರಾಷ್ಟ್ರಗಳ ಧರ್ಮಗ್ರಂಥಗಳಲ್ಲಿಯೂ ಮೂರು ಪದಗಳಲ್ಲಿ ಸಂದೇಶವನ್ನು ನೀಡುವ ಇದೇ ಬಗೆಯ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಉದಾಹರಣೆಗೆ ಬೈಬಲ್‌ನ ಹೊಸ ಒಡಂಬಡಿಕೆಯಲ್ಲಿ, ಕೊರಿಂಥಿಯನ್ನರಿಗೆ ಸಂತ ಪಾಲನ ಪತ್ರದಲ್ಲಿ ಭರವಸೆ, ಶ್ರದ್ಧೆ ಮತ್ತು ದಾನ ಎಂಬ ಮೂರು ಪದಗಳಲ್ಲಿ ಸಂದೇಶವು ಅಡಕವಾಗಿದೆ. ಅವೆಲ್ಲವುಗಳಲ್ಲಿ ದಾನವು ಅತ್ಯಂತ ಶ್ರೇಷ್ಠವಾದುದೆಂದು ಬೈಬಲ್ ತಿಳಿಸುತ್ತದೆ. 'ನಾನು ಮಾನವರ ಮತ್ತು ದಿವ್ಯಪುರುಷರ ಭಾಷೆಯಲ್ಲಿ ಮಾತನಾಡಿಯೂ ದಾನಗುಣವನ್ನು ಹೊಂದಿಲ್ಲವಾದರೆ ನಾನು ಧ್ವನಿಗೈಯ್ಯುವ ಹಿತ್ತಾಳೆಯ ವಾದ್ಯದಂತೆಯೋ ಅಥವಾ ಕಂಚಿನ ತಾಳದಂತೆಯೋ ಆಗಿರುತ್ತೇನೆ.' ಮೇಲೆ ತಿಳಿಸಿರುವ ಕಥೆಯಲ್ಲಿ ದೇವತೆಗಳು ಮತ್ತು ಅಸುರರ ಉಲ್ಲೇಖವಿದ್ದರೂ, ಉಪನಿಷತ್ತಿನ ಈ ಭಾಗದ ಮೇಲಣ ತಮ್ಮ ಭಾಷ್ಯದಲ್ಲಿ ಶ್ರೀ ಶಂಕರಾಚಾರ್ಯರು ಈ ಕಥೆಯನ್ನು ಅಕ್ಷರಶಃ ಗ್ರಹಿಸಬೇಕಾಗಿಲ್ಲವೆಂದು ಯುಕ್ತವಾಗಿಯೇ ಅಭಿಪ್ರಾಯಪಟ್ಟಿದ್ದಾರೆ. ಮನುಷ್ಯರಲ್ಲದೆ ದೇವತೆಗಳಾಗಲಿ, ಅಸುರರಾಗಲಿ ಇಲ್ಲ. ಮನುಷ್ಯರ ನಡುವೆ ಆತ್ಮ ನಿಯಂತ್ರಣದ ಕೊರತೆಯುಳ್ಳವರಾಗಿದ್ದು ಉಳಿದಂತೆ ಅನೇಕ ಒಳ್ಳೆಯ ಗುಣ ಗುಣಗಳಿಂದೊಡಗೂಡಿದವರನ್ನು ದೇವತೆಗಳಿಗೆ ಹೋಲಿಸಬಹುದು. ಸ್ವಾರ್ಥಿಗಳು ಮತ್ತು ದುರಾಸೆಯುಳ್ಳವರು ಕಥೆಯಲ್ಲಿನ ಮನುಷ್ಯರು ಮತ್ತು ಕ್ರೂರಿಗಳೂ ಮತ್ತು ಇತರರಿಗೆ ಗಾಸಿಯಿಂಟುಮಾಡುವವರೂ ಅಸುರರು. ಆದ್ದರಿಂದ, ಪ್ರಜಾಪತಿಯು ಮನುಷ್ಯರಿಗೆಂದೇ ಈ ಸಂದೇಶವನ್ನು ತಿಳಿಸುತ್ತಿದ್ದಾನೆ ಎಂಬುದು ಸ್ಪಷ್ಟ. ಏಕೆಂದರೆ, ಕೆಲವು ಜನರು ಆತ್ಮನಿಯಂತ್ರಣವಿಲ್ಲದವರೆಂದೂ, ಮತ್ತೆ ಕೆಲವರು ಸ್ವಾರ್ಥಿಗಳೆಂದೂ, ಮತ್ತೂ ಕೆಲವರು ಕ್ರೂರಿಗಳೆಂದೂ ಕಂಡುಬಂದಿದ್ದಾರೆ. ಈ ಭಾಗದ ಮೇಲಣ ಪರ್ಯಾಲೋಚನೆ ಪ್ರತಿಯೊಬ್ಬನಿಗೂ ನಮ್ಮ ಪ್ರಾಚೀನ ಮೇರುಕೃತಿಗಳು ದಾನ, ಪ್ರೀತಿ ಮತ್ತು ಸೇವೆಯ ಶ್ರೇಷ್ಠ ಗುಣಗಳ ಮೇಲೆ ಇರಿಸಿರುವ ಮಹತ್ವವನ್ನು ಮನಗಾಣಿಸುತ್ತದೆ. ಈ ಸದ್ಗುಣಗಳನ್ನು ಕೇವಲ ಪ್ರಶಂಸನೀಯವಾದ ಅರ್ಹತೆಗಳೆಂದು ಮಾತ್ರವೇ ಅಲ್ಲ, ಆದರೆ ದೈವತ್ತ್ವದ ಸಾಕ್ಷಾತ್ಕಾರಕ್ಕೆ ಸೋಪಾನಗಳೆಂದೂ ಪರಿಗಣಿಸಲಾಗಿದೆ.

* * * *

೨೭. ರಾಮಾಯಣದಲ್ಲಿ

ಬಹುಮಟ್ಟಿಗೆ ನಮ್ಮ ಜನರ ನಡುವೆ ಸಂಸ್ಕೃತಿಯನ್ನು ರೂಪಿಸುವ ಮತ್ತು ಪಸರಿಸುವ ವಿಷಯದಲ್ಲಿ ಅನಾದಿಕಾಲದಿಂದ ಸಾಧನವಾಗಿರುವ ಅತ್ಯಂತ ಜನಪ್ರಿಯ ಮೇರುಕೃತಿ ರಾಮಾಯಣ. ಹಲವು ಸಾವಿರ ವರ್ಷಗಳವರೆಗೆ ಈ ಮಹಾಕಾವ್ಯ ಹಿಂದೂ ಮನಸ್ಸುಗಳ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರಿದೆ. ರಾಮಾಯಣದ ನಾಯಕ ಭಗವಾನ್ ವಿಷ್ಣುವಿನ ಅವತಾರಗಳಲ್ಲೊಬ್ಬನಾದ ರಾಮ. ಆದರೆ, ಆತ ತನ್ನನ್ನು ತಾನು ಓರ್ವ ಮಾನವನೆಂದು ಪರಿಗಣಿಸಿದ ಮತ್ತು ಸಾಮಾನ್ಯ ಮಾನವನಂತೆ ಅನೇಕ ಕಷ್ಟಗಳು ಮತ್ತು ಯಾತನೆಗಳನ್ನು ಅನುಭವಿಸಿದ. ಆತ ಧರ್ಮದ ಸಾಕಾರರೂಪವಾಗಿದ್ದ ಮತ್ತು ಮಾನವನಾಗಿಯೇ ಪರಿಪೂರ್ಣತೆಯನ್ನು ಪಡೆದ. ಜಾತಿ ಮತ್ತು ಜೀವನದಲ್ಲಿನ ಸ್ಥಾನಮಾನಗಳನ್ನು ಪರಿಗಣಿಸದೆಯೇ ಎಲ್ಲ ಜೀವಿಗಳಿಗೂ ಆತ ತೋರಿದ ಸ್ನೇಹ ಮತ್ತು ಪ್ರೀತಿ ಆತನ ಅತ್ಯಂತ ಶ್ರೇಷ್ಠ ಗುಣವಾಗಿತ್ತು. ಬೇಡರ ಜಾತಿಗೆ ಸೇರಿದವನಾದ ಮತ್ತು ಅಂಬಿಗನ ವೃತ್ತಿಯನ್ನು ನಡೆಸುತ್ತಿದ್ದ ಗುಹನನ್ನು ಆತ ತನ್ನ ಸ್ವಂತ ಸೋದರನೆಂಬಂತೆ ಗೌರವಿಸಿದ.

ಆತನ ಪ್ರೀತಿ ಮಾನವರ ಹಂತವನ್ನು ಮೀರಿ ನಡೆದ ಅರೆಮಾನವ ಜೀವಿಗಳಾದ ಕಪಿಗಳಿಗೂ ಮತ್ತು ಕ್ರೂರ ಜೀವಿಗಳಾದ ರಾಕ್ಷಸರಂತಹವರಿಗೂ ವ್ಯಾಪಿಸಿತ್ತು. ರಾಮನ ಉದಾತ್ತ ಗುಣಗಳನ್ನು ವರ್ಣಿಸುತ್ತ ವಾಲ್ಮೀಕಿಗಳು, ಆತ ಇತರರ ನೋವಿಗಾಗಿ ತೀವ್ರವಾಗಿ ಮರುಗುವನೆಂದೂ ಮತ್ತು ಅವರ ದುಃಖವಷ್ಟೇ ಅಲ್ಲದೆ ಅವರ ಸಂತೋಷಗಳಲ್ಲಿಯೂ ಪಾಲ್ಗೊಳ್ಳುತ್ತಿದ್ದನೆಂದು ವರ್ಣಿಸಿದ್ದಾರೆ (*ರಾಮಾಯಣ* : ಅಯೋಧ್ಯಾಕಾಂಡ : ಶ್ಲೋಕ ೪೦ –೪೧)

ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ ।
ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ ॥

ಆತ ತನ್ನ ಪ್ರಜೆಗಳಲ್ಲಿ ಪ್ರತಿಯೊಬ್ಬರಿಗೂ ಸ್ನೇಹಿತನಾಗಿದ್ದ. ದಶರಥ ಮಹಾರಾಜ ಕೈಕೇಯಿಗೆ ನೀಡಿದ್ದ ವರಕ್ಕನುಗುಣವಾಗಿ ಆತ ಕಾಡಿಗೆ ಹೊರಡಬೇಕಾಗಿ ಬಂದಾಗ, ಆತ ತನ್ನ ಐಶ್ವರ್ಯ ಮತ್ತು ಇತರ ಎಲ್ಲ ವಸ್ತುಗಳನ್ನೂ ಅಯೋಧ್ಯೆಯ ಎಲ್ಲ ಬಡಜನರಿಗೆ ದಾನಮಾಡಿದನು. ಕೇವಲ ನೋಟದಿಂದಲೇ ಬಡತನ ಎದ್ದು ಕಾಣುತ್ತಲಿದ್ದ ತ್ರಿಜಟನೆಂಬ ಹೆಸರಿನ ಅತ್ಯಂತ ಬಡವನಾದವನನ್ನು ತನ್ನ ಉದಾರವಾದ ಗೋದಾನಕ್ಕೆ ಅತ್ಯಂತ ಅರ್ಹನಾದ ವ್ಯಕ್ತಿಯೆಂದು ಆಯ್ಕೆ ಮಾಡಿದನು. ಅಯೋಧ್ಯೆಯ

ಜನರು ಆತನನ್ನು ಎಷ್ಟೊಂದು ಉತ್ಕಟವಾಗಿ ಪ್ರೀತಿಸುತ್ತಿದ್ದರೆಂದರೆ ಅವರು ಆತನನ್ನು ಅರಣ್ಯಕ್ಕೆ ಹಿಂಬಾಲಿಸಲು ನಿರ್ಧರಿಸಿದರು. ಅವರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ರಾಮನು ಜನರೆಲ್ಲರೂ ಗಾಢನಿದ್ರೆಯಲ್ಲಿದ್ದ ಸಮಯದಲ್ಲಿ ಅಯೋಧ್ಯೆಯನು ಬಿಟ್ಟು ಹೊರಟನು. ರಾಮನು ಅರಣ್ಯದಲ್ಲಿದ್ದ ಅವಧಿಯಲ್ಲಿ ಅಯೋಧ್ಯೆಯಲ್ಲಿ ಪ್ರತಿಯೊಂದು ಮನೆಯೂ ದುಃಖದಿಂದ ತುಂಬಿತ್ತು ಮತ್ತು ಯಾವುದೇ ಮನೆಯಲ್ಲಿ ಒಲೆಯಲ್ಲಿ ಬೆಂಕಿ ಉರಿಯಲಿಲ್ಲ. ಆತ ಜನರಿಗೆ ಅನುಗ್ರಹಿಸಿದ ಗಾಢವಾದ ವಾತ್ಸಲ್ಯ ಮತ್ತು ಪ್ರೀತಿ ಅಪ್ಪರಮಟ್ಟಿನದಾಗಿತ್ತು ಮತ್ತು ಅವರಲ್ಲಿ ಪ್ರತಿಯೊಬ್ಬರಿಗೂ ಆತ ಮಾಡಿದ ಸಹಾಯ ಅಪ್ಪರಮಟ್ಟಿಗಿತ್ತು.

ಆತ ಅರಣ್ಯಕ್ಕೆ ತೆರಳಿದ ಸಮಯದಲ್ಲಿ ಆತ ದೊರೆಯಾಗಿರಲಿಲ್ಲವೆಂಬುದನ್ನೂ ಮತ್ತು ಕೇವಲ ದಶರಥ ಮಹಾರಾಜನ ಮಗನಾಗಿದ್ದನೆಂಬುದನ್ನೂ ಜ್ಞಾಪಕದಲ್ಲಿರಿಸಿಕೊಳ್ಳಬೇಕು. ಆತನ ಹದಿನಾಲ್ಕು ವರ್ಷಗಳ ಅರಣ್ಯವಾಸದ ಅವಧಿಯಲ್ಲಿ ಆತ ಅದರಲ್ಲಿ ವಾಸಮಾಡುತ್ತಲಿದ್ದ ಪ್ರತಿಯೊಬ್ಬ ಋಷಿಯ ಮನೆಗೂ ಭೇಟಿ ನೀಡುವುದನ್ನು ಕರ್ತವ್ಯವೆಂದು ಭಾವಿಸಿದ ಮತ್ತು ಅವರಿಗಾಗಿಯೇ ಅರಣ್ಯವಾಸಿಗಳಿಗೆ ಹೇಳಲಾಗದ ಕಷ್ಟಕೋಟಲೆಗಳನ್ನು ನೀಡುತ್ತಿದ್ದ ಖರ ಮತ್ತಿತರ ರಾಕ್ಷಸರನ್ನು ಕೊಲ್ಲಬೇಕಾಗಿ ಬಂತು. ಅನಂತರ ಆತ ವಾನರರೊಡನೆ ಮೈತ್ರಿಯನ್ನು ಮಾಡಿಕೊಂಡ ಮತ್ತು ಅವರನ್ನು ತನ್ನ ಆತ್ಮೀಯ ಸೋದರರೆಂಬಂತೆ ನಡೆಸಿಕೊಂಡ ಮತ್ತು ಅವರನ್ನು ಹಾಗೆಯೇ ಗೌರವಿಸಿದ. ಯುದ್ಧರಂಗದಲ್ಲಿ ರಾವಣನ ಸಾವಿನ ಸಮಾಚಾರವನ್ನು ಸೀತೆಗೆ ತಿಳಿಸಿದ ಮೇಲೆ ಆಕೆ ರಾಮನನ್ನು ಸಮೀಪಿಸುತ್ತಿದ್ದಂತೆ ಆಕೆಯನ್ನು ವಾನರರು ನೋಡದಂತೆ ವಿಭೀಷಣನು ತಡೆದಾಗ ರಾಮ ವಿಭೀಷಣನನ್ನು ನಿಂದಿಸುತ್ತ ಆತನಿಗೆ 'ದಯವಿಟ್ಟು ಈ ಕಾರ್ಯವನ್ನು ನಿಲ್ಲಿಸು ಅವರು ನನ್ನ ಸ್ವಂತ ಕುಟುಂಬದವರು' ಎಂದು ನುಡಿದ (*ರಾಮಾಯಣ* : ಯುದ್ಧಕಾಂಡ : ಸರ್ಗ ೧೧೭ : ಶ್ಲೋಕ ೨೫)

ಕಿಮರ್ಥಂ ಮಾಮನಾದೃತ್ಯ ಕ್ಲಿಶ್ಯತೇಯಂ ತ್ವಯಾಜಿನಃ ।
ನಿವರ್ತಯೈನಮುದ್ಯೋಗಂ ಜನೋಯಂ ಸ್ವಜನಂಮಮ ॥

ನಿಜವಾಗಿ ಹೇಳಬೇಕೆಂದರೆ ಆತ ಸುಗ್ರೀವನನ್ನು ತನ್ನ ಆರನೆಯ ಸೋದರನೆಂದು ಪರಿಗಣಿಸಿದ್ದ. ಆತ ಲಂಕೆಗೆ ಮುತ್ತಿಗೆ ಹಾಕಿದಾಗಲೂ ಆತ ವಿಭೀಷಣನೊಡನೆ ಮೈತ್ರಿ ಮಾಡಿಕೊಂಡ ಮತ್ತು ಆತನನ್ನು ತನ್ನ ಏಳನೆಯ ಸೋದರನೆಂದು ಪರಿಗಣಿಸಿದ. ತನ್ನ ಶತ್ರುಗಳಿಗೂ ಆತ ದಯೆ ತೋರುವವನಾಗಿದ್ದ. ಇಡೀ ಮಾನವಕುಲಕ್ಕೆ ರಾಮ ಹೊಂದಿದ್ದ ವಿಶ್ವಪ್ರೇಮವನ್ನು ಮಹರ್ಷಿ ವಾಲ್ಮೀಕಿಗಳು ಭಾವಪೂರಿತವಾದ ಮಾತುಗಳಿಂದ ತಿಳಿಸಿದ್ದಾರೆ. ರಾಮ ಇಡೀ ಮಾನವ ಕುಲದ ರಕ್ಷಣೆ ಮತ್ತು ಸಹಾಯ ತನ್ನ ವ್ರತವೆಂದು ಸಾರಿದ್ದಾನೆ (ರಾಮಾಯಣ : ಯುದ್ಧಕಾಂಡ:

ಸರ್ಗ ೧೪ : ಶ್ಲೋಕ ೩೩ ಮತ್ತು ೩೪).

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥

ಬರಲಿರುವ ಎಲ್ಲ ಕಾಲಕ್ಕೂ ಮಾರ್ಗದರ್ಶನಕನಾಗಿ ನಿಂತ ಮಹಾತ್ಮನಾದ ರಾಮನ ಆದರ್ಶವನ್ನುಳ್ಳ ರಾಮಾಯಣವನ್ನು ಮಾನವಕುಲಕ್ಕೆ ಪ್ರೀತಿ ಮತ್ತು ಸೇವೆಯ ಕಾವ್ಯವೆಂದು ಪರಿಗಣಿಸಬಹುದು.

ರಾಮನ ವ್ಯಕ್ತಿತ್ವದ ಪ್ರಭಾವ ಭಾರತದಲ್ಲಿ ಮುಂದಿನ ತಲೆಮಾರುಗಳ ಮೇಲೆ ಎಷ್ಟೊಂದು ಗಾಢವಾಗಿತ್ತೆಂದರೆ ಧರ್ಮಶ್ರದ್ಧೆಯುಳ್ಳ ಜನ ಎಲ್ಲ ಬಗೆಯ ಸಂಕಟಗಳಲ್ಲಿ ಪದೇ ಪದೇ ಸಹಾಯಕ್ಕಾಗಿ ರಾಮನನ್ನು ಪ್ರಾರ್ಥಿಸುತ್ತಾರೆ. ಹೆದೆಯೇರಿಸಿದ ಬಿಲ್ಲನ್ನು ಕೈಗಳಲ್ಲಿ ಹಿಡಿದ ಆತ ಮತ್ತು ಲಕ್ಷ್ಮಣ ಭಕ್ತನ ಸಮೀಪದಲ್ಲಿದ್ದು ಎಲ್ಲ ದಿಕ್ಕುಗಳಿಂದ ಬರುವ ಅಪಾಯಗಳಿಂದ ರಕ್ಷಿಸಬೇಕೆಂದು ಶ್ರೀರಾಮನ ರಕ್ಷಣೆಯನ್ನು ಕೋರುವ ಮತ್ತೆ ಮತ್ತೆ ಪುನರುಚ್ಚರಿಸಲಾಗುವ ಪ್ರಾರ್ಥನೆಯೊಂದಿದೆ.

ಅಗ್ರತಃ ಪೃಷ್ಠತಶ್ಚೈವ ಪಾರ್ಶ್ವತಶ್ಚ ಮಹಾಬಲೌ ।
ಆಕರ್ಣಪೂರ್ಣಧನ್ವಾನೌ ರಕ್ಷೇತಾಂ ರಾಮಲಕ್ಷ್ಮಣೌ ॥

ಮದ್ರಾಸ್‌ನ ಬಳಿಯ ಮಧುರಾಂತಕಂನಲ್ಲಿನ ಶ್ರೀ ರಾಮನ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಅಸಾಧಾರಣವಾದ ಘಟನೆಯೊಂದಿದೆ. ಅದು ರಾಮನ ವ್ಯಕ್ತಿತ್ವವನ್ನು ರಮಣೀಯವಾಗಿ ನಿರೂಪಿಸುತ್ತದೆ. ಮಧುರಾಂತಕಂನಲ್ಲಿ ದೊಡ್ಡದೊಂದು ಕೆರೆಯಿದೆ. ಪ್ರತಿ ವರ್ಷವೂ ಅದರ ಏರಿಗಳನ್ನು ದುರಸ್ತಿಮಾಡಬೇಕಿತ್ತು. ಮತ್ತು ಅಡ್ಡಕಟ್ಟೆಗಳನ್ನು ಸರಿಯಾದ ರೀತಿಯಲ್ಲಿ ನಿರ್ಮಿಸಬೇಕಿತ್ತು. ಈ ಕೆರೆಯ ನಿರ್ಮಾಣ ಬಹುಮಟ್ಟಿಗೆ ಕ್ರಿ.ಶ. ೧೭೯೫ ರಿಂದ ೧೮೦೦ ರವರೆಗೆ ಅಲ್ಲಿದ್ದ ಚಿಂಗಲ್‌ಪುಟ್ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ, ಯೂರೋಪಿನವನಾದ ಶ್ರೀ ಲಿಯೋನೆಲ್ ಪ್ಲೇಸ್‌ನ ಕಾರ್ಯವಾಗಿತ್ತು. ಚಿಂಗಲ್‌ಪುಟ್ ಜಿಲ್ಲೆಯ ಹಿಡುವಳಿಗಳ ಮೋಜಣಿ ಕಾರ್ಯಕ್ಕೂ ಆತನೇ ಜವಾಬ್ದಾರನಾಗಿದ್ದ. ಶ್ರೀ ಪ್ಲೇಸ್ ಜಿಲ್ಲಾಧಿಕಾರಿಯಾಗಿದ್ದ ಅವಧಿಯಲ್ಲಿ ಎರಡು ಅಥವಾ ಮೂರು ಬಾರಿ ಏರಿಗಳಿಗೆ ಮತ್ತು ಅಡ್ಡಕಟ್ಟೆಗಳಿಗೆ ದುರಸ್ತಿಯನ್ನು ನಡೆಸಲಾಗಿತ್ತು. ೧೭೯೮ನೆಯ ಇಸವಿಯಲ್ಲಿ ಹಿಂದೆಂದೂ ಕಂಡಿಲ್ಲದಂತಹ ಮಳೆಯಿಂದಾಗಿ ಕೆರೆ ತುಂಬಿಹೋಗಿತ್ತು, ಮತ್ತು ಅಡ್ಡಕಟ್ಟೆಗಳಿಗೆ ಅಪಾಯವೊದಗಿತ್ತು ಮತ್ತು ಏರಿಗಳು ಒಡಕುಂಟಾಗುವ ಅಪಾಯದ ಸ್ಥಿತಿಯಲ್ಲಿದ್ದುವು. ದೇವಸ್ಥಾನದ ಅಧಿಕಾರಿಗಳಿಗೆ ಇದು ಸಮಸ್ಯೆಯೊಂದನ್ನು ತಂದೊಡ್ಡಿತು. ಹಲವಾರು ಬಾರಿ ಏರಿಗಳನ್ನು ಮತ್ತು ಅಡ್ಡಕಟ್ಟೆಗಳನ್ನೂ ದುರಸ್ತಿಮಾಡಲಾಗಿತ್ತಾದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಜೋರಾದ ಮಳೆ ಸುರಿದ ಆ ನಿರ್ದಿಷ್ಟ ದಿನದಂದು ಆ ಸ್ಥಳದಲ್ಲಿ ಬೀಡುಬಿಟ್ಟಿದ್ದ ಜಿಲ್ಲಾಧಿಕಾರಿಯನ್ನು ಮಧುರಾಂತಕಂನ ಜನರು ಕೆರೆಯನ್ನೂ

ಮತ್ತು ಪಟ್ಟಣವನ್ನೂ ಪ್ರವಾಹದ ಹಾವಳಿಯಿಂದ ರಕ್ಷಿಸಲು ಪರಮಾತ್ಮನನ್ನು ಪ್ರಾರ್ಥಿಸುವಂತೆ ಕೇಳಿಕೊಂಡರು. ಆ ವೇಳೆಗೆ ಪ್ರಭುವಾದ ರಾಮನ ಬಗ್ಗೆ ಆಳವಾದ ಗೌರವಭಾವನೆಯನ್ನು ಬೆಳೆಸಿಕೊಂಡಿದ್ದ ಜಿಲ್ಲಾಧಿಕಾರಿಯು ಕಗ್ಗತ್ತಲೆಯ ರಾತ್ರಿಯಲ್ಲಿ ಕೆರೆಗೆ ಹೊರಟನು. ಆತನ ಸಹಾಯಕ ಅಧಿಕಾರಿಗಳು ಮತ್ತು ಇತರ ಜನರೂ ಆತನೊಂದಿಗೆ ಹೊರಟರು. ತಕ್ಷಣವೇ ಜಿಲ್ಲಾಧಿಕಾರಿಯು ತನ್ನ ಸಹಾಯಕರನ್ನು ಕೂಗಿ ಕರೆದು ಪ್ರಭು ರಾಮ ಮತ್ತು ಪ್ರಭು ಲಕ್ಷ್ಮಣ ಕೈಗಳಲ್ಲಿ ಧನುಸ್ಸನ್ನು ಹಿಡಿದು ಏರಿಯನ್ನು ರಕ್ಷಿಸುತ್ತಿರುವ ದಿವ್ಯದೃಶ್ಯವನ್ನು ತಾನು ಕಂಡುದಾಗಿ ತಿಳಿಸಿದನು. ಜಿಲ್ಲಾಧಿಕಾರಿಯ ಸಹಾಯಕರು ಜಿಲ್ಲಾಧಿಕಾರಿಯು ಕಂಡ ದೃಶ್ಯವನ್ನು ಕಾಣಲಾರದೆ ಹೋದರು. ಜಿಲ್ಲಾಧಿಕಾರಿಯು ಈ ದಿವ್ಯ ದರ್ಶನದಿಂದ ಎಷ್ಟೊಂದು ಪ್ರಭಾವಿತನಾದನೆಂದರೆ ಪ್ರವಾಹದ ಪರಿಣಾಮವಾಗಿ ಉಂಟಾಗಬಹುದಾಗಿದ್ದ ಅನಾಹುತದಿಂದ ಪಟ್ಟಣವನ್ನು ರಕ್ಷಿಸಿದುದಕ್ಕಾಗಿ ಪ್ರಭು ಶ್ರೀರಾಮನಿಗೆ ತನ್ನ ಗೌರವ ಮತ್ತು ಪ್ರೀತಿ ಮತ್ತು ಆತನಿಗೆ ತನ್ನ ಕೃತಜ್ಞತಾಭಾವದ ಸಂಕೇತವಾಗಿ ಮಧುರಾಂತಕದ ರಾಮನ ದೇವಸ್ಥಾನದಲ್ಲಿ 'ತಾಯಾರ್ ಸನ್ನಿಧಿ' (ರಾಮನ ಮಡದಿ ಸೀತೆಗೆ ಗುಡಿ)ಯ ನಿರ್ಮಾಣಕ್ಕಾಗಿ ಮಾರನೆಯ ದಿನ ಬೆಳಿಗ್ಗೆ ಸೂಕ್ತವಾದ ಎಲ್ಲ ಏರ್ಪಾಟುಗಳನ್ನೂ ಮಾಡಿದನು. ಇಂದಿಗೂ ಜಿಲ್ಲಾಧಿಕಾರಿಯ ಕೊಡುಗೆಯನ್ನು ಸೂಚಿಸುವ ಶಿಲಾಶಾಸನವೊಂದು ದೇವಸ್ಥಾನದಲ್ಲಿದೆ. ಅಂದಿನಿಂದ ಮುಂದೆ ಮಧುರಾಂತಕದ ಶ್ರೀ ರಾಮ 'ಏರಿಕಾತ್ತ ರಾಮನ್' (ಕೆರೆಯ ಮೇಲೆ ಕಾವಲು ನಿಂತು ಅದನ್ನು ಕಾಪಾಡಿದ ರಾಮ) ಎಂದು ಪ್ರಸಿದ್ಧನಾಗಿದ್ದಾನೆ.

ಈ ಎಲ್ಲ ವಿವರಗಳಿಗೆ ರಾಮಾಯಣದ ಮಹಾತ್ಮನಾದ ರಾಮ ಜೀವನದಲ್ಲಿನ ಸ್ಥಾನ, ವೃತ್ತಿ, ಧರ್ಮ ಅಥವಾ ಮತವನ್ನು ಲೆಕ್ಕಿಸದೇ ಇಡೀ ಮಾವನ ಜನಾಂಗಕ್ಕೆ ಪ್ರೀತಿ ಮತ್ತು ಸೇವೆಯ ಸಾಕಾರರೂಪವಾಗಿರುವುದನ್ನು ನಾವು ಕಾಣುತ್ತೇವೆ.

* * * *

೨೮. ಮಹಾಭಾರತದಲ್ಲಿ

ನಮ್ಮ ಸಂಸ್ಕೃತಿಯನ್ನು ಪ್ರಭಾವಿತಗೊಳಿಸಿರುವ ಮತ್ತೊಂದು ಮಹಾಕಾವ್ಯ ಮಹಾಭಾರತ. ಹದಿನೆಂಟು ಪರ್ವಗಳಾಗಿ ವಿಭಾಗಗೊಂಡಿರುವ, ಒಂದು ಲಕ್ಷ ಶ್ಲೋಕಗಳನ್ನೊಳಗೊಂಡ ಇದು ವಿಶಾಲ ವ್ಯಾಪ್ತಿಯುಳ್ಳ ಕೃತಿ. ಈ ಮಹಾಕಾವ್ಯದ ಅನೇಕ ಸಂದರ್ಭಗಳಲ್ಲಿ ಧರ್ಮ, ಪ್ರೀತಿ ಮತ್ತು ಸಹಮಾನವರ ಸೇವೆಯ ಮೇಲೆ ವಿಶೇಷ ಮಹತ್ತ್ವವನ್ನು ಇರಿಸಲಾಗಿದೆ. ಪ್ರೀತಿ ಮತ್ತು ಸೇವೆ ಎಂಬ ಮಾತುಗಳಿಂದ ವ್ಯಕ್ತಗೊಂಡಿರುವ ಧರ್ಮದ ಮೂಲಭೂತ ನಿಯಮವೇನೆಂದರೆ ಪರಮಾತ್ಮ ಪ್ರತಿಯೊಂದು ಜೀವಂತ ಪ್ರಾಣಿಯ ಹೃದಯದಲ್ಲೂ ನೆಲೆಸಿದ್ದಾನೆ ಎಂಬ ತಿಳುವಳಿಕೆ.

ಶಾಂತಿಪರ್ವದ ಅಧ್ಯಾಯ ೨೬೧ರಲ್ಲಿ ವ್ಯಾಪಾರಿ ತುಲಾಧಾರ ಮತ್ತು ಬ್ರಾಹ್ಮಣ ಜಾಜಲಿಯ ನಡುವಣ ಸಂವಾದದ ಉಲ್ಲೇಖವಿದೆ. ವ್ಯಾಪಾರಿಯು ಜಾಜಲಿಗೆ ಸನ್ನಡತೆಯ ಬಗ್ಗೆ ಉಪದೇಶ ನೀಡುತ್ತಾನೆ. ಒಂಬತ್ತನೆಯ ಶ್ಲೋಕದಲ್ಲಿ ಆತ ಹೇಳುವುದು ಹೀಗೆ : 'ತನ್ನ ಕಾರ್ಯ, ಮನಸ್ಸು ಮತ್ತು ಮಾತಿನಿಂದ ಇತರರ ಒಳಿತಿನಲ್ಲಿ ನಿರಂತರವಾಗಿ ಮಗ್ನನಾಗಿರುವವನೂ ಮತ್ತು ಯಾವಾಗಲೂ ಅವರ ಸ್ನೇಹಿತನಾಗಿರುವವನೂ ಧರ್ಮವನ್ನರಿತಿದ್ದಾನೆ.'

ಸರ್ವೇಷಾಂ ಯಸ್ಸುಹೃನ್ನಿತ್ಯಂ ಸರ್ವೇಷಾಂ ಚ ಹಿತೇ ರತಃ ।
ಕರ್ಮಣಾ ಮನಸಾ ವಾಚಿ ಸ ಧರ್ಮಂ ವೇದ ಜಾಜಲೇ ॥'

ಈ ಶ್ಲೋಕ ಧರ್ಮದ ಮೂಲಭೂತ ಸ್ವರೂಪವನ್ನು ವಿವರಿಸುತ್ತದೆ. ಮತ್ತು ಇತರರಿಗೆ ಪ್ರೀತಿ ಮತ್ತು ಸೇವೆ ಸಲ್ಲಿಸುವುದೇ ಧರ್ಮದ ಸಾರವೆಂದು ಘೋಷಿಸುತ್ತದೆ.

ಹದಿನಾರನೆಯ ಶ್ಲೋಕದಲ್ಲಿ ಮತ್ತೊಮ್ಮೆ ತನ್ನ ಕ್ರಿಯೆ, ಮನಸ್ಸು ಮತ್ತು ಮಾತಿನಿಂದ ಇತರರಿಗೆ ಹಾನಿಯುಂಟುಮಾಡದಿರುವವನು ಪರಮಾತ್ಮನನ್ನು ಹೊಂದುವನೆಂದು ಹೇಳಲಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಎಲ್ಲರನ್ನೂ ಪ್ರೀತಿಸುವುದೇ ದೈವತ್ವದ ಸಾಕ್ಷಾತ್ಕಾರ. ಶ್ರೇಷ್ಠ ತಮಿಳು ಮೇರುಕೃತಿ 'ತಿರುಮಂತ್ರಂ' ಹೇಳುವಂತೆ 'ಪ್ರೀತಿಯೇ ದೇವರು'.

ಅನ್ಬು ಶಿವಂ ಇರಂಡೆನ್‌ಬರ್ ಅರಿವಿಲಾರ್
ಅನ್ಬೇ ಶಿವಮಾವದಾರುಂ ಅರಿಗಿಲಾರ್
ಅನ್ಬೇ ಶಿವಮಾವದಾರುಂ ಅರಿಂದಪಿನ್
ಅನ್ಬೇ ಶಿವಮಾಯ್ ಅಮರ್ನ್‌ಂದಿರುಂದಾರೇ ॥

(*ತಿರುಮಂತ್ರಂ* : ೨೭೦)

ವಾಸ್ತವವಾಗಿ ಮಹಾಭಾರತ ಏಕಾಂತಿಗಳನ್ನು ಅರ್ಥಾತ್ ಭಗವಂತನಲ್ಲಿ ಏಕಾಗ್ರ ಮನಸ್ಸಿನ ಭಕ್ತಿಯುಳ್ಳ ಮತ್ತು ಸಂಪೂರ್ಣವಾಗಿ ಹಿಂಸೆಯನ್ನು ತೊರೆದಿರುವ ಮತ್ತು ಎಲ್ಲ ಜೀವಿಗಳಿಗೂ ಒಳಿತನ್ನೇ ಮಾಡುವುದರಲ್ಲಿ ಆಸಕ್ತಿಯುಳ್ಳ ಮತ್ತು ಸ್ವಾರ್ಥದ ಕ್ರಿಯೆಯಿಂದ ದೂರವಿರುವ ವ್ಯಕ್ತಿಗಳನ್ನೊಳಗೊಂಡ ಕೃತಯುಗವೆಂದು ಕರೆಯಲಾಗಿರುವ ಪರಿಪೂರ್ಣ ಯಗವನ್ನು ಮನದಟ್ಟುಮಾಡಿಕೊಡುತ್ತದೆ.

ಏಕಾಂತಿನೋ ಹಿ ಪುರುಷಾಃ ದುರ್ಲಭಾ ಬಹವೋ ನೃಪ ।
ಯದೇಕಾಂತಿಭಿರಾಕೀರ್ಣಂ ಜಗತ್ಸ್ಯಾತ್ ಕುರುನಂದನ ॥
ಅಹಿಂಸಕೈರಾತ್ಮವಿದ್ಭಿಃ ಸರ್ವಭೂತಹಿತೇ ರತೈಃ ।
ಭವೇತ್ಕೃತಯುಗಕಪ್ರಾಪ್ತಿಃ ಆಶೀಃ ಕರ್ಮವಿವರ್ಜಿತಾ ॥

(*ಮಹಾಭಾರತ* : ಶಾಂತಿಪರ್ವ: ೬೨–೬೩)

ಮಹಾಭಾರತದ ವನಪರ್ವ, ಶಾಂತಿಪರ್ವ ಮತ್ತು ಆನುಶಾಸನಿಕ ಪರ್ವದ ಅನೇಕ ಸ್ಥಳಗಳಲ್ಲಿ ಬಾವಿಯನ್ನು ತೋಡುವ, ಕೆರೆಗಳನ್ನು ಕಟ್ಟಿಸುವ ಮತ್ತು ಉದ್ಯಾನವನಗಳನ್ನು ಸ್ಥಾಪಿಸುವುದೇ ಮೊದಲಾದ ಪರೋಪಕಾರದ ಕಾರ್ಯಗಳ ಆಚರಣೆಯಿಂದ ಪುಣ್ಯವನ್ನು ಸಂಪಾದಿಸಿರುವ ವ್ಯಕ್ತಿಯನ್ನು ಕೊಂಡಾಡಲಾಗಿದೆ. ವನಪರ್ವದಲ್ಲಿ ಬರುವ ಇಂದ್ರದ್ಯುಮ್ನನ ಕಥೆ ಕೆರೆಯನ್ನು ಕಟ್ಟಿಸಿದುದರಿಂದ ಗಳಿಸಿದ ಮಹಾಪುಣ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ.

ಬಹು ಸಮಯದವರೆಗೆ ದೊರೆ ಇಂದ್ರದ್ಯುಮ್ನ ಸ್ವರ್ಗದ ಪ್ರಜೆಯಾಗಿದ್ದ. ಆತನ ಪುಣ್ಯವು ಕ್ಷೀಣಿಸಿದನಂತರ ಆತನನ್ನು ಭೂಮಿಗೆ ಕಳುಹಿಸಲಾಯಿತು. ಭೂಮಿಯಲ್ಲಿ ಯಾರಾದರೂ ತನ್ನನ್ನು ನೆನಪಿಸಿಕೊಳ್ಳುತ್ತಿರಬಹುದೇ ಎಂದು ತಿಳಿಯಲು ಆತ ಕುತೂಹಲಿಯಾಗಿದ್ದ. ಆತ, ಬಹುಕಾಲ ಜೀವಿಸಿದ್ದ ವ್ಯಕ್ತಿಯಾಗಿದ್ದ ಕಾರಣ ಮಾರ್ಕಂಡೇಯನ ಬಳಿಗೆ ತೆರಳಿ ದೊರೆ ಇಂದ್ರದ್ಯುಮ್ನನ ಜ್ಞಾಪಕ ಆತನಿಗಿದೆಯೇ ಎಂದು ಪ್ರಶ್ನಿಸಿದ. ಮಾರ್ಕಂಡೇಯ ಇಲ್ಲವೆಂದು ಉತ್ತರ ನೀಡಿದ. ಆಗ ದೊರೆ ಮಾರ್ಕಂಡೇಯನನ್ನು ಕುರಿತು 'ನಿನಗಿಂತಲೂ ಹೆಚ್ಚು ದೀರ್ಘಾಯುವಾಗಿರುವ ಯಾವನಾದರೂ ವ್ಯಕ್ತಿಯನ್ನು ನೀನು ಬಲ್ಲೆಯೇನು' ಎಂದು ಪ್ರಶ್ನೆಮಾಡಿದನು. ಮಾರ್ಕಂಡೇಯನು ಗೂಬೆಯೊಂದರ ಬಳಿಗೆ ಹೋಗುವಂತೆ ದೊರೆಗೆ ಸೂಚಿಸಿದನು. ಗೂಬೆಯೂ ಆತನನ್ನು ಜ್ಞಾಪಿಸಿಕೊಳ್ಳಲಿಲ್ಲ. ಗೂಬೆ ತನಗಿಂತಲೂ ಹೆಚ್ಚು ದೀರ್ಘಾಯುವಾಗಿದ್ದ ಬಕಪಕ್ಷಿಯೊಂದರ ಬಳಿಗೆ ಹೋಗುವಂತೆ ಆತನಿಗೆ ತಿಳಿಸಿತು. ಬಕಪಕ್ಷಿಗೂ ರಾಜನ ನೆನಪಿರಲಿಲ್ಲ. ಅದು ಆಮೆಯೊಂದರ

ಬಳಿ ಹೋಗುವಂತೆ ರಾಜನಿಗೆ ಸೂಚಿಸಿತು. ಆಮೆಯು ಹಿಮಾಲಯದ ಬಳಿಯಿದ್ದ ದೊಡ್ಡಕೆರೆಯೊಂದರಲ್ಲಿ ವಾಸಮಾಡುತ್ತಿತ್ತು. ತನ್ನ ನೆನಪಿರುವುದೇ ಎಂದು ರಾಜನು ಆಮೆಯನ್ನು ಪ್ರಶ್ನಿಸಿದನು. ಆಮೆ ಈ ಪ್ರಶ್ನೆಯನ್ನು ಆಲಿಸಿದಾಗ ಸ್ವಲ್ಪ ಸಮಯದವರೆಗೆ ಆಲೋಚನಾಮಗ್ನವಾಯಿತು ಮತ್ತು ಅದರ ಕಣ್ಣುಗಳಲ್ಲಿ ನೀರು ತುಂಬಿತ್ತು. ಅದು ಅತ್ಯಂತ ದುಃಖಗೊಂಡು ಕೃತಜ್ಞತಾಭಾವದೊಡನೆ ಹೀಗೆ ಉತ್ತರ ನೀಡಿತು : 'ಅನೇಕ ಯಜ್ಞಗಳನ್ನಾಚರಿಸಿದ ಮತ್ತು ನಾನು ವಾಸವಾಗಿರುವ ಈ ಕೆರೆಯನ್ನು ನಿರ್ಮಿಸಲು ಆತ ನೀಡಿ ಹೆಚ್ಚಾದ ದಕ್ಷಿಣೆಗಳೇ ಮೂಲವಾಗಿರುವ ಆ ವ್ಯಕ್ತಿಯನ್ನು ಹೇಗೆ ತಾನೇ ನಾನು ಸ್ಮರಿಸದೇ ಇರಲಿ?'

'ಸ ಮುಹೂರ್ತಂ ಧ್ಯಾತ್ವಾ ಬಾಷ್ಪಸಂಪೂರ್ಣನಯನಃ ಉದ್ವಿಗ್ನಹೃದಯಃ ವೇಪಮಾನೋ
ವಿಸಂಜ್ಞಕಲ್ಪಃ ಪ್ರಾಂಜಲಿರಬ್ರವೀತ್ । ಕಿಮಹಮೇನಂ ನ ಪ್ರತ್ಯಭಿಜ್ಞಾಸ್ಯಾಮೀಡ
ಅನೇನ ಸಹಸ್ರಕೃತ್ವಶ್ಚಿತಿಷು ಯೂಪಾ ಆಹಿತಾಃ । ಸರಶ್ಚೇದಮಸ್ಯ ದಕ್ಷಿಣಾಭಿಃ
ದತ್ತಾಭಿಃ ಅತಿಕ್ರಮಮಾಣಾಭಿಃ ಕೃತಮ್ । ಅತ್ರಚಾಹಂ ಪ್ರತಿವಸಾಮೀತಿ ॥

ಆ ಕೂಡಲೇ ಸ್ವರ್ಗದ ರಥವೊಂದು ಅಲ್ಲಿಗೆ ಬಂದಿತು ಮತ್ತು ಉಚ್ಚಧ್ವನಿಯ ಮಾತೊಂದು ಕೇಳಿಬಂದಿತು : 'ಹೊರಡು, ಸ್ವರ್ಗದಲ್ಲಿ ನಿನಗೆ ತಕ್ಕುದಾದ ಸ್ಥಾನವನ್ನು ಹೊಂದು' ಮತ್ತು ಈ ಮುಂದಿನ ಶ್ಲೋಕವೊಂದನ್ನು ಅದು ಉಚ್ಚರಿಸಿತು:

ದಿವಂ ಸ್ಪೃಶತಿ ಭೂಮಿಶ್ಚ ಶಬ್ದಃ ಪುಣ್ಯಸ್ಯ ಕರ್ಮಣಃ ।
ಯಾವತಾ ಸ ಶಬ್ದೋ ಭವತಿ ತಾವತ್ ಪುರುಷ ಉಚ್ಯತೇ ॥

(*ಮಹಾಭಾರತ* : ವನಪರ್ವ : ೧೯೯ನೆಯ ಅಧ್ಯಾಯ, ಶ್ಲೋಕ ೧೩)

* * * *

೨೯. ಭಗವದ್ಗೀತೆಯಲ್ಲಿ

ಮುಂದಿನ ಮಹತ್ಕೃತಿ ಭಗವದ್ಗೀತೆ. ಅದು ಪ್ರಪಂಚದ ಅತ್ಯಂತ ಶ್ರೇಷ್ಠ ಗ್ರಂಥಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಇದು ನಡತೆಯ ತತ್ತ್ವವನ್ನು ತಿಳಿಸುವ ಜೀವನದ ಕಲೆಯನ್ನು ಕುರಿತ ಕಾವ್ಯ. ಭಗವದ್ಗೀತೆಯ ಸಾರವೇನೆಂದರೆ ಅದು, ಅಹಂಕಾರದ ಲವಲೇಶವೂ ಇಲ್ಲದೆ ಮತ್ತು ತನಗಾಗಿ ಯಾವುದೇ ಲಾಭ ಅಥವಾ ಪ್ರತಿಫಲದ ಬಯಕೆಯಿಲ್ಲದ ಇತರರ ಸೇವೆಯ ಕರ್ತವ್ಯವನ್ನು ಒತ್ತಿಹೇಳುತ್ತದೆ. ಅದು, ಅಧ್ಯಾತ್ಮವನ್ನು ಪ್ರತಿಪಾದಿಸುವ ಮತ್ತು ಆತ್ಮಜ್ಞಾನದ ಅಗತ್ಯವನ್ನು ಸಮರ್ಥಿಸುವ ಕಾವ್ಯವೆಂದು ಅರ್ಥೈಸಬಹುದಾಗಿದ್ದರೂ, ಭಗವದ್ಗೀತೆಯ ಸಮಗ್ರ ಅಂತಃಪ್ರವೃತ್ತಿ ಇತರರಿಗೆ ಸೇವೆಯ ಕರ್ತವ್ಯವನ್ನು ಒತ್ತಿಹೇಳುವುದೇ ಆಗಿದೆ. ಆತ್ಮವನ್ನು ಕುರಿತ ಜ್ಞಾನವನ್ನು ಪಡೆದಿರುವವರೂ ತಮ್ಮ ಬಾಳಿನಲ್ಲಿ ಜಗತ್ತಿನ ಕ್ಷೇಮವನ್ನು, ಭಗವದ್ಗೀತೆ ತಿಳಿಸುವಂತೆ 'ಲೋಕಸಂಗ್ರಹ'ವನ್ನು ಸಾಧಿಸುವುದಕ್ಕಾಗಿ ಮಾನವಜನಾಂಗಕ್ಕೆ ಸೇವೆ ಸಲ್ಲಿಸುವಂತೆ ಗೀತೆ ನಿರ್ದೇಶಿಸುತ್ತದೆ. ಅದು ಸನ್ಯಾಸಿಗಳಿಗಿರುವ ಜ್ಞಾನಿಗಳಿಗೆ ಮಾನವ ಕುಲದ ಉದ್ಧಾರಕ್ಕಾಗಿ ಕಾರ್ಯವೆಸಗಲು, ಇತರರಿಗೆ ತಮ್ಮ ಜ್ಞಾನವನ್ನು ತಲುಪಿಸಲು ಮತ್ತು ಇತರರಿಗೆ ಮೋಕ್ಷಪ್ರಾಪ್ತಿಗೆ ಸಹಾಯ ಮಾಡಲು ಕರೆನೀಡುತ್ತದೆ. ಆದ್ದರಿಂದಲೇ ಪ್ರಪಂಚವನ್ನು, ಕುಟುಂಬವನ್ನು ಮತ್ತು ಇತರ ಪ್ರಾಪಂಚಿಕ ಬಯಕೆಗಳನ್ನು ತ್ಯಜಿಸಿರುವ ಶ್ರೇಷ್ಠರಾದ ಸಂತರೂ ಮಾನವಜನಾಂಗದ ಕ್ಷೇಮಕ್ಕಾಗಿ ಕಾರ್ಯನಿರತರಾಗುವ ಉದ್ದೇಶದಿಂದ ಮತ್ತು ತಮ್ಮ ಸಹಮಾನವರ ಸೇವೆಗೆ ತಮ್ಮನ್ನು ಸಮರ್ಪಿಸಿಕೊಳ್ಳಲು ಪ್ರಪಂಚದೊಂದಿಗೆ ಸಂಪರ್ಕವಿರಿಸಿಕೊಂಡಿರುವುದನ್ನು ಇತಿಹಾಸದಲ್ಲಿ ನಾವು ಕಾಣುತ್ತೇವೆ. ತಮ್ಮ ಜೀವನದಲ್ಲಿ ಬಹು ಮುಂಚಿತವಾಗಿಯೇ, ಗೃಹಸ್ಥನ ಹಂತವನ್ನೂ ಪ್ರವೇಶಿಸದೆಯೇ ಸನ್ಯಾಸವ್ರತವನ್ನು ಕೈಕೊಂಡು ಪ್ರಖ್ಯಾತರಾದ ಶ್ರೀ ಶಂಕರಾಚಾರ್ಯರು ಮಾನವಕುಲದ ಕ್ಷೇಮಕ್ಕಾಗಿಯೇ ಅತ್ಯಾಸಕ್ತಿಯಿಂದ ಕಾರ್ಯನಿರತರಾದರು. ಕಾಲ್ನಡಿಗೆಯಿಂದಲೇ ದೇಶದ ಒಂದು ತುದಿಯಿಂದ ಮತ್ತೊಂದಕ್ಕೆ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ, ಕಾಶಿಯಿಂದ ದ್ವಾರಕೆಯವರೆಗೆ ಮತ್ತು ಕೇದಾರನಾಥ ಮತ್ತು ಅಮರನಾಥಕ್ಕೆ ಹೋಗಲು ಹಿಮಾಲಯದ ಶಿಖರಗಳನ್ನೂ ಏರಿ ನಡೆದರು. ಸನ್ಯಾಸಿಯ ಜೀವನವನ್ನು ತಾವಾಗಿಯೇ ಸ್ವೀಕರಿಸಿದ್ದರೂ, ವಿಜಯನಗರದ ದೊರೆಗಳಾದ ಹರಿಹರ ಮತ್ತು ಬುಕ್ಕರ ಅಮಾತ್ಯರಾಗಿ ತಮ್ಮ ನಾಡಿನ ಜನರ

ಅಧ್ಯಾಯನಕ್ಕಾಗಿ ಕಾರ್ಯವೆಸಗಿದ ಮತ್ತು ಅಧ್ಯಾತ್ಮಜ್ಞಾನವನ್ನು ಜನರಿಗೆ ತಲುಪಿಸಲು ಧಾರ್ಮಿಕ ಸಂಸ್ಥೆಗಳನ್ನು ಸಂಘಟಿಸಿದ ವಿದ್ಯಾರಣ್ಯದ ಉದಾಹರಣೆಯನ್ನು ನಾವು ಗಮನಿಸುತ್ತೇವೆ. ತಾವು ಅರಣ್ಯದಲ್ಲಿ ವಾಸಮಾಡುತ್ತಿದ್ದರೂ ಮತ್ತು ಪ್ರಭು ರಾಮನ ಭಕ್ತಿ ಮತ್ತು ಆರಾಧನೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದರೂ ದೊರೆ ಶಿವಾಜಿಯನ್ನು ಹುರಿದುಂಬಿಸಿ, ಮಹಾರಾಷ್ಟ್ರದ ಜನರ ಸ್ಥಿತಿಯನ್ನು ಉತ್ತಮಗೊಳಿಸುವ ವಿಷಯದಲ್ಲಿ ಆತನೊಂದಿಗೆ ಸಹಕರಿಸಿದ ಮಹಾರಾಷ್ಟ್ರದ ಸಂತ ಸಮರ್ಥ ರಾಮದಾಸರ ಮತ್ತೊಂದು ಅತ್ಯಂತ ಶ್ಲಾಘನೀಯವಾದ ಉದಾಹರಣೆಯೂ ಇದೆ. ಇದೇ ರೀತಿಯಲ್ಲಿ ತಮ್ಮ ವೈಯಕ್ತಿಕ ಬಯಕೆಗಳು ಮತ್ತು ಕುಟುಂಬದ ವಾತಾವರಣವನ್ನು ತೊರೆದು ಸನ್ಯಾಸಿಗಳಾಗಿದ್ದರೂ ಶ್ರೇಷ್ಠ ಆಚಾರ್ಯರಾದ ರಾಮಾನುಜ, ಮಧ್ವ ಮತ್ತಿತರರು ಮಾನವ ಕುಲದ ಅಭ್ಯುದಯಕ್ಕಾಗಿ ಕಾರ್ಯವೆಸಗಿದರು. ಈ ಮಹಾಪುರುಷರನ್ನು ನಿಜವಾಗಿಯೂ ಹುರಿದುಂಬಿಸಿದುದು ಭಗವದ್ಗೀತೆಯ ಸಂದೇಶವೇ. ಗೀತೆಯು ಕಾಯಕವನ್ನೇ ಭಗವಂತನ ಆರಾಧನೆಯೆಂದು ದೃಢಪಡಿಸಿದೆ.

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥

(*ಭಗವದ್ಗೀತೆ* : ೧೮ : ೪೬)

ಮನುಷ್ಯ ತನ್ನ ಕಾಯಕದ ಮೂಲಕ ಭಗವಂತನನ್ನು ಆರಾಧನೆ ಮಾಡಿ ತನ್ನ ಗುರಿಯನ್ನು ಈಡೇರಿಸಿಕೊಳ್ಳುತ್ತಾನೆ. ಭಗವದ್ಗೀತೆಯ ಹನ್ನೊಂದನೆಯ ಅಧ್ಯಾಯದಲ್ಲಿ ಪರಮಾತ್ಮ ಹೇಳುವುದೇನೆಂದರೆ ಎಲ್ಲ ಜೀವಿಗಳ ಬಗ್ಗೆ ಪ್ರೀತಿಯೊಂದಿಗೆ, ಗಾಢವಾದ ಆಧ್ಯಾತ್ಮಿಕತೆಯೊಂದಿಗೆ ಮತ್ತು ಅನಾಸಕ್ತನಾಗಿ ಭಕ್ತಿಯ ಹುಮ್ಮಸ್ಸಿನಿಂದ ಭಗವಂತನ ಸೇವೆ ಮಾಡುವ ವ್ಯಕ್ತಿಯು ಭಗವಂತನನ್ನೇ ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಮತ್ಕರ್ಮಕೃತ್ಮತ್ಪರಮಃ ಮದ್ಭಕ್ತಸ್ಸಂಗವರ್ಜಿತಃ ।
ನಿರ್ವೈರಸ್ಸರ್ವಭೂತೇಷು ಯಃಸ ಮಾಮೇತಿ ಪಾಂಡವ ॥

(*ಭಗವದ್ಗೀತೆ* : ೧೧ : ೫೫)

ಈ ಶ್ಲೋಕದ ಮೇಲಣ ತಮ್ಮ ಭಾಷ್ಯದಲ್ಲಿ ಶ್ರೀ ಶಂಕರರು ಭಗವದ್ಗೀತೆಯಲ್ಲಿ ಅಡಕವಾಗಿರುವ ಎಲ್ಲ ಉಪದೇಶಗಳ ಸಾರಾಂಶವೇ ಇದು ಎಂದು ಹೇಳುತ್ತಾರೆ.

ಅಧುನಾ ಸರ್ವಸ್ಯ ಗೀತಾಶಾಸ್ತ್ರಸ್ಯ ಸಾರಭೂತಃ ಅರ್ಥಃ ।
ನಿಃಶ್ರೇಯಸಾರ್ಥಃ ಅನುಷ್ಠೇಯತ್ತ್ವೇನ ಸಮುಚ್ಚಿತ್ಯ ಉಚ್ಯತೇ ॥

* * * *

೩೦. ಪುರಾಣಗಳಲ್ಲಿ

ವೇದವ್ಯಾಸರೇ ರಚನಕಾರರೆಂದು ಹೇಳಲಾಗಿರುವ ಹದಿನೆಂಟು ಪುರಾಣಗಳೂ ಪ್ರೀತಿ, ಸೇವೆ ಮತ್ತು ದಾನದ ಶ್ರೇಷ್ಠ ಆದರ್ಶಗಳಿಗೆ ಕೆಲವೊಂದು ಉಲ್ಲೇಖಗಳನ್ನು ಹೊಂದಿವೆ. ಮಾರ್ಕಂಡೇಯ ಪುರಾಣದಲ್ಲಿ ವಿಪಶ್ಚಿತ್ ರಾಜನ ಕಥೆಯಿದೆ. ಆತ ಕಟ್ಟುನಿಟ್ಟಾಗಿ ಮತ್ತು ಶ್ರದ್ಧಾಪೂರ್ವಕವಾಗಿ ಸ್ಮೃತಿಗಳ ಆದೇಶಗಳನ್ನು ಅನುಸರಿಸುತ್ತಿದ್ದ ಮತ್ತು ಐದು ಮಹಾಯಜ್ಞಗಳನ್ನು ನಿತ್ಯವೂ ಆಚರಿಸುತ್ತಲಿದ್ದ. ಆತ ಸ್ಮೃತಿಗಳ ಅಮುಖ್ಯವಾದ ಆದೇಶಗಳನ್ನು ಪಾಲಿಸುವುದರಲ್ಲಿ ಅಸಡ್ಡೆ ತೋರಿದ. ಆದ್ದರಿಂದ, ಆತ ಮರಣಹೊಂದಿದಾಗ ಪರಮಾತ್ಮ ಆತನಿಗೆ ಈ ಅಲ್ಪವಾದ ಕರ್ತವ್ಯಲೋಪಕ್ಕಾಗಿ ನರಕದಲ್ಲಿ ಅಲ್ಪಸಮಯದಲ್ಲಿ ವಾಸವನ್ನೂ ಮತ್ತು ಧಾರ್ಮಿಕ ಕಾರ್ಯಗಳನ್ನು ಕಟ್ಟುನಿಟ್ಟಾಗಿ ಆಚರಿಸಿದುದರಿಂದ ಆತ ಗಳಿಸಿದ್ದ ಪುಣ್ಯಕ್ಕಾಗಿ ಸಾಕಷ್ಟು ಸುದೀರ್ಘಕಾಲದ ಸ್ವರ್ಗವಾಸವನ್ನೂ ವಿಧಿಸಿದನು. ಪ್ರಾರಂಭಕ್ಕೆ ನರಕದಲ್ಲಿನ ಅಲ್ಪಸಮಯದ ವಾಸ ಅಥವಾ ಸ್ವರ್ಗದಲ್ಲಿ ಸಾಕಷ್ಟು ಸುದೀರ್ಘವಾಸದ ಆಯ್ಕೆಯನ್ನು ಆತನಿಗೆ ನೀಡಿದಾಗ ರಾಜನು ನರಕದೊಂದಿಗೆ ಪ್ರಾರಂಭಿಸುವುದನ್ನು ಆಯ್ದುಕೊಂಡ. ನರಕದಲ್ಲಿ ಪ್ರವೇಶ ದೊರೆತೊಡನೆಯೇ, ತಮ್ಮ ಪಾಪಗಳಿಗಾಗಿ ಅಲ್ಲಿ ವಾಸಿಸುವ ದಂಡನೆಗೊಳಗಾಗಿದ್ದ ಅನೇಕ ಆತ್ಮಗಳು ತಮ್ಮ ಮಧ್ಯದಲ್ಲಿ ದೊರೆಯ ಇರುವಿಕೆ ಮಾತ್ರದಿಂದಲೇ ವಿಶೇಷವಾದ ಸಾಂತ್ವನ ಪಡೆದುವು. ಆತ ಗಳಿಸಿದ್ದ ಪುಣ್ಯದ ಮಹತ್ವವೆಷ್ಟಿತ್ತೆಂದರೆ ಆತ ಆ ಸ್ಥಳದ ಸುತ್ತಲೂ ಸುವಾಸನೆಯೊಂದನ್ನು ಹೊರಸೂಸಿದ ಮತ್ತು ನರಕದಲ್ಲಿದ್ದ ಇತರ ಎಲ್ಲ ಆತ್ಮಗಳೂ ಆತನತ್ತ ಬಹುಮಟ್ಟಿಗೆ ಆಕರ್ಷಿತಗೊಂಡವು. ನರಕದಲ್ಲಿನ ಆತನ ವಾಸ ಕೊನೆಗೊಂಡೊಡನೆಯೇ ಸ್ವರ್ಗದಿಂದ ದೂತರು ಆತನನ್ನು ಸ್ವರ್ಗೀಯ ಪ್ರದೇಶಗಳಿಗೆ ಕರೆದೊಯ್ಯಲು ಸಿದ್ಧರಾಗಿ ಅಲ್ಲಿಗೆ ಬಂದರು. ಆ ಸಮಯದಲ್ಲಿ ನರಕದಲ್ಲಿದ್ದ ಇತರ ಜನರು ದೊರೆ ವಿಪಶ್ಚಿತನನ್ನು ಮತ್ತಷ್ಟು ಸಮಯ ತಮ್ಮೊಂದಿಗೆ ಅಲ್ಲಿರಲು ಭಾವಪೂರ್ಣರಾಗಿ ಮೊರೆಯಿಟ್ಟರು. ಏಕೆಂದರೆ ನರಕದ ತಮ್ಮ ಯಾತನೆಗಳ ನಡುವೆಯೂ ಅವರು ಅಪಾರವಾದ ನೆಮ್ಮದಿಯನ್ನು ಅನುಭವಿಸಿದರು. ಆದರೆ ಸ್ವರ್ಗದಿಂದ ಬಂದಿದ್ದ ದೂತರು ದೊರೆ ತಮ್ಮೊಂದಿಗೆ ತೆರಳಬೇಕೆಂಬ ಬಗ್ಗೆ ಬಹಳ ಒತ್ತಾಯಪಡಿಸುವವರಾಗಿದ್ದರು. ಈ ಘಟ್ಟದಲ್ಲಿ ಆ ರಾಜನು ಯಾವುದೇ ರೀತಿಯಲ್ಲಿಯಾದರೂ ಸರಿಯೇ ಯಾತನೆಪಡುತ್ತಿರುವ ಜನರಿಗೆ ನೆಮ್ಮದಿಯನ್ನು

ನೀಡುವುದು ತನ್ನ ಕರ್ತವ್ಯವೆಂದೂ ಮತ್ತು ಆ ಕರ್ತವ್ಯವನ್ನು ಸ್ವರ್ಗದಲ್ಲಿ ನೆಲೆಸುವ ಸಂತೋಷಕ್ಕಿಂತಲೂ ಹೆಚ್ಚು ಅತ್ಯಗತ್ಯವಾದುದೆಂದೂ ತಾನು ಪರಿಗಣಿಸುವುದಾಗಿ ಘೋಷಿಸಿದನು.

ಧಿಕ್ ತಸ್ಯ ಜೀವಿತಂ ಪುಂಸಃ ಶರಣಾರ್ಥಿನಮಾಗತಂ ।
ಯೋ ನಾರ್ತಂ ಅನುಗೃಹ್ಣಾತಿ ವೈರಿಪಕ್ಷಮಪಿಧ್ರುವಮ್ ॥
ಯಜ್ಞದಾನತಪಾಂಸೀ ಪರತ್ರ ಚ ನ ಭೂತಯೇ ।
ಭವಂತಿ ತಸ್ಯ ಯಸ್ಯಾರ್ತಪರಿತ್ರಾಣೇ ನ ಮಾನಸಮ್ ॥
ಕೋ ನು ಸ್ಯಾದುಪಾಯೋಽತ್ರ ಯೇನಾಹಂ ದುಃಖಿತಾತ್ಮನಾ ।
ಅಂತಃಪ್ರವಿಶ್ಯ ಭೂತಾನಾಂ ಭವೇಯಂ ದುಃಖಭಾಕ್ ಸದಾ ॥

ರಾಜನು ಸ್ವರ್ಗದಿಂದ ಬಂದಿದ್ದ ದೂತರೊಡನೆ ಹೊರಡಲು ನಿರಾಕರಿಸಿ ನರಕದಲ್ಲಿಯೇ ಉಳಿದನು. ಯಾತನೆಪಡುತ್ತಿರುವವರಿಗೆ ಸಹಾಯಮಾಡುವ ಮತ್ತು ಅವರ ಸಂಕಟವನ್ನು ಪರಿಹರಿಸುವ ಕರ್ತವ್ಯದ ಸರ್ವಶ್ರೇಷ್ಠ ಲಕ್ಷಣವನ್ನು ಸಮರ್ಥಿಸಲು ಇದಕ್ಕಿಂತಲೂ ಪರಿಣಾಮಕಾರಿಯಾದ ಕಥೆ ಬೇರಾವುದೇ ಇರಲು ಸಾಧ್ಯವಿಲ್ಲ.

'ಎಲ್ಲ ಧರ್ಮಗಳ ಮೂಲಭೂತ ಐಕ್ಯತೆ' (*The Essential Unity of all religions*) ಎಂಬ ತಮ್ಮ ಗ್ರಂಥದಲ್ಲಿ ಡಾ॥ ಭಗವಾನ್‌ದಾಸ್‌ರವರು ೪೧೨ ಮತ್ತು ೭೩೪ನೇ ಪುಟಗಳಲ್ಲಿ, 'ಸಹಮಾನವರಿಗೆ ಸಹಾಯಮಾಡು, ನೀನು ದೇವರ ದೇವರ ಸೇವೆ ಮಾಡುವೆ' (Help Fellowmen You Serve God) ಎಂಬ ಶೀರ್ಷಿಕೆಯ ಅಡಿಯಲ್ಲಿ ಈ ಉಪನ್ಯಾಸಗಳಲ್ಲಿ ಈ ಹಿಂದೆ ತಿಳಿಸಲಾಗಿರುವ ಸಂತ ಮ್ಯಾಥ್ಯೂನ ಬೈಬಲ್‌ನ ಉದ್ಧರಣಗಳನ್ನು ಉಲ್ಲೇಖಿಸುತ್ತಾರೆ ಮತ್ತು ಅದೇ ಬಗೆಯ ಭಾವನೆಗಳನ್ನು ಒಳಗೊಂಡಿರುವುದಾಗಿ ಪುರಾಣಗಳಿಂದ ಶ್ಲೋಕವೊಂದನ್ನು ಪರ್ಯಾಯ ಉದಾಹರಣೆಯಾಗಿ ನೀಡುತ್ತಾರೆ.

ಪ್ರಾಯಶಃ ಲೋಕತಾಪೇನ ತಪ್ಯಂತೇ ಸಾಧವೋ ಜನಾಃ
ಯೇನ ಕೇನ ಪ್ರಕಾರೇಣ ಯಸ್ಯ ಕಸ್ಯಾಪಿ ಜಂತುನಃ ।
ಸಂತೋಷಂ ಜನಯೇದ್ಧೀಮಾನ್ ತದೇವೇಶ್ವರಪೂಜನಂ
ಪರಂ ಆರಾಧನಂ ತದ್ಧಿ ಪುರುಷಸ್ಯಾಖಿಲಾತ್ಮನಃ ॥

ಶ್ಲೋಕದ ಅರ್ಥ ಇದು : 'ಬಹುಮಟ್ಟಿಗೆ ಒಳ್ಳೆಯ ಜನ ಪ್ರಪಂಚದ ದುಃಖದೊಂದಿಗೆ ದುಃಖಿಸುತ್ತಾರೆ. ಯಾವುದೇ ರೀತಿಯಲ್ಲಾಗಲಿ ಮತ್ತು ಯಾರ ವಿಷಯದಲ್ಲಿಯೇ ಆಗಲಿ, ಜ್ಞಾನಿಗಳಾದವರು ಸಂತಸವನ್ನು ಹೊರಹೊಮ್ಮಿಸಬೇಕು. ಇದೊಂದೇ ಈಶ್ವರನ ಆರಾಧನೆ. ವಾಸ್ತವವಾಗಿ ಇದು ಸರ್ವಾತ್ಮಕನಾದ ಪುರುಷನ ಉನ್ನತರೂಪದ ಆರಾಧನೆ.'

ಈ ಶ್ಲೋಕ ಎರಡು ವಿಷಯಗಳನ್ನು ಒತ್ತಿಹೇಳುತ್ತಿದೆ – ಮೊದಲನೆಯದೇನೆಂದರೆ ಸಹಮಾನವರಿಗೆ ಪ್ರೀತಿ ಮತ್ತು ಸೇವೆಯ ಕರ್ತವ್ಯ ತನಗೇ ಸಂತಸ ಮತ್ತು ನೆಮ್ಮದಿಯನ್ನು ಉಂಟುಮಾಡುತ್ತದೆ ಮತ್ತು ಎರಡನೆಯದೇನೆಂದರೆ ಈ ಕರ್ತವ್ಯದ ಆಚರಣೆ ಭಗವಂತನ ಅತ್ಯುತ್ತಮರೂಪದ ಆರಾಧನೆಯಾಗಿ ರೂಪುಗೊಳ್ಳುತ್ತದೆ, ಕಾರಣವೇನೆಂದರೆ ಪರಮಾತ್ಮನು ಎಲ್ಲ ಮಾನವ ಚೈತನ್ಯಗಳ ಒಟ್ಟು ಮೊತ್ತವಾಗಿರುವುದೇ. ತಮ್ಮನ್ನೇ ಈ ವಸ್ತುವಿನ ಆಧಾರವನ್ನಾಗಿ ಮಾಡಿಕೊಂಡು ಸ್ವಾಮಿ ವಿವೇಕಾನಂದರು, 'ಮಾನವ ಜನಾಂಗಕ್ಕೆ ಸಲ್ಲಿಸುವ ಸೇವೆ ಅತ್ಯುನ್ನತವಾದ ಧರ್ಮ' ಎಂದು ಅಭಿಪ್ರಾಯಪಡುತ್ತಾರೆ. ಸ್ವಾಮೀಜಿ ಎಲ್ಲ ಮಾನವಜೀವಿಗಳ ಒಟ್ಟು ಮೊತ್ತವಾಗಿರುವ ಏಕೈಕ ದೇವರಲ್ಲಿ ನಾನು ನಂಬಿಕೆಯಿರಿಸಿದ್ದೇನೆ' ಎಂದು ನುಡಿಯುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶ್ರೇಷ್ಠ ಗ್ರಂಥಗಳಲ್ಲಿ ಅಡಕವಾಗಿರುವ ಎಲ್ಲ ಉಪದೇಶಗಳನ್ನೂ ಸಂಗ್ರಹವಾಗಿ ತಿಳಿಸುವ, ಮತ್ತೆ ಮತ್ತೆ ಉದ್ಧರಿಸಲಾಗುವ ಸಂಸ್ಕೃತ ಶ್ಲೋಕವೊಂದಿದೆ:

ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ ।
ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್ ॥

'ಕೋಟಿ ಕೋಟಿ ಗ್ರಂಥಗಳಲ್ಲಿ ಹೇಳಲಾಗಿರುವುದನ್ನು ನಾನು ಅರ್ಧಶ್ಲೋಕದಲ್ಲಿ ತಿಳಿಸುತ್ತೇನೆ. ಪುಣ್ಯವಿರುವುದು ಪರರಿಗೆ ಉಪಕಾರಮಾಡುವುದರಲ್ಲಿ ಮತ್ತು ಪಾಪ ಪರರಿಗೆ ಹಾನಿಮಾಡುವುದರಲ್ಲಿ.'

* * * *

೩೧. ನಮ್ಮ ಉದ್ಗ್ರಂಥಗಳು ಪ್ರಪಂಚವನ್ನು ನಿರಾಕರಿಸುತ್ತವೆಯೆ?

ನಮ್ಮ ಭಾರತೀಯ ಉದ್ಗ್ರಂಥಗಳನ್ನು ಅಧ್ಯಯನ ಮಾಡಿರುವ ಪಾಶ್ಚಿಮಾತ್ಯರು ಕೆಲವೊಮ್ಮೆ ಅವುಗಳಲ್ಲಿ ಅಡಗಿರುವ ಬೋಧನೆಗಳನ್ನು ಪ್ರಪಂಚವನ್ನು ನಿರಾಕರಿಸುವಂತಹುವೆಂದೂ ಮತ್ತು ಪ್ರಪಂಚವನ್ನು ದೃಢೀಕರಿಸುವಂತಹುದಲ್ಲವೆಂದೂ ಟೀಕಿಸಿದ್ದಾರೆ. ಅವರ ಅಭಿಪ್ರಾಯದಂತೆ ಅವು ಜೀನವದ ದುಃಖಗಳನ್ನು ಮತ್ತು ಪರಿಣಾಮವಾಗಿ ಪ್ರಪಂಚದಲ್ಲಿ ಜನನ ಮತ್ತು ಮರಣಗಳ ಚಕ್ರವನ್ನು ಕೊನೆಗಾಣಿಸುವ ಅಗತ್ಯತೆಯನ್ನು ಒತ್ತಿಹೇಳುತ್ತಿವೆ. ಈ ಗ್ರಂಥಗಳು ಪ್ರಪಂಚವನ್ನು ಮಿಥ್ಯೆಯೆಂದು ಅವುಗಳ ಪರಿಗಣಿಸುವುದಾಗಿಯೂ ಮತ್ತು ಪರಿಣಾಮವಾಗಿ ಬೋಧನೆಗಳು ನೀತಿವಿರೋಧಿ ಲಕ್ಷಣವುಳ್ಳವೆಂದೂ ಅವರು ತಿಳಿಸುತ್ತಾರೆ. ಅವು ತನ್ನ ಸಹಮಾನವರ ಏಳಿಗೆಗೆ ಗಮನಹರಿಸುವುದಕ್ಕಿಂತಲೂ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಮೋಕ್ಷವನ್ನು ಹುಡುಕುವ ಕರ್ತವ್ಯವನ್ನೇ ಹೆಚ್ಚಾಗಿ ವಿಧಿಸುತ್ತವೆಯೆಂದು ಹೇಳಲಾಗಿದೆ. ಈ ಭಾರತೀಯ ಉದ್ಗ್ರಂಥಗಳ ಬೋಧನೆಗಳನ್ನು ಕುರಿತಂತೆ ಈ ಅಭಿಪ್ರಾಯದ ಪ್ರಮುಖ ಪ್ರತಿಪಾದಕನೆಂದರೆ ಡಾ॥ ಆಲ್ಬರ್ಟ್ ಶ್ವೈಟ್ಜರ್. ಆತ ತನ್ನ 'ಭಾರತೀಯ ದರ್ಶನ ಮತ್ತು ಅದರ ಬೆಳವಣಿಗೆ' (*Indian Thought and its Development*) ಎಂಬ ತನ್ನ ಗ್ರಂಥದಲ್ಲಿ ಈ ವಿಚಾರದ ಬಗ್ಗೆ ವಿಸ್ತಾರವಾದ ವಿವರಣೆ ನೀಡಿದ್ದಾನೆ. 'ಬ್ರಾಹ್ಮಣರ ಅಧ್ಯಾತ್ಮ ದರ್ಶನ ಮತ್ತು ನೀತಿ' (Brahamanic mysticism and Ehtics) ಯನ್ನು ಕುರಿತ ಅಧ್ಯಾಯದಲ್ಲಿ ೪೫ನೆಯ ಪುಟದಲ್ಲಿ ಡಾ॥ ಶ್ವೈಟ್ಜರ್ ಈ ಮುಂದಿನ ಅಭಿಪ್ರಾಯವನ್ನು ಮಂಡಿಸುತ್ತಾನೆ: 'ವ್ಯಕ್ತಿಯೊಬ್ಬನ ಸಹಮಾನವರನ್ನು ಕುರಿತ ಪ್ರೀತಿ ಮತ್ತು ಅನುಕಂಪೆ ಈ ನೀತಿಗ್ರಂಥಗಳ ವ್ಯಾಪ್ತಿಗೆ ಹೊರತಾದುದು' (ಬ್ರಾಹ್ಮಣರ ನೀತಿಶಾಸ್ತ್ರಕ್ಕೆ ಅನ್ವಯಿಸಿದಂತೆ). ಬ್ರಾಹ್ಮಣರ ಆಧ್ಯಾತ್ಮದರ್ಶನಕ್ಕೆ ನೀತಿಯೊಂದಿಗೆ ಯಾವುದೇ ಸಂಬಂಧವಿಲ್ಲ ಎಂದು ಆತ ನುಡಿಯುತ್ತಾನೆ. ಅದು ಆಮೂಲಾಗ್ರವಾಗಿ ನೀತ್ಯತೀತವಾದುದು. "ತತ್ತ್ವಮಸಿ" ಎಂಬ ಸಿದ್ಧಾಂತಕ್ಕೂ ನೈತಿಕ ನಿರ್ದೇಶಗಳನ್ನು ನೀಡಿಲ್ಲ. ಇತರರೊಡನೆ ವ್ಯಕ್ತಿಯೊಬ್ಬನ ಸಂಬಂಧವನ್ನು ಹೋಲಿಸುವುದರಿಂದ ವ್ಯಕ್ತಿಯೊಬ್ಬನು ಅವರ ಬಗ್ಗೆ ಅನುಕಂಪೆಯುಳ್ಳವನಾಗಿರಬೇಕು ಮತ್ತು ಅವರ ಬಗ್ಗೆ ದಯೆಯುಳ್ಳವನಾಗಿರಬೇಕು ಎಂಬುದನ್ನು ಈ ನೀತಿ ಗ್ರಂಥಗಳು ನಿರ್ಬಂಧಪಡಿಸುವುದಿಲ್ಲ. 'ಪೌರ್ವಾತ್ಯ ಧರ್ಮಗಳು ಮತ್ತು ಪಾಶ್ಚಾತ್ಯ ಚಿಂತನೆ'

(*Eastern Religions and Western Thought*) ಎಂಬ ತಮ್ಮ ಗ್ರಂಥದಲ್ಲಿ ಡಾ॥ ರಾಧಾಕೃಷ್ಣನ್ ಹಿಂದೂ ಆದರ್ಶವನ್ನು ಕುರಿತ ಈ ಟೀಕೆಯ ಬಗ್ಗೆ ನಿರ್ದಿಷ್ಟವಾಗಿ ಪ್ರಸ್ತಾಪಿಸುತ್ತಾರೆ. ೭೪ನೆಯ ಪುಟದಲ್ಲಿ ಈ ಟೀಕೆಯ ವಾಸ್ತವಾಂಶವನ್ನು ಹೀಗೆ ವಿಶದೀಕರಿಸುತ್ತಾರೆ: 'ದುರದೃಷ್ಟವಶಾತ್ ಇತ್ತೀಚೆಗೆ ಪೌರ್ವಾತ್ಯ ಅಧ್ಯಾತ್ಮದರ್ಶನವನ್ನು ಪಾಶ್ಚಾತ್ಯದಿಂದ ಬೇರ್ಪಡಿಸುವ ಮನೋಭಾವ ಹೆಚ್ಚಾಗುತ್ತಲಿದೆ, ಅಥವಾ ಯಥಾವತ್ತಾಗಿ ಹೇಳುವುದಾದರೆ, ಎರಡನೆಯದರ ಮಹತ್ತಾದ ನೈತಿಕ ಗಾಂಭೀರ್ಯದೊಂದಿಗೆ ಮೊದಲನೆಯದರ ನೈತಿಕ ಔದಾಸೀನ್ಯದ ವೈಲಕ್ಷಣ್ಯದಿಂದ ಹಿಂದು ಅಧ್ಯಾತ್ಮ ದರ್ಶನವನ್ನು ಕ್ರೈಸ್ತ ಮತದಿಂದ ಬೇರ್ಪಡಿಸಲಾಗುತ್ತಿದೆ. ಕ್ರಿಸ್ತಮತದ ಚಿಂತನೆ ಕ್ರಿಯಾತ್ಮಕವಾದುದು ಮತ್ತು ಸೃಜನಶೀಲವಾದುದೆಂದು ಹೇಳಲಾಗಿದೆ. ಅದು ಪ್ರಪಂಚದ ವಾಸ್ತವತೆಯನ್ನು ಮತ್ತು ಜೀವನದ ಅರ್ಥಪೂರ್ಣತೆಯನ್ನು ದೃಢೀಕರಿಸುತ್ತಿದೆ. ಮತ್ತೊಂದೆಡೆ ಹಿಂದೂ ಚಿಂತನೆಯು ಪ್ರಪಂಚದ ವಾಸ್ತವತೆಯ ನಿರಾಕರಣೆಗೂ ಮಾನವಜೀವನದ ಹತಾಶೆಗೂ, ಆಲೋಚನೆ ಮತ್ತು ಕ್ರಿಯೆಗಳ ನಿಜವಾದ ಒರತೆಗಳಿಗೆ ಕೆಡುಕುಂಟುಮಾಡುವುದಕ್ಕೂ ಮತ್ತು ಸಾವು ಹಾಗೂ ಅಮರತ್ವವನ್ನು ಉನ್ನತಗೊಳಿಸುವುದಕ್ಕೂ ತೊಡಗಿರುವುದಾಗಿ ಹೇಳಲಾಗಿದೆ. ಅದು ಉನ್ನತ ಗುರಿಗಳತ್ತ ನಿರ್ದೇಶಿತವಾದ ಅಧಿಕಾರ ಮತ್ತು ಸಂಕಲ್ಪವನ್ನು ಸೃಷ್ಟಿಮಾಡುವುದಿಲ್ಲ. ಈ ವೈಲಕ್ಷಣ್ಯದ ಸ್ವಭಾವಸೂಚಕವಾದ ಹೇಳಿಕೆ ಡಾ॥ ಶ್ವೈಟ್ಜರನ ಭಾರತೀಯ ಚಿಂತನೆಯ ವಿವರದಲ್ಲಿ ಕಾಣಬರುತ್ತದೆ.' ಜೀವನ– ದೃಢೀಕರಣದ ಪ್ರಪಂಚ ಸಾಮಾಜಿಕ ಸೇವೆಯಲ್ಲಿ ಪರಿಣಾಮಗೊಳ್ಳುತ್ತದೆಯಾದರೆ, ಜೀವನ ನಿರಾಕರಣೆಯ ಮತ್ತೊಂದು ಪ್ರಪಂಚ ಪ್ರಪಂಚದಲ್ಲಿ ಯಾವುದೇ ಆಸಕ್ತಿಯನ್ನು ವಹಿಸುವುದಿಲ್ಲ. ಅದು ಪ್ರಪಂಚವನ್ನೇ ಒಂದು ರಂಗಕೃತಿಯೆಂದೂ ಅಥವಾ ಹೆಚ್ಚೆಂದರೆ ದಿಗ್ಭ್ರಮೆಗೊಳಿಸುವ ಅನಂತವನ್ನು ಕುರಿತ ಯಾತ್ರೆಯೆಂದು ಶ್ವೈಟ್ಜರನು ಅಭಿಪ್ರಾಯಹೊಂದಿರುವುದಾಗಿ ಡಾ॥ ರಾಧಾಕೃಷ್ಣನ್ ಮುಂದುವರಿದು ಸೂಚಿಸುತ್ತಾರೆ.

ನಮ್ಮ ಹಿಂದೂಧರ್ಮ ಜೀವನದ ನಾಲ್ಕು ಹಂತಗಳನ್ನು ಅಂಗೀಕರಿಸಿ ವಿಧಿಸುತ್ತದೆ. ಕೊನೆಯದು ಮಾತ್ರ ಸನ್ಯಾಸ ಅಥವಾ ಕುಟುಂಬ ಮತ್ತು ಪ್ರಪಂಚವನ್ನು ಸಂಪೂರ್ಣವಾಗಿ ತೊರೆಯುವಂತಹುದಾಗಿರುವುದನ್ನು ಈ ಸಂದರ್ಭದಲ್ಲಿ ಸೂಚಿಸಬೇಕಾಗಿದೆ. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ಈ ನಾಲ್ಕನ್ನೂ ಅನುಭವಿಸಬೇಕು. ಪ್ರತಿಯೊಬ್ಬ ವ್ಯಕ್ತಿಯೂ, ತತ್ಕಾಲಕ್ಕೆ ಆತ ಜೀವನದ ಯಾವುದೇ ಹಂತದಲ್ಲಿದ್ದರೂ ಕ್ರಿಯಾಶೀಲ ಕಾರ್ಯವನ್ನು ಕೈಗೊಳ್ಳಲೇಬೇಕು, ಮತ್ತು ಈಗಾಗಲೇ ಉಲ್ಲೇಖಿತವಾಗಿರುವ ಎಲ್ಲ ಐದು ದೈನಂದಿನ ಕರ್ತವ್ಯಗಳನ್ನೂ ಈಡೇರಿಸಬೇಕು. ಪ್ರಪಂಚದಲ್ಲಿಯೇ ಇದ್ದರೂ ಕ್ರಿಯಾಶೀಲ ಬದುಕಿನಿಂದ ಪ್ರತ್ಯೇಕಗೊಂಡಿರುವವನಿಗೆ ವಾನಪ್ರಸ್ಥದ ಹಂತ ಕೇವಲ ಒಂದು ಸಿದ್ಧತೆ ಮಾತ್ರ. ಆದ್ದರಿಂದಲೇ ಹಿಂದೂ

ಚಿಂತನೆ ಪ್ರತಿಯೊಬ್ಬನೂ ಬದುಕು ಅಥವಾ ಪ್ರಪಂಚವನ್ನು ತೊರೆಯಲೇಬೇಕೆಂದು ಅಪೇಕ್ಷಿಸುವುದಿಲ್ಲ. ಕೇವಲ ಕೊನೆಯ ಹಂತದಲ್ಲಿ ಸಾವಿಗೆ ಮುಂಚಿತವಾಗಿ ಅಮರತ್ವದ ಪ್ರಾಪ್ತಿಗೆ ಸಿದ್ಧತೆಯೆಂಬಂತೆ ಸಮಗ್ರ ಸನ್ಯಾಸಕ್ಕೆ ಮತ್ತು ಆತ್ಮಜ್ಞಾನದ ಅನ್ವೇಷಣೆಗೆ ಅನುಶಾಸನವನ್ನು ಪಡೆದಿದ್ದರೂ ಭಗವದ್ಗೀತೆಯ ಪ್ರಕಾರ ಆತ ಪ್ರಪಂಚದ ಅಭ್ಯುದಯಕ್ಕಾಗಿ ಕಾರ್ಯನಿರತನಾಗಿರಬೇಕು.

ಕರ್ಮಣೈವ ಹಿ ಸಂಸಿದ್ಧಿ ಮಾಸ್ಥಿತಾ ಜನಕಾದಯಃ ।
ಲೋಕಸಂಗ್ರಹಮೇವಾಪಿ ಸಂಪಶ್ಯನ್ಕರ್ತುಮರ್ಹಸಿ ॥
ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷುಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತಏವ ಚ ಕರ್ಮಣಿ ॥

(*ಭಗವದ್ಗೀತೆ* ೩:೨೩ ಮತ್ತು ೨೨)

ಪರಮಾತ್ಮನು ತಾನು ಪ್ರಪಂಚದಲ್ಲಿ ಪಡೆಯಬೇಕಾದುದಾಗಲಿ ಅಥವಾ ಬಯಸಬೇಕಾದುದಾಗಲಿ ಯಾವುದೂ ಇಲ್ಲ. ಆದರೂ ತಾನು ಪ್ರಪಂಚದ ಅಭ್ಯುದಯಕ್ಕಾಗಿ ಕಾರ್ಯನಿರತನಾಗಿರುವುದಾಗಿಯೂ ಮತ್ತು ಮಾನವಕುಲದ ಅಭ್ಯುದಯಕ್ಕಾಗಿ ಕಾರ್ಯವೆಸಗುವ ಉದ್ದೇಶದಿಂದ ತಾನೇ ಅವತಾರಗಳನ್ನು ತಳೆಯುವುದಾಗಿಯೂ ತಿಳಿಸುವಮಟ್ಟಿಗೆ ಸಾಗುತ್ತಾನೆ.

ಈಶಾವಾಸ್ಯ ಉಪನಿಷತ್ತು ಸ್ಪಷ್ಟವಾಗಿ ಸಾರುವುದೇನೆಂದರೆ ವ್ಯಕ್ತಿಯೊಬ್ಬನು ಕಾರ್ಯದಲ್ಲಿ ತೊಡಗಿರಬೇಕು ಮತ್ತು ಪೂರ್ಣ ನೂರು ವರ್ಷಗಳೂ ಬದುಕಿರಲು ಬಯಸಬೇಕು.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಶೇಚ್ಛತಂ ಸಮಾಃ ।
ಏವಂ ತ್ವಯಿ ನಾನ್ಯತೋಽಸ್ತಿ ನ ಕರ್ಮಲಿಪ್ಯತೇ ನರೇ ॥

ಆದರೆ, ಪ್ರಪಂಚದಲ್ಲಿ ಆತ ಬಾಳ್ವೆಯನ್ನು ನಡೆಸಬೇಕಾದ ಮನೋಭಾವವಿರಬೇಕಾದುದು ಹೇಗೆಂಬುದನ್ನು ಉಪನಿಷತ್ತಿನ ಮೊದಲನೆಯ ಸಾಲು ತಿಳಿಸುತ್ತದೆ. 'ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ಪ್ರತಿಯೊಂದು ಭಗವಂತನಿಂದ ಆಚ್ಛಾದಿತವಾಗಿದೆ.'

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿದ್ಧನಮ್ ॥

ಸುಸ್ಪಷ್ಟವಾಗಿ ಹೇಳುವುದಾದಲ್ಲಿ ನಾವು ಎಲ್ಲದರಲ್ಲಿಯೂ ಭಗವಂತನ ಅಸ್ತಿತ್ತ್ವವನ್ನು ಕಾಣಬೇಕು ಮತ್ತು ಅದಕ್ಕನುಗುಣವಾಗಿ ನಮ್ಮ ಕಾರ್ಯವನ್ನು ನಿರ್ವಹಿಸಬೇಕು.

ಮಹಾತ್ಮಾ ಗಾಂಧಿಯವರು ತಮ್ಮ ಜೀವನಸಾಧನೆಗೆ ಉಪನಿಷತ್ತಿನ ಈ ಸಾಲನ್ನು ತಮ್ಮ ಮುಖ್ಯ ಆದರ್ಶವಾಕ್ಯವನ್ನಾಗಿ ಆಯ್ದುಕೊಂಡರು. ವೇದವ್ಯಾಸರು ರಚನಕಾರರಾಗಿರುವ 'ಬ್ರಹ್ಮಸೂತ್ರ' ತಮ್ಮ ಮುಕ್ತಿಗಾಗಿ ಲೆಕ್ಕಿಸದಿದ್ದ, ಆದರೆ ಮಾನವ ಕುಲದ ಅಭ್ಯುದಯಕ್ಕಾಗಿ ಕಾರ್ಯವೆಸಗಲು ಪ್ರಪಂಚದಲ್ಲಿ ಯಾವಾಗಲೂ ವಾಸವಾಗಿದ್ದವರ ಅಸ್ತಿತ್ವವನ್ನು ಗಣನೆಗೆ ತೆಗೆದುಕೊಂಡಿದೆಯೆಂಬುದನ್ನು ಗಮನಿಸಲೇಬೇಕು. ಅಂತಹ ವ್ಯಕ್ತಿಗಳನ್ನು । ಆಧಿಕಾರಿಕಪುರುಷ'ರೆಂದು ಕರೆಯಲಾಗಿದೆ.

ಯಾವದಧಿಕಾರಂ ಅವಸ್ಥಿತಿಃ ಅಧಿಕಾರಿಕಾಣಾಮ್ ।

'ತತ್ತ್ವಮಸಿ' – 'ಅದು ನೀನೇ ಆಗಿದ್ದೀಯೆ' ಎಂಬ ಹೇಳಿಕೆಗೆ ನೈತಿಕ ನಿರ್ದೇಶನಗಳನ್ನು ನೀಡಲಾಗಿಲ್ಲ ಎಂಬ ಹೇಳಿಕೆಯನ್ನು ಮುಂದಿರಿಸಿದಾಗ ಡಾ॥ ಶ್ವೈಟ್ಜರ್‌ನೂ ತಪ್ಪನ್ನೆಸಗಿದ್ದಾನೆ. ಮತ್ತೊಂದೆಡೆ ಉಪನಿಷತ್ತುಗಳ ಮೇಲೆ ವಿಶೇಷವಾಗಿ ಕೃತಿರಚನೆ ಮಾಡಿರುವ ಶ್ರೇಷ್ಠ ಪೌರಸ್ತ್ಯ ವಿದ್ವಾಂಸ ಡಾ॥ ಪಾಲ್ ಡಾಯ್ಸನ್ 'ಅದು ನೀನೇ ಆಗಿದ್ದೀಯೆ' ಎಂಬ ತತ್ತ್ವವಾಕ್ಯ ಮೂರು ಪದಗಳಲ್ಲಿ ಅಧ್ಯಾತ್ಮಶಾಸ್ತ್ರ ಮತ್ತು ನೀತಿಶಾಸ್ತ್ರದ ಸಂಯೋಜಿತ ಮೊತ್ತವನ್ನು ನೀಡುವುದೆಂಬ ಅಭಿಪ್ರಾಯವುಳ್ಳವನಾಗಿದ್ದಾನೆ. ಆತನೇ ನೀಡಿರುವ ಅದರ ಅರ್ಥವೇನೆಂದರೆ, 'ನೀನು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು, ಏಕೆಂದರೆ ನೀನು ನಿನ್ನ ನೆರೆಯವನೇ ಆಗಿದ್ದೀಯೆ. 'ಈ ಮಹತ್ತ್ವಪೂರ್ಣವಾದ ತತ್ತ್ವವಾಕ್ಯಕ್ಕೆ ಶ್ರೀ ಶಂಕರಾಚಾರ್ಯರು ತಮ್ಮ 'ಮೋಹಮುದ್ಗರ' ಕಾವ್ಯದ ಈ ಮುಂದಿನ ಮಾತುಗಳಲ್ಲಿ ನೈತಿಕತೆಯ ವ್ಯಾಪ್ತಿಯನ್ನು ನೀಡಿದ್ದಾರೆ: 'ನಿನ್ನಲ್ಲಿ ಮತ್ತು ನನ್ನಲ್ಲಿ ನೆಲೆಸಿರುವ ವಿಷ್ಣು ಒಬ್ಬನೇ. ಸಹನೆಯಿಲ್ಲದೆ ನೀನೇಕೆ ಅನಗತ್ಯವಾಗಿ ಇತರರೊಂದಿಗೆ ಕೋಪಮಾಡಿಕೊಳ್ಳುವೆ?'

ತ್ವಯಿ ಮಯಿ ಚ ಏಕೋ ವಿಷ್ಣುಃ ವ್ಯರ್ಥಂ ಕುಪ್ಯಸಿ ಕಿಮಸಹಿಷ್ಣುಃ ।

'ಯಾರು ಎಲ್ಲದರಲ್ಲಿಯೂ ತಾನೇ ಇರುವುದಾಗಿಯೂ ಮತ್ತು ಎಲ್ಲವೂ ತನ್ನಲ್ಲಿಯೇ ಇರುವುದಾಗಿಯೂ ತಿಳಿಯುವನೋ ಆತ ತನ್ನಿಂದ ತನಗೇ ಗಾಸಿಮಾಡಿಕೊಳ್ಳುವುದಿಲ್ಲ' ಎಂದು ಭಗವದ್ಗೀತೆಯು ಹೇಳುತ್ತದೆ.

ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಂ ।
ನ ಹಿ ನ ಸ್ತ್ಯಾತ್ಮನಾತ್ಮಾನಂ ತತೋ ಯಾತಿ ಪರಾಂ ಗತಿಮ್ ॥

'ಬ್ರಹ್ಮಸೂತ್ರ'ಗಳಲ್ಲಿ ಮೊದಲನೆಯದು, ಅಂದರೆ 'ಅಥಾತೋ ಬ್ರಹ್ಮಜಿಜ್ಞಾಸಾ'ದ ಮೇಲಣ ತಮ್ಮ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು 'ಅಥ' ಅಂದರೆ ಅನಂತರ ಎಂಬ ಪದದಿಂದ ಸೂಚಿತವಾಗಿರುವ ಅರ್ಥದ ಬಗ್ಗೆ ತಿಳಿಸುತ್ತಾರೆ. ಅವರು 'ಯಾವುದರ ನಂತರ?' ಎಂಬ ಪ್ರಶ್ನೆಯನ್ನೊಡ್ಡಿ

‘ಸಾಧನಚತುಷ್ಟಯಸಂಪತ್ತ್ಯನಂತರಮ್’; ‘ಮನುಷ್ಯನು ನೈತಿಕ ಪರಿಪೂರ್ಣತೆಯನ್ನು ಪಡೆದ ಬಳಿಕ ಮತ್ತು ನಿರ್ಲಿಪ್ತತೆ ಮತ್ತು ನಿರಿಚ್ಛೆಯ ಭಾವನೆಯನ್ನು ಬೆಳೆಸಿಕೊಂಡ ಬಳಿಕ ಆತ್ಮಜ್ಞಾನದ ಉಪದೇಶಕ್ಕೆ ಅರ್ಹನಾಗುತ್ತಾನೆ’ ಎಂದು ಉತ್ತರಿಸುತ್ತಾರೆ. ವೇದಾಂತದ ಚಿಂತನೆ ನೀತಿಶಾಸ್ತ್ರದ ಅಡಿಪಾಯದ ಮೇಲೆ ನಿರ್ಮಾಣಗೊಂಡಿದೆ. ಆದ್ದರಿಂದ ಸರಿಯಾಗಿ ಅರ್ಥಮಾಡಿಕೊಂಡಾಗ ಹಿಂದೂ ಚಿಂತನೆ ಪ್ರಪಂಚವನ್ನು ನಿರಾಕರಿಸುವಂತಹುದಾಗಿರಲೇ ಇಲ್ಲ. ಹಿಂದೂ ಚಿಂತನೆ ವೈಯಕ್ತಿಕ ಮೋಕ್ಷಕ್ಕೆ ಪ್ರಾಧಾನ್ಯ ನೀಡುವುದೆಂಬ ಆರೋಪಕ್ಕೆ ಸಂಬಂಧಿಸಿದಂತೆ, ಈಗಾಗಲೇ ಸೂಚಿಸಿರುವಂತೆ, ರಂತಿದೇವನು ತಾನು ತನ್ನದೇ ಮೋಕ್ಷವನ್ನು ಲೆಕ್ಕಿಸುವುದಿಲ್ಲವೆಂದೂ, ಆದರೆ ಇತರರೊಡನೆ ಅವರ ಸಂಕಟ ಮತ್ತು ಯಾತನೆಯನ್ನು ಪರಿಹರಿಸುವ ಕರ್ತವ್ಯದಲ್ಲಿ ಭಾಗಿಯಾಗಲು ಮಾತ್ರ ಇಚ್ಛಿಸುವುದಾಗಿ ಸಾರುತ್ತಾನೆ. ಹಿಂದೂ ಚಿಂತನೆ ಮೋಕ್ಷವನ್ನು ಎಲ್ಲ ಮಾನವಚಟುವಟಿಕೆಗಳ ಅಂತಿಮ ಗುರಿಯೆಂದು ಸೂಚಿಸುತ್ತದೆ. ಆದರೆ ಅದು ಆ ಕಾರಣದಿಂದ ಪ್ರಪಂಚದ ನಿರಾಕರಣೆಯನ್ನು ಪ್ರತಿಪಾದಿಸುವುದಿಲ್ಲ.

* * * *

೩೨. ಸ್ವಾಮಿ ವಿವೇಕಾನಂದರ ಕರೆ

ನಮ್ಮ ಪ್ರಾಚೀನ ಭಾರತೀಯ ಉದ್ಗ್ರಂಥಗಳು ಮಹತ್ತ್ವ ನೀಡಿರುವ ಮಾನವಹಿತಕಾರಿಯಾದ ಶ್ರೇಷ್ಠ ಆದರ್ಶಗಳನ್ನು ಅರಿತಿದ್ದ ಮತ್ತು ಭಾರತೀಯ ಆಧ್ಯಾತ್ಮಿಕ ಚಿಂತನೆಯ ನಿಜವಾದ ಸತ್ತ್ವವನ್ನು ಮನಗಂಡಿದ್ದ ಸ್ವಾಮಿ ವಿವೇಕಾನಂದರು ತಮ್ಮ ದೇಶಬಾಂಧವರಿಗೆ ಸೇವಾಧರ್ಮದ ಸಿದ್ಧಾಂತವನ್ನು ನಿರರ್ಗಳವಾದ ಮಾತುಗಳಿಂದ ಬೋಧಿಸಿದರು. ಸನ್ಯಾಸಿಯ ಜೀವನವನ್ನು ಅಂಗೀಕರಿಸಿದ್ದರೂ, ಅಂದರೆ ತಮ್ಮ ಕುಟುಂಬ ಮತ್ತು ಇತರ ಲೌಕಿಕ ಬಯಕೆಗಳನ್ನು ತ್ಯಾಗ ಮಾಡಿಯೂ ನಿರ್ಗತಿಕರಿಗಾಗಿ ಸೇವಾಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಸದಸ್ಯರನ್ನೊಳಗೊಂಡಿದ್ದ ಶ್ರೀರಾಮಕೃಷ್ಣ ಧಾರ್ಮಿಕ ಸಂಸ್ಥೆಯನ್ನು ಸ್ಥಾಪಿಸಿದರು. ನಮ್ಮ ದೇಶದಲ್ಲಿ ಕ್ಷಾಮ, ಬಿರುಗಾಳಿ ಅಥವಾ ಇತರೆ ವಿಪತ್ತುಗಳ ಕಾರಣದಿಂದ ನಿರ್ಗತಿಕರಿಗೆ ಪರಿಹಾರ ನೀಡಬೇಕಾದ ಅಗತ್ಯ ಯಾವಾಗಲೇ ಒದಗಿಬರಲಿ ರಾಮಕೃಷ್ಣ ಧಾರ್ಮಿಕ ಸಂಸ್ಥೆಯ ಸದಸ್ಯರು ಮುಂದೆ ಬಂದು ನಿಸ್ವಾರ್ಥವಾಗಿ ಕಾರ್ಯ ಮತ್ತು ಸೇವೆಯನ್ನು ಮಾಡುತ್ತಾರೆ. ಸ್ವಾಮಿ ವಿವೇಕಾನಂದರ ಪರಮ ಗುರು ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಸಂದೇಶವನ್ನು ಸಾರಿದುದು ಹೀಗೆ: ‘ಪ್ರತಿಯೊಂದು ಜೀವವೂ ಶಿವನೇ, ಮತ್ತು ನೀವು ಜೀವಕ್ಕೆ ನೆರವು ಮತ್ತು ಸೇವೆಯನ್ನು ಸಲ್ಲಿಸಿದಾಗ ನೀವು ವಾಸ್ತವವಾಗಿ ಶಿವನನ್ನೇ ಆರಾಧಿಸುತ್ತಿರುವಿರಿ.’ ತಮ್ಮ ಗುರುವಿನ ಈ ಹೇಳಿಕೆಯ ಮೇಲೆಯೇ ತಮ್ಮೆಲ್ಲ ಉಪದೇಶವನ್ನೂ ಆಧರಿಸಿದ ಸ್ವಾಮಿ ವಿವೇಕಾನಂದರು ‘ಭಗವಂತನನ್ನು ನೀವು ಕಾಣಬೇಕೆಂದಿದ್ದರೆ ಮಾನವಸೇವೆ ಮಾಡಿ’ ಎಂದು ನುಡಿದರು. ‘ನಮ್ಮೊಳಗೆ ನಂಬಿಕೆ, ರಾಷ್ಟ್ರೀಯ ಆತ್ಮಗೌರವ ಮತ್ತು ಅನ್ನದಾನ ಮಾಡುವ ಸಾಮರ್ಥ್ಯ, ನಿರ್ಗತಿಕರಿಗೆ ವಿದ್ಯೆ ನೀಡುವ ಮತ್ತು ನಮ್ಮ ಸುತ್ತಲಿರುವ ಜನರ ಸಂಕಟಗಳನ್ನು ಪರಿಹರಿಸುವುದನ್ನು ನೀಡಬಲ್ಲ ಧರ್ಮವನ್ನು ನಾನು ಬಯಸುತ್ತೇನೆ,’ ಎಂದು ಅವರು ನುಡಿದರು. ಅವರು ತಮ್ಮ ತರುಣ ಶಿಷ್ಯರಿಗೆ ಇತರರ ಸೇವೆಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳಬೇಕೆಂದು ನುಡಿದರು ಮತ್ತು ಎಲ್ಲ ಆತ್ಮಗಳ ಒಟ್ಟು ಮೊತ್ತವಾಗಿರುವ ‘ನಾನು ನಂಬಿಕೆಯಿರಿಸಿರುವ ಏಕೈಕ ದೇವರ ಆರಾಧನೆ ಮಾಡಲು ನಾನು ಸಮರ್ಥನಾಗಿರುವುದೇ ಆದರೆ ಸಹಸ್ರ ಸಂಕಷ್ಟಗಳನ್ನನುಭವಿಸಲು ನಾನು ಮತ್ತೆ ಮತ್ತೆ ಜನ್ಮ ತಳೆಯುವಂತಾಗಲಿ. ಎಲ್ಲಕ್ಕಿಂತ

ಹೆಚ್ಚಾಗಿ ಎಲ್ಲ ಜನಾಂಗಗಳ ದುಃಖಪೀಡಿತರು ಮತ್ತು ನಿರ್ಗತಿಕರೇ ನನ್ನ ದೇವರು ಎಂದು ಅವರು ಪ್ರಾರ್ಥನೆ ಸಲ್ಲಿಸಿದರು. ಮತ್ತೊಂದು ಕಡೆಯಲ್ಲಿ ಅವರು “ಮೊದಲ ಪೂಜೆ ‘ವಿರಾಟ್’ದ ಅಂದರೆ ನಮ್ಮ ಸುತ್ತಲೂ ಇರುವವರೆಲ್ಲ ಪೂಜೆ. ನಾನು ಪೂಜಿಸಬೇಕಾದ ಮೊದಲ ದೇವರು ನಮ್ಮವರೇ ಆದ ದೇಶಬಾಂಧವರು” ಎಂದು ನುಡಿಯುತ್ತಾರೆ. ತಮ್ಮ ಗುರುವಾದ ಶ್ರೀ ರಾಮಕೃಷ್ಣ ಪರಮಹಂಸರ ಬಗ್ಗೆ ಅವರು ನುಡಿಯುವುದು ಹೀಗೆ : ‘ಪ್ರತಿಯೋರ್ವನೂ ಪ್ರತಿದಿನವೂ ಹಸಿದ ನಾರಾಯಣನನ್ನು ಅಥವಾ ಹೆಳವ ನಾರಾಯಣನನ್ನು ಅಥವಾ ಕುರುಡ ನಾರಾಯಣನನ್ನು ಅಥವಾ ಅಂತಹ ಆರು ಅಥವಾ ಹನ್ನೆರಡು ಜನರನ್ನು ತಮ್ಮ ಮನೆಗಳಿಗೆ ಕರೆದೊಯ್ದು, ದೇವಸ್ಥಾನದಲ್ಲಿ ಶಿವ ಅಥವಾ ವಿಷ್ಣುವಿಗೆ ಸಲ್ಲಿಸುವಂತೆಯೇ ಅವರಿಗೆ ಆಹಾರ ನೀಡಿ ಅದೇ ಪೂಜೆಯನ್ನು ಸಲ್ಲಿಸುವುದನ್ನು ಅವರು ಬಯಸುತ್ತಿದ್ದರು.” ವೈಯಕ್ತಿಕ ಮೋಕ್ಷದ ಬಗ್ಗೆ ಸ್ವಾಮಿ ವಿವೇಕಾನಂದರು ಈ ಮುಂದಿನ ಹೇಳಿಕೆಯನ್ನು ನೀಡಿದರು: ‘ನೀವು ನಿಮ್ಮ ಮೋಕ್ಷವನ್ನು ಮಾತ್ರವೇ ಬಯಸಿದರೆ ನೀವು ನರಕಕ್ಕೆ ಹೋಗುವಿರಿ. ನೀವು ಬಯಸಬೇಕಾಗಿರುವುದು ಇತರರ ಮೋಕ್ಷವನ್ನು. ಇತರರಿಗಾಗಿ ಕಾರ್ಯವೆಸಗುತ್ತ ನೀವು ನರಕಕ್ಕೆ ಹೋಗಬೇಕಾಗಿ ಬಂದರೆ ಅದು ನಿಮ್ಮದೇ ಮೋಕ್ಷವನ್ನು ಬಯಸುವುದರಿಂದ ದೊರೆಯುವ ಲಾಭ(ಮೋಕ್ಷ)ಕ್ಕಿಂತಲೂ ಹೆಚ್ಚು ಮೌಲ್ಯವುಳ್ಳದ್ದು.’ ಅವರು ಮತ್ತೂ ತಿಳಿಸುವುದೇನೆಂದರೆ : ‘ಪಾಂಡಿತ್ಯ ಮತ್ತು ಸಕಲಶಾಸ್ತ್ರಗಳ ಅಧ್ಯಯನ ಮತ್ತು ವೈಯಕ್ತಿಕವಾಗಿ ಮುಕ್ತಿಯ ಪ್ರಾಪ್ತಿಗಾಗಿ ಮಾಡುವ ಎಲ್ಲ ಸಾಧನೆಗಳ ಅಹಂಕಾರವನ್ನು ನಾವು ಕಿತ್ತೊಗೆಯೋಣ. ನಾವೆಲ್ಲರೂ ಹಳ್ಳಿಯಿಂದ ಹಳ್ಳಿಗೆ ಹೋಗಿ ನಿರ್ಗತಿಕರ ಸೇವೆಗಾಗಿ ನಮ್ಮ ಬಾಳನ್ನು ಸಮರ್ಪಿಸೋಣ’. ಇತರರಿಗೆ ನಿಸ್ವಾರ್ಥ ಸೇವೆಯನ್ನು ಸಲ್ಲಿಸುವುದರಿಂದ ತಮ್ಮ ಪ್ರಾರ್ಥನೆಗಳ ಮೂಲಕ ಧಾರ್ಮಿಕ ವ್ಯಕ್ತಿಗಳು ಮತ್ತು ತತ್ತ್ವಶಾಸ್ತ್ರಜ್ಞರು ತಮ್ಮ ಜ್ಞಾನದ ಮೂಲಕ ತಲುಪುವ ಗುರಿಯನ್ನೇ ವ್ಯಕ್ತಿಯೊಬ್ಬನು ತಲುಪುವನೆಂದು ಅವರು ಸರಿಯಾಗಿಯೇ ಸೂಚಿಸಿದರು. ಭಗವದ್ಗೀತೆಯು ಸೂಚಿಸಿರುವ ರೀತಿಯಲ್ಲಿಯೇ ಸ್ವಾಮಿ ವಿವೇಕಾನಂದರು, ‘ಅಂತಿಮ ಬಿಡುಗಡೆಯ ಹೊಸ್ತಿಲನ್ನು ತಲುಪಿರುವ ಮಹಾಪುರುಷ ಅಥವಾ ಸಂತನೂ ತನ್ನ ಹೆಜ್ಜೆಗಳನ್ನು ಬಂದ ದಾರಿಯಲ್ಲಿಯೇ ಹಿಂದಿರುಗಿಸಿ, ಮಾರ್ಗದ ಮಧ್ಯೆ ಪತಿತರಾಗಿರುವ ಅಥವಾ ಹಿಂದೆ ಉಳಿದಿರುವ ತಮ್ಮ ಸೋದರರಿಗೆ ನೆರವಾಗಬೇಕು. ಇತರರ ಸಾಕ್ಷಾತ್ಕಾರಕ್ಕೆ ನೆರವಾಗುವ ಉದ್ದೇಶಕ್ಕಾಗಿ ತನ್ನ ಸಾಕ್ಷಾತ್ಕಾರವನ್ನೇ ತೊರೆಯಲು ಸಿದ್ಧನಾಗಿರುವವನೇ ಅತ್ಯಂತ ಶ್ರೇಷ್ಠವಾದ ವ್ಯಕ್ತಿ’ ಎಂದು ನುಡಿದಿದ್ದಾರೆ. ಅದೂ ಅಲ್ಲದೆ, ಪ್ರತಿಯೋರ್ವ ವ್ಯಕ್ತಿಯು ಎರಡು ಅತಿರೇಕಗಳ ನಡುವೆ ಸುವರ್ಣಮಾಧ್ಯಮವನ್ನು ಅಂಗೀಕರಿಸಲೇಬೇಕೆಂದು ಅವರು ಸೂಚಿಸಿದ್ದಾರೆ. ‘ವ್ಯಕ್ತಿಯೋರ್ವನು ಸತ್ಯವನ್ನರಿಯದೆ ಪ್ರಪಂಚದ ಐಷಾರಾಮದಲ್ಲಿ ದುಡುಕಿನಿಂದ

ಮುಳುಗಿದಲ್ಲಿ ಆತ ತನ್ನ ಭದ್ರತೆಯನ್ನು ಕಳೆದುಕೊಳ್ಳುತ್ತಾನೆ. ಮತ್ತೊಂದೆಡೆ, ಆತ ಪ್ರಪಂಚವನ್ನು ಶಪಿಸಿ ಅರಣ್ಯದೊಳಗೆ ನಡೆದರೆ ತನ್ನ ದೇಹವನ್ನು ದಂಡಿಸುತ್ತಾನೆ ಮತ್ತು ಹೊಟ್ಟೆಗಿಲ್ಲದೆ ಸ್ವಲ್ಪ ಸ್ವಲ್ಪವಾಗಿ ತನ್ನನ್ನೇ ಕೊಂದುಕೊಳ್ಳುತ್ತಾನೆ, ತನ್ನ ಹೃದಯವನ್ನು ನಿಷ್ಪ್ರಯೋಜಕ ಕಳಪೆವಸ್ತುವನ್ನಾಗಿ ಮಾಡುತ್ತಾನೆ, ಭಾವನೆಯನ್ನು ನಾಶಗೊಳಿಸುತ್ತಾನೆ. ಮತ್ತು ಒರಟನೂ ಕ್ರೂರಿಯೂ ಮತ್ತು ನಿರ್ಭಾವದವನೂ ಆಗಿ ಪರಿಣಮಿಸುತ್ತಾನೆ; ಆತನೂ ತನ್ನ ಗುರಿಯನ್ನು ಕಳೆದುಕೊಳ್ಳುತ್ತಾನೆ.’ ತರುಣನೊಬ್ಬನು ಮನಃಶಾಂತಿಯನ್ನು ಪಡೆಯುವುದಕ್ಕೆ ಸ್ವಾಮಿ ವಿವೇಕಾನಂದರ ಸಲಹೆಯನ್ನು ಕೇಳಿದಾಗ ಸ್ವಾಮೀಜಿಯವರು ಅತ್ಯಂತ ಸ್ಪಷ್ಟವಾಗಿ ‘ನೀನು ಮನಃಶಾಂತಿಯನ್ನು ಬಯಸುವೆಯಾದರೆ ಅನ್ಯರ ಸೇವೆ ಮಾಡು’ ಎಂದು ಘೋಷಿಸಿದರು. ‘ನಿನ್ನ ಮನೆಯ ನೆರೆಹೊರೆಯವರಲ್ಲಿ ದುಃಖಾರ್ತರಾದ ಕೆಲವಾರು ಜನರಿದ್ದಾರೆ. ನಿನ್ನ ಸಾಮರ್ಥ್ಯಕ್ಕೆ ಮೀರಿ ಅವರ ಸೇವೆ ಮಾಡು. ಓರ್ವ ರೋಗಿಯಿದ್ದಾನೆ, ನೀನು ಆತನ ಶುಶ್ರೂಷೆ ಮಾಡುತ್ತೀಯೆ; ಮತ್ತೋರ್ವ ಉಪವಾಸದಿಂದಿದ್ದಾನೆ, ನೀನು ಆತನಿಗೆ ಆಹಾರ ನೀಡುತ್ತೀಯೆ; ಮೂರನೆಯವ ಅಜ್ಞಾನಿಯಾಗಿದ್ದಾನೆ, ನೀನಾತನಿಗೆ ಬೋಧಿಸುತ್ತೀಯೆ.’

* * * *

೩೩. ಮಹಾತ್ಮಾ ಗಾಂಧಿಯವರ ಉದಾಹರಣೆ

ಸ್ವಾಮಿ ವಿವೇಕಾನಂದರನಂತರ ಬಂದ ಮಹಾತ್ಮಾ ಗಾಂಧಿಯವರೂ ಕ್ರಿಯಾಶೀಲ ಸೇವೆಯ ಸಿದ್ಧಾಂತ ಮತ್ತು ನಿರ್ಗತಿಕರು ಮತ್ತು ಸಂಕಟದಲ್ಲಿರುವವರಿಗೆ ಸಹಾಯ ಮಾಡುವುದನ್ನೇ ಬೋಧಿಸಿದರು. ನಿರ್ಗತಿಕರಿಗೆ ಅವರು 'ದರಿದ್ರನಾರಾಯಣ' ಎಂಬ ನುಡಿಗಟ್ಟನ್ನು ಸೃಷ್ಟಿಮಾಡಿದರು. ಅವರು ರಾಜಕೀಯವನ್ನು ಆಧ್ಯಾತ್ಮಿಕಗೊಳಿಸಿದರು, ತಮ್ಮ ದೇಶಬಾಂಧವರಿಗಾಗಿ ಕಷ್ಟಗಳನ್ನನುಭವಿಸಿದರು ಮತ್ತು ಪರಕೀಯರ ಆಳ್ವಿಕೆಯಿಂದ ಅವರಿಗೆ ಸ್ವಾತಂತ್ರ್ಯವನ್ನು ನೀಡಿದರು. ಅಂತರ್ಯದಲ್ಲಿ ಸಂತರಾಗಿದ್ದ ಅವರು ತಮ್ಮ ನರನಾಡಿಯಲ್ಲಿ ಭಗವಂತನನ್ನು ಕಂಡರು ಮತ್ತು ಬಡವರಿಗಾಗಿ ಕ್ರಿಯಾಶೀಲರಾಗಿ ಕೆಲಸ ಮಾಡುವಲ್ಲಿ ತಮ್ಮ ಅಂತರ್ವಾಣಿಯಿಂದ ಮಾರ್ಗದರ್ಶನ ಪಡೆದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ತಮ್ಮ ದೇಶಬಾಂಧವರನ್ನು ನಾಯಕನಂತೆ ಮುನ್ನಡೆಸಿದರು. ಅವರು ಸತ್ಯ ಮತ್ತು ಅಹಿಂಸೆಯ ಶ್ರೇಷ್ಠ ತತ್ತ್ವಗಳನ್ನು ವಿಕಾಸಗೊಳಿಸಿದರು. ತಮ್ಮ ಪ್ರತಿಯೊಂದು ಕಾರ್ಯಗಳಿಗೂ ಈ ತತ್ತ್ವಗಳನ್ನು ಅಳವಡಿಸಿದರು. ನಮ್ಮ ಪ್ರಾಚೀನ ಉದ್ಗ್ರಂಥಗಳ ಶ್ರದ್ಧಾಪೂರ್ವಕ ಅಧ್ಯಯನದ ಬಳಿಕ, ಅವುನೀತಿಯ ಬಗ್ಗೆ ಅನಾದರಹೊಂದಿಲ್ಲವೆಂದೂ ಅಥವಾ ಅವು ನೀತ್ಯತೀತವಾದುವುಗಳೂ ಅಲ್ಲವೆಂದೂ ಅರಿತುಕೊಂಡರು. ಮತ್ತೊಂದು ದೃಷ್ಟಿಯಲ್ಲಿ ವಿನಯ, ನಿರ್ಲಿಪ್ತತೆ ಮತ್ತು ನಿಸ್ವಾರ್ಥದ ಪ್ರವೃತ್ತಿಯೊಂದಿಗೆ ಅವು ಮಾನವಕುಲಕ್ಕೆ ಪ್ರೀತಿ ಮತ್ತು ಸೇವೆಯನ್ನು ಬೋಧಿಸಿದುವೆಂದೂ ಅವರು ಭಾವಿಸಿದರು. ಪ್ರೀತಿ ಮತ್ತು ಸೇವೆ ದೈವತ್ತ್ವದ ಸಾಕ್ಷಾತ್ಕಾರಕ್ಕೆ ಖಚಿತವಾದ ಮಾರ್ಗವೆಂದೂ ಉದ್ಗ್ರಂಥಗಳು ಸೂಚಿಸುತ್ತವೆ. ಸ್ವಾಮಿ ವಿವೇಕಾನಂದರು ಬಯಸಿದಂತೆ ನಮ್ಮ ಧರ್ಮವನ್ನು ಕ್ರಿಯಾಶೀಲಗೊಳಿಸುವುದು ಮತ್ತು ನಮ್ಮ ದೇಶಬಾಂಧವರ ಏಳಿಗೆಗಾಗಿ ಸಾಮಾಜಿಕ ಸೇವೆಯನ್ನು ಸಂಘಟಿಸುವ ಎಲ್ಲ ಪ್ರಯತ್ನವನ್ನು ಕೈಗೊಳ್ಳುವುದು, ಬಡತನ ಮತ್ತು ರೋಗದ ನಿರ್ಮೂಲನೆಗಾಗಿ ಮತ್ತು ನಮ್ಮ ದೇಶದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಘನತೆ ಮತ್ತು ಆತ್ಮಗೌರವವನ್ನು ಪುನಃ ಸ್ಥಾಪಿಸುವುದು ನಮ್ಮ ಕರ್ತವ್ಯ.

* * * *